ಸಂಪುಟ: 04 ಸಂಚಿಕೆ: 332 ಪುಟಗಳು: 08 ಗುರುವಾರ 13 ಫೆಬ್ರವರಿ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಸತ್ಯದ ದಾರಿಯಲ್ಲಿ ಹೋಗು, ನೀನು ನಡೆಯುವಾಗ ಪಾತಾಳಕ್ಕೆ ಬಿದ್ದರೂ ನಿನ್ನನ್ನು ಮೇಲೆತ್ತಲು ನಾನು ಬಂದೇ ಬರುತ್ತೇನೆ.

# ಕೋಟಿ ಕೋಟಿ ಹೂಡಿಕೆ ಸರ್ಕಾರ ಒಡಂಬಡಿಕೆ

**ಕರ್ನಾಟಕದಲ್ಲಿ 8,000 ಕೋಟಿ ರೂ. ಹೂಡಿಕೆ**

**ವಿಪ್ರೋ-ಜಿಇ ಹೆಲ್ತ್ ಕೇರ್ ಘೋಷಣೆ**



ನವೋದ್ಯಮಿಗಳ ಉದ್ಯಮ ವಲಯದಲ್ಲಿ ಮೆರೆದ ಸಾಧನೆ

## ಜಿಮ್‌ನಲ್ಲಿ ಹೂಡಿಕೆ ಸಿಕ್ಸರ್; ಮೊದಲ ದಿನವೇ ಕರ್ನಾಟಕಕ್ಕೆ 6 ಲಕ್ಷ ಕೋಟಿ ರೂ.ಬೋಣಿ...!

## 'ಸೆಮಿಕಂಡಕ್ಟರ್ ಲಾಭ ನಮ್ಮದಾಗಲು ಗುಣಮಟ್ಟದ ಶಿಕ್ಷಣ, ಸಂಶೋಧನೆಯೇ ಆಧಾರ'

• ಉದಯವಾಹಿನಿ, ಬೆಂಗಳೂರು

ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶದ ಮೊದಲ ದಿನವೇ ಕರ್ನಾಟಕಕ್ಕೆ ಆರು ಲಕ್ಷ ಕೋಟಿ ರೂ. ಮೊತ್ತದ ಹೂಡಿಕೆ ಒಡಂಬಡಿಕೆ, ಭರವಸೆಗಳ ಬೂಸ್ಟರ್ ಸಿಕ್ಕಿತು. ಈ ಪೈಕಿ ನಾಲ್ಕು ಲಕ್ಷ ಕೋಟಿ ರೂ.ಗಳಿಗೂ ಅಧಿಕ ಮೊತ್ತ 'ಹಸಿರು ಇಂಧನ' ವಲಯಕ್ಕೆ ಸೇರಿರುವುದು ವಿಶೇಷ.ಅರಮನೆ ಮೈದಾನದ ಆವರಣದಲ್ಲಿ ಆಯೋಜನೆಗೊಂಡಿರುವ 15ನೇ ಆವೃತ್ತಿಯ ನಾಲ್ಕು ದಿನಗಳ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಚಾಲನೆ ನೀಡಿದರು. ಹೂಡಿಕೆಗೆ ಕರ್ನಾಟಕ ಪ್ರಶಸ್ತ ತಾಣವೆಂದು ಹೇಳುವ ಮೂಲಕ ಉದ್ಯಮ-ವಹಿವಾಟು ವಲಯಕ್ಕೆ ಉತ್ತೇಜನದ ಶಕ್ತಿ ತುಂಬಿದರು. ಮಂಡಿ ನೋವಿನ ಕಾರಣದಿಂದಾಗಿ ಸಿಎಂ ಸಿದ್ದರಾಮಯ್ಯ ಗಾಲಿ ಕುರ್ಚಿಯಲ್ಲಿ ಆಗಮಿಸಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡರು.

ರಾಜ್ಯದ ಬೃಹತ್, ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಈ ಬಾರಿ 10 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆ ನಿರೀಕ್ಷೆಯಿದೆ ಎಂದಿದ್ದರು. ಅದಕ್ಕೆ ಪೂರಕವಾಗಿ ಸಮಾವೇಶಕ್ಕೆ ಚಾಲನೆ ದಿನವೇ ನಾಲ್ಕು ಲಕ್ಷ ಕೋಟಿ ರೂ. ಮೊತ್ತದ ಒಡಂಬಡಿಕೆ, ಉಳಿದ ಎರಡು ಲಕ್ಷ ಕೋಟಿ ರೂ. ಮೊತ್ತ ಹೂಡಿಕೆಗೆ ಬದ್ಧತೆ ಮತ್ತು ಖಚಿತ ಭರವಸೆ ರಾಜ್ಯಕ್ಕೆ ಸಿಕ್ಕಿದೆ. ಹೂಡಿಕೆ ಒಪ್ಪಂದ ಮತ್ತು ಅಧಿಕೃತ ಘೋಷಣೆಯಲ್ಲಿ ಅಮೆರಿಕ, ಇಂಗ್ಲೆಂಡ್, ಜಪಾನ್, ಸಿಂಗಾಪುರ, ದಕ್ಷಿಣ ಕೊರಿಯಾ, ತೈವಾನ್ ಮತ್ತಿತರ ದೇಶಗಳು ಹಾಗೂ ಭಾರತದ ಮಹೀಂದ್ರಾ, ಅಂಡ್ ಮಹೀಂದ್ರಾ, ಜೆಎಸ್ ಡಬ್ಲ್ಯು ಸಮೂಹ ಕಂಪನಿಗಳು ಸೇರಿವೆ.



> 40ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿವೆ. ಈ ಪೈಕಿ ಜಾಗತಿಕ ಮಟ್ಟದ ಕಂಪನಿಗಳು ಮತ್ತು ಪ್ರವರ್ಧಮಾನಕ್ಕೆ ಬರುತ್ತಿರುವ ನವೋದ್ಯಮಗಳೆರಡೂ ಇವೆ. ಡ್ರೋನ್, ಬಾಹ್ಯಾಕಾಶ, ಕೃಷಿ, ಆರೋಗ್ಯ, ಉತ್ಪಾದನಾ ವಲಯ, ವೈಮಾಂತರಿಕ್ಷ, ರಕ್ಷಣೆ ಮುಂತಾದ ಕ್ಷೇತ್ರಗಳಲ್ಲಿ ಮುಂಚೂಣಿಗೆ ಬರುತ್ತಿರುವ ಆಧುನಿಕ ತಂತ್ರಜ್ಞಾನ ಧಾರೆಗಳನ್ನು ನೋಡಬಹುದು.
>
> -ಎಂ.ಬಿ.ಪಾಟೀಲ್, ಸಚಿವ

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ 13 ಕಂಪನಿಗಳು ಆಸಕ್ತಿ ತೋರಿಸಿ 3.42 ಲಕ್ಷ ಕೋಟಿ ರೂ. ಬಂಡವಾಳ ಹೂಡಿಕೆ ಒಪ್ಪಂದಕ್ಕೆ ಸಹಿ ಹಾಕಿವೆ. 78,253 ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ.

ದೇಶಗಳಿಗೆ ಸಂದೇಹವಿದ್ದರೆ ಕರ್ನಾಟಕಕ್ಕೆ ಬಂದು ನೋಡಬೇಕು. ಆಗ ಅವರ ಅನುಮಾನ ದೂರವಾಗುತ್ತದೆ ಎಂದು ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೆಮ್ಮೆಯಿಂದ ಹೇಳಿದರು. ಭಾರತದ ಶಕ್ತಿ, ಸಾಮರ್ಥ್ಯಗಳನ್ನು ಬೆಂಗಳೂರು ಮತ್ತು ಕರ್ನಾಟಕದ ಮೂಲಕ ಬೇರೆ ದೇಶಗಳು ಅರಿಯಲು ಶಕ್ತವಾಗಲಿದೆ. ಬೆಂಗಳೂರು ಹಾಗೂ ಕರ್ನಾಟಕ ಹೂಡಿಕೆದಾರರಿಗೆ ಪ್ರಶಸ್ತ ತಾಣವಾಗಿದೆ ಎಂದು ಜಾಗತಿಕ ಉದ್ಯಮಿಗಳಿಗೆ ಕರೆ ನೀಡಿದರು. ಕರ್ನಾಟಕವೂ ಸೇರಿ ಭಾರತದಲ್ಲಿ 'ರೆಡ್ ಟೇಪ್' ಯುಗಾಂತ್ಯವಾಗಿ 'ರೆಡ್ ಕಾರ್ಪೆಟ್' ಯುಗ ಆರಂಭವಾಗಿದೆ. ಮೂಲ ಸವಲತ್ತುಗಳ ಅಭಿವೃದ್ಧಿ, ಕೈಗಾರಿಕೆ-ವ್ಯಾಪಾರ ಸ್ನೇಹಿ ನೀತಿಗಳು, ಅಗತ್ಯ ಕೌಶಲಪೂರ್ಣ ಮಾನವ ಸಂಪನ್ಮೂಲಗಳು ಲಭ್ಯವಿದೆ ಎಂದು ರಾಜನಾಥ್ ಸಿಂಗ್ ಖಾತರಿಪಡಿಸಿದರು.

### ಪ್ರಮುಖ ಹೂಡಿಕೆಗಳು

- ಜೆಎಸ್ ಡಬುಯ ನಿಯೋ ಎನರ್ಜಿ ಲಿಮಿಟೆಡ್- 56 ಸಾವಿರ ಕೋಟಿ, ರಿನ್ಯೂ ಪ್ರೈ. ಲಿ., ಟಾಟಾ ಪವರ್ ರಿನಿವೇಬಲ್ ಎನರ್ಜಿ ತಲಾ 50 ಸಾವಿರ ಕೋಟಿ ಸೆರಂಟಿಕಾ ರಿನಿವೇಬಲ್ ಇಂಡಿಯಾ ಪ್ರೈ. ಲಿ.- 43,975 ಕೋಟಿ ರೂ., ಮಹೀಂದ್ರಾ ಸಸ್ಟೈನ್ ಪ್ರೈ.ಲಿ. - 35,000 ಕೋಟಿ ರೂ.
- ಸೆಮಿಕಂಡಕ್ಟರ್ ಉಪಕರಣಗಳ ತಯಾರಿಕೆಗೆ ಲ್ಯಾಮ್ ರಿಸರ್ಚ್ ಕಂಪನಿ 10 ಸಾವಿರ ಕೋಟಿ ರೂ., ಉಕ್ಕು ಉದ್ಯಮದಲ್ಲಿ ಜೆಎಸ್‌ಡಬ್ಲ್ಯು ಸಮೂಹ ಕಂಪನಿ 43 ಸಾವಿರ ಕೋಟಿ ರೂ.
- ಬಂದರು ಅಭಿವೃದ್ಧಿ, ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮಹೀಂದ್ರಾ ಅಂಡ್ ಮಹೀಂದ್ರಾ ಸಮೂಹದಿಂದ 6 ಸಾವಿರ ಕೋಟಿ ರೂ. ಅಮೆರಿಕ, ಇಂಗ್ಲೆಂಡ್, ಯೂರೋಪ್ ಕಂಪನಿಗಳು -೩;28 ಸಾವಿರ ಕೋಟಿ.
- ಜಪಾನ್, ದಕ್ಷಿಣಕೊರಿಯಾ, ಸಿಂಗಾಪುರ, ತೈವಾನ್‌ನ 15 ಕಂಪನಿಗಳು, 24,124 ಕೋಟಿ ರೂ ಹೂಡಿಕೆ, ರೋಬೋಟಿಕ್ ಬಹುಹಂತದ ಕಾರ್ ಮತ್ತು ಬಸ್ ಪಾರ್ಕಿಂಗ್‌ಗೆ ಸೋಟ್‌ಫಿನ್ ಭಾರತ್ ಕಂಪನಿ 8,500 ಕೋಟಿ ರೂ. ಹೂಡಿಕೆ

### ಮುಖ್ಯಾಂಶಗಳು

1. ಮುಂದಿನ 5 ವರ್ಷದಲ್ಲಿ 20 ಲಕ್ಷ ಉದ್ಯೋಗ ಸೃಷ್ಟಿ , ಹಿಂದುಳಿದ ಜಿಲ್ಲೆ / ತಾಲ್ಲೂಕುಗಳಿಗೆ ಒತ್ತು ನೀಡಿದ, ಕೈಗಾರಿಕಾ ಬೆಳವಣಿಗೆಗೆ ಮೂರು ವಲಯಗಳ ವ್ಯವಸ್ಥೆ ಸೃಷ್ಟಿಸಲು ಉದ್ದೇಶಿತ ನೂತನ ಕೈಗಾರಿಕಾ ನೀತಿ (2025 80 2030)
2. ಸುಧಾರಿತ ಏಕಗವಾಕ್ಷಿ ವ್ಯವಸ್ಥೆ ಪೋರ್ಟಲ್ ಲೋಕಾರ್ಪಣೆ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಆಧಾರಿತ ಉಮಾ (ಉದ್ಯೋಗಮಿತ್ರ ಅಸಿಸ್ಟೆನ್ಸ್) ನೆರವು, 30ಕ್ಕೂ ಹೆಚ್ಚು ಇಲಾಖೆಗಳ 150 ಸೇವೆಗಳು
3. ಈ ವೇದಿಕೆಯಲ್ಲಿ ಲಭ್ಯ ಕರ್ನಾಟಕ ಸರಸ್ವತಿ ಮತ್ತು ಲಕ್ಷ್ಮಿಯರನ್ನು ಮೇಲೈಸಿದ ರಾಜ್ಯವಾಗಿದೆ. ದೇಶದ ತಂತ್ರಜ್ಞಾನದ ರಾಜಧಾನಿ ಬೆಂಗಳೂರು.
4. ಇಲ್ಲಿಂದ ಸದ್ಯದಲ್ಲೇ ಕೃತಕ ಬುದ್ಧಿಮತ್ತೆ ಕ್ಷೇತ್ರದ ಪ್ರಪ್ರಥಮ ಮಾದರಿ ಕೂಡ ಹೊರಬರಲಿದೆ.
5. ಇದಕ್ಕೆಲ್ಲ ಇಲ್ಲಿರುವ ಮಾನವಸಂಪನ್ಮೂಲ, ಸಮ್ಮೃದ್ಧವಾಗಿರುವ ಪ್ರತಿಭೆ ಕಾರಣ.

**ರಾಜ್ಯಕ್ಕೆ ಭರಪೂರ ಬಂಡವಾಳ**

### 10 ಸಾವಿರ ಕೋಟಿ ಹೂಡಿಕೆ

ಲ್ಯಾಮ್ ರಿಸರ್ಚ್ ಮುಂದಿನ ಕೆಲವು ವರ್ಷಗಳಲ್ಲಿ ಕರ್ನಾಟಕದಲ್ಲಿ 10 ಸಾವಿರ ಕೋಟಿ ರೂ. ಹೂಡಿಕೆ ಮಾಡಲಿದೆ. ಇನ್ವೆಸ್ಟ್ ಕರ್ನಾಟಕ 2025 ಜಾಗತಿಕ ಸಮಾವೇಶದಲ್ಲಿ ಲ್ಯಾಮ್ ರಿಸರ್ಚ್‌ನ ಗ್ಲೋಬಲ್ ಪ್ರಾಡಕ್ಟ್ಸ್ ಗ್ರೂಪ್‌ನ ಹಿರಿಯ ಉಪಾಧ್ಯಕ್ಷ ಶೇಷಾ ವರದರಾಜನ್ ಈ ಘೋಷಣೆ ಮಾಡಿದ್ದಾರೆ.ಲ್ಯಾಮ್ ರಿಸರ್ಚ್ ಒಂದು ಅಮೆರಿಕನ್ ಕಂಪನಿಯಾಗಿದ್ದು, ಅದು ಸೆಮಿಕಂಡಕ್ಟರ್ ಉತ್ಪಾದನೆಗೆ ಅಗತ್ಯವಾದ ಸಾಧನಗಳನ್ನು ಅಭಿವೃದ್ಧಿಪಡಿಸುತ್ತದೆ. ಈ ಉಪಕರಣಗಳನ್ನು ವೇಫರ್ ಸಂಸ್ಕರಣೆ ಮತ್ತು ಸೆಮಿಕಂಡಕ್ಟರ್ ಸಾಧನಗಳ ವೈರಿಂಗ್‌ನಲ್ಲಿ ಬಳಸಲಾಗುತ್ತದೆ. ಹೂಡಿಕೆಯು ಕರ್ನಾಟಕದ ಸೆಮಿಕಂಡಕ್ಟರ್ ಪರಿಸರ ವ್ಯವಸ್ಥೆಗೆ ಒಂದು ದೊಡ್ಡ ಸೇರ್ಪಡೆಯಾಗಿದೆ. ಇದು ಈ ಕ್ಷೇತ್ರಗಳಲ್ಲಿನ ಕರ್ನಾಟಕದ ವಿಶ್ವಾಸ ಮತ್ತು ಸಾಮರ್ಥ್ಯವನ್ನು ತೋರಿಸುತ್ತದೆ. ಯೋಜಿತ ಹೂಡಿಕೆಗಾಗಿ ಕೆಐಎಡಿಬಿ ಒಡೆತನದ ಜಮೀನನ್ನು ಮೀಸಲಿಡಲು ಲ್ಯಾಮ್ ರಿಸರ್ಚ್ ಕರ್ನಾಟಕ ಸರ್ಕಾರದೊಂದಿಗೆ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿದೆ.

### ಎಕ್ಸ್-ಪೋಗೆ ಚಾಲನೆ

'ಫ್ಯೂಚರ್ ಆಫ್ ಇನ್ನೋವೇಶನ್' ಎಕ್ಸ್-ಪೋಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಜತೆಯಾಗಿ ಚಾಲನೆ ನೀಡಿದರು. ಕರ್ನಾಟಕ ಪೆವಿಲಿಯನ್, ಟೊಯೋಟಾ, ಎಂಬೆಸಿ ಗ್ರೂಪ್, ರಾಜ್ಯ ಪ್ರವಾಸೋದ್ಯಮ, ಡ್ರೋನ್ ತಂತ್ರಜ್ಞಾನದ ವೈಶಿಷ್ಟ್ಯಪೂರ್ಣ ಮಜಲುಗಳನ್ನು ಕುತೂಹಲದಿಂದ ವೀಕ್ಷಿಸಿದರು.




## ಗೃಹಲಕ್ಷ್ಮಿ ಹಣ ಯಾವಾಗ ಜಮಾ? ಆತಂಕಕ್ಕೆ ಒಳಗಾದ ಮಹಿಳೆಯರು

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಪಂಚ ಗ್ಯಾರಂಟಿಗಳ ಪೈಕಿ ಮಹಿಳಾ ಸಬಲೀಕರಣದ ಉದ್ದೇಶದಿಂದ ಜಾರಿಗೆ ತಂದಿರುವ ಯೋಜನೆಯೇ ಗೃಹಲಕ್ಷ್ಮಿ ಯೋಜನೆಯಿಂದ ರಾಜ್ಯ ಮಹಿಳೆಯವರಿಗೆ ಸಾಕಷ್ಟು ಉಪಯೋಗವಾಗಿದೆ.

ಆರಂಭದಿಂದ ಇಲ್ಲಿಯವರೆಗೂ ಹಲವು ಸಮಸ್ಯೆಗಳ ನಡುವೆ ಗೃಹ ಲಕ್ಷ್ಮಿ ಯೋಜನೆಯ ಹಣ ಮಹಿಳೆಯರ ಖಾತೆಗೆ ಜಮಾ ಆಗಿದೆ. ಕಳೆದ ಮೂರು ತಿಂಗಳಿನಿಂದ ಗೃಹಲಕ್ಷ್ಮಿ ಫಲಾನುಭವಿಗಳ ಖಾತೆ ಹಣ ಜಮಾ ಆಗದ ಹಿನ್ನೆಲೆ ಮಹಿಳೆಯರು ಆತಂಕಕ್ಕೆ ಒಳಗಾಗಿದ್ದಾರೆ. ಪೆಂಡಿಂಗ್ ಇರುವ ಮೂರು ತಿಂಗಳ ಹಣ ಯಾವಾಗ ಮಹಿಳೆಯರ ಖಾತೆ ಹಣ ಜಮಾ ಆಗಲಿದೆ ಎನ್ನುವ ಮಾಹಿತಿ ತಿಳಿದು ಬಂದಿದೆ. ಸಚಿವ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದ್ದು, 15ನೇ ತಿಂಗಳಿನ ಹಣ ಇನ್ನೂ ಕೆಲ ಜಿಲ್ಲೆಗಳಲ್ಲಿ ಬಂದಿಲ್ಲ. ಹಾಗೂ 16 ಹಾಗೂ 17 ನೇ ಕಂತಿನ ಹಣ ಯಾವಾಗ ಬಿಡುಗಡೆಯಾಗಲಿದೆ ಎಂದು ಮಹಿಳೆಯರು ಕಾದುಕುಳಿತಿದೆ. ಗೃಹ ಲಕ್ಷ್ಮಿ ಯೋಜನೆಗೆ ಸಂಬಂಧಿಸಿದಂತೆ ಸರ್ಕಾರದ ಕಡೆಯಿಂದ ಹಣ ಮಂಜೂರಾಗಿದ್ದು, ಹಂತ ಹಂತವಾಗಿ ಎಲ್ಲಾ ಮಹಿಳೆಯರಿಗೆ ಪೆಂಡಿಂಗ್ ಹಣ ಜಮೆ ಆಗುತ್ತದೆ ಎಂದು ತಿಳಿದು ಬಂದಿದೆ. ಈ ತಿಂಗಳ ಕೊನೆಯಲ್ಲಿ ಗೃಹ ಲಕ್ಷ್ಮಿ ಯೋಜನೆಯ 15 ಹಾಗೂ 16 ನೇ ಕಂತಿನ ಹಣ ಜಮಾ ಆಗಲಿದೆ ಎಂದು ಮೂಲಗಳು ತಿಳಿಸಿವೆ. ಇನ್ನು ಪೆಂಡಿಂಗ್ ಇರುವ ಹಣವನ್ನು ಹಂತ ಹಂತವಾಗಿ ಬಿಡುಗಡೆ ಮಾಡಲು ಸಿದ್ಧತೆ ನಡೆಸಲಾಗುತ್ತಿದೆ, ಈಗಾಗಲೇ ಬಿಡುಗಡೆ ಕಾರ್ಯ ಶುರುವಾಗಿದ್ದು ಈ ವಾರದ ಕೊನೆಯಲ್ಲಿ ಮಹಿಳೆಯರ ಬ್ಯಾಂಕ್ ಖಾತೆ ತಲುಪಲಿದೆ ಎಂದು ಮೂಲಗಳು ತಿಳಿಸಿವೆ. ಎಲ್ಲಾ ಹಣವನ್ನು ಹಾಗೂ ಎಲ್ಲಾ ಜಿಲ್ಲೆಗಳಿಗೆ ಒಟ್ಟಾರೆ ಬಿಡುಗಡೆ ಮಾಡಲು ಸಾಧ್ಯವಿಲ್ಲದ ಕಾರಣ ಹಂತ ಹಂತವಾಗಿ ಹಣ ಬಿಡುಗಡೆ ಆಗಲಿದೆ ಎಂದು ತಿಳಿದು ಬಂದಿದೆ.

## ಫೈನಾನ್ಸ್ ಕಿರುಕುಳಕ್ಕೆ ಸುಗ್ರೀವಾಜ್ಞೆಗೆ ಅಂಕಿತ ಹಾಕಿದ ರಾಜ್ಯಪಾಲರು

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಹೆಚ್ಚುತ್ತಿರುವ ಮೈಕ್ರೋ ಫೈನಾನ್ಸ್ ಕಿರುಕುಳಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಜಾರಿಗೆ ತರಲು ಮುಂದಾಗಿದ್ದ ಸುಗ್ರೀವಾಜ್ಞೆಗೆ ರಾಜ್ಯಪಾಲರು ಅಂಕಿತ ಹಾಕಿದ್ದಾರೆ. ಮೈಕ್ರೋ ಫೈನಾನ್ಸ್ ತೊಂದರೆಗಳಿಗೆ ಬ್ರೇಕ್ ಹಾಕಲು ರಾಜ್ಯ ಕಾಂಗ್ರೆಸ್ ಸರ್ಕಾರ ಜಾರಿಗೆ ತರಲು ಮುಂದಾಗಿದ್ದ ಸುಗ್ರೀವಾಜ್ಞೆಯನ್ನು ಕೆಲದಿನಗಳ ಹಿಂದೆ ವಾಪಾಸ್ ಕಳುಹಿಸಿದ್ದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಕೆಲ ಸ್ಪಷ್ಟನೆಯನ್ನು ಕೇಳಿದ್ದರು.

ಬಳಿಕ ಸುಗ್ರೀವಾಜ್ಞೆ ಪುರಸ್ಕರಿಸುವಂತೆ ಕರಡು ಪ್ರತಿಯನ್ನು ಸರ್ಕಾರ ಮರು ಸಲ್ಲಿಕೆ ಮಾಡಿತ್ತು. ಅಲ್ಲದೇ ಸುಗ್ರೀವಾಜ್ಞೆ ಜಾರಿಗೆ ತರುವ ಅತಿಆಗತ್ಯತೆ ಬಗ್ಗೆ ಮನವರಿಕೆ ಮಾಡಿತ್ತು. ಇದೀಗ ರಾಜ್ಯಪಾಲರು ಸುಗ್ರೀವಾಜ್ಞೆ ಜಾರಿಗೆ ಸಹಿ ಹಾಕಿದ್ದಾರೆ. ರಾಜ್ಯಪಾಲರ ಅಂಕಿತದ ಬೆನ್ನಲ್ಲೇ ಕರ್ನಾಟಕದಲ್ಲಿ ಮೈಕ್ರೋ ಫೈನಾನ್ಸ್, ಫೈನಾನ್ಸ್ ಸಿಬ್ಬಂದಿಗಳ ಕಿರುಕುಳಕ್ಕೆ ಬ್ರೇಕ್ ಬೀಳಲಿದೆ. ಶೀಘ್ರದಲ್ಲಿಯೇ ರಾಜ್ಯ ಸರ್ಕಾರ ಸುಗ್ರೀವಾಜ್ಞೆಯನ್ನು ಜಾರಿಗೆ ತರಲಿದೆ.

## ಸಚಿವ ಸಂಪುಟ ಸಭೆಯಲ್ಲಿ ದಿಢೀರ್ ಬದಲಾವಣೆ: ಮೀಟಿಂಗ್ ನಿಗದಿ

• ಉದಯವಾಹಿನಿ, ಬೆಂಗಳೂರು

ಚಾಮರಾಜನಗರ ಜಿಲ್ಲಿಯ ಮಲೈಮಹದೇಶ್ವರ ಬೆಟ್ಟದಲ್ಲಿ ನಿಗದಿಯಾಗಿದ್ದ ರಾಜ್ಯ ಸಚಿವ ಸಂಪುಟ ಸಭೆ ರದ್ದಾಗಿದ್ದು, ಚಾಮರಾಜನಗರದ ಬದಲಾಗಿ ಬೆಂಗಳೂರಿನಲ್ಲಿಯೇ ಸಂಪುಟ ಸಭೆ ನಿಗದಿಯಾಗಿದೆ. ಚಾಮರಾಜನಗರ ಜಿಲ್ಲೆಯ ಹನೂರು ತಾಲ್ಲೂಕಿನ ಮಲೈಮಹದೇಶ್ವರ ಬೆಟ್ಟದಲ್ಲಿ ಫೆಬ್ರವರಿ 20ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ರಾಜ್ಯ ಸಚಿವ ಸಂಪುಟ ಸಭೆ ನಿಗದಿಯಾಗಿತ್ತು. ಈ ನಿಟ್ಟಿನಲ್ಲಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿತ್ತು.

ಆದರೆ ಇದೀಗ ಬೆಂಗಳೂರಿನಲ್ಲಿಯೇ ಫೆ.20ರಂದು ಸಂಪುಟ ಸಭೆ ನಡೆಸಲು ನಿರ್ಧರಿಸಲಾಗಿದೆ.ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾಲಿಗೆ ಪೆಟ್ಟಾಗಿರುವ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿಯೇ ಫೆ.20ರಂದು ಸಚಿವ ಸಂಪುಟ ಸಭೆ ನಡೆಯಲಿದೆ ಎಂದು ತಿಳಿದುಬಂದಿದೆ.

## ಪತ್ನಿಗಾಗಿ ಸಿಲ್ಕ್ ಸೀರೆ ಖರೀದಿಸಿದ ಡಿಸಿಎಂ ಡಿ.ಕೆ.ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪತ್ನಿ ಉಷಾ ಅವರಿಗಾಗಿ ಸಿಲ್ಕ್ ಸೀರೆ ಖರೀದಿಸಿ ಗಮನ ಸೆಳೆದಿದ್ದಾರೆ. ಕರ್ನಾಟಕ ಎಕ್ಸಿಬಿಷನ್ ಸ್ಟಾಲ್ ನಲ್ಲಿ ಪತ್ನಿ ಉಷಾ ಅವರಿಗೆ ಗುಲಾಬಿ ಬಣ್ಣದ ಸಿಲ್ಕ್ ಸೀರೆ ಖರೀದಿಸಿದ್ದಾರೆ. ಸ್ವತಃ ಡಿ.ಕೆ.ಶಿವಕುಮಾರ್ ಅವರು ಎಕ್ಸಿಬಿಷನ್ ಮಳಿಗೆ ಬಳಿ ಬಂದು ಸೀರೆ ಆಯ್ಕೆ ಮಾಡಿದ್ದು. 26,025 ರೂಪಾಯಿ ನೀಡಿ ಖರೀದಿಸಿದ್ದಾರೆ. ರಿಯಾಯಿ ದರವಾಗಿ 25 ಸಾವಿರ ರೂಪಾಯಿಗೆ ಸೀರೆ ಖರೀದಿಸಿದ್ದಾರೆ. ಸೀರೆ ಜೊತೆಗೆ ಒಂದು ಪರ್ಫ್ಯೂಮ್ ಕೂಡ ಖರೀದಿ ಮಾಡಿದ್ದಾರೆ. ಈ ವೇಳೆ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್, ಅಧಿಕಾರಿಗಳು ಉಪಸ್ಥಿತರಿದ್ದರು.

## ಬಾಲಕಾರ್ಮಿಕರನ್ನು ದುಡಿಸಿಕೊಂಡರೆ 50,000 ದಂಡ

• ಉದಯವಾಹಿನಿ, ಬೆಂಗಳೂರು

ಜಿಲ್ಲೆಯಾದ್ಯಂತ ಬಾಲಕಾರ್ಮಿಕನ್ನು ಮತ್ತು ಕಿಶೋರ ಕಾರ್ಮಿಕರನ್ನು ಪತ್ತೆ ಹಚ್ಚಲು ಅನಿರೀಕ್ಷಿತ ತಪಾಸಣೆ ಮತ್ತು ದಾಳಿಗಳನ್ನು ಹೆಚ್ಚಿಸಿ ಎಂದು ಜಿಲ್ಲಾಧಿಕಾರಿ ಎ.ಬಿ ಬಸವ ರಾಜು ಅವರು ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಯವರ ಕಛೇರಿ ಸಭಾಂಗಣದಲ್ಲಿಂದು ನಡೆದ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಜಿಲ್ಲಾ ಮಟ್ಟದ ಕಾರ್ಯಕಾರಿ ಸಮಿತಿ ಸಭೆ ಹಾಗೂ ಜಿಲ್ಲಾ ಮಟ್ಟದ ಕಾರ್ಯಪಡೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ನಿರಂತರವಾಗಿ ಅನಿರೀಕ್ಷಿತ ತಪಾಸಣೆ ಹಾಗೂ ದಾಳಿಗಳನ್ನು ಕೈಗೊಳ್ಳಬೇಕು. ತಾಲ್ಲೂಕು ಮಟ್ಟದ ಟಾಸ್ಕ್ ಫೋರ್ಸ್ ಸಮಿತಿಗಳು ದಾಳಿ ಮಾಡುವ ಸ್ಥಳದ ಮಾಹಿತಿಯನ್ನು ಗೌಪ್ಯವಾಗಿರಿಸಿ ದಾಳಿ ನಡೆಸಿ ಎಂದರು. ತಾಲ್ಲೂಕು ಮಟ್ಟದಲ್ಲಿ ಕಾಲಕಾಲಕ್ಕೆ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಕ್ರಮ ವಹಿಸಿ ಎಂದರು.



**3 ವರ್ಷ ಜೈಲು ಶಿಕ್ಷೆ ಫಿಕ್ಸ್!**

ಅನಿರೀಕ್ಷಿತ ದಾಳಿ, ತಪಾಸಣೆ ನಡೆಸಿದ ಸಂದರ್ಭದಲ್ಲಿ ರಕ್ಷಿಸಲಾದ ಮಕ್ಕಳಿಗೆ ಸೂಕ್ತ ಪನರ್ವಸತಿ ಕಲ್ಪಿಸಬೇಕು. ಫುಡ್ ಕಿಟ್, ಶೈಕ್ಷಣಿಕ ಕಿಟ್ ಒದಗಿಸಿ ಮುಂದಿನ ವಿದ್ಯಾಭ್ಯಾಸ, ಜೀವನ ರೂಪಿಸಿಕೊಳ್ಳಲು ಕ್ರಮ ವಹಿಸಬೇಕು.

ಜೈಲು ಶಿಕ್ಷೆ ಅಥವಾ 20,000 ರೂ. ಗಳಿಂದ 50,000 ರೂಗಳ ವರೆಗೆ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶವಿದೆ. ಪುನರಾವರ್ತಿತ ಅಪರಾಧಕ್ಕೆ 1 ವರ್ಷದಿಂದ 3 ವರ್ಷಗಳವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶವಿದೆ. ಅನಿರೀಕ್ಷಿತ ತಪಾಸಣೆ ಮತ್ತು ದಾಳಿಯ ವೇಳೆ ವಿವಿಧ ಅಂಗಡಿಗಳು, ಗ್ಯಾರೇಜುಗಳು, ಬೇಕರಿಗಳು, ಚಿಕನ್ ಮತ್ತು ಮಟನ್ ಅಂಗಡಿಗಳು ಹಾಗೂ ವಿವಿಧ ವಾಣಿಜ್ಯ ಸಂಸ್ಥೆಗಳ ಮಾಲೀಕರಿಗೆ, ಸಾರ್ವಜನಿಕರಿಗೆ ಹಾಗೂ ಶಾಲಾ-ಕಾಲೇಜುಗಳಲ್ಲಿ ಬಾಲ್ಯಾವಸ್ಥೆ ಮತ್ತು ಕಿಶೋರಾವಸ್ಥೆ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ಹಾಗೂ ತಿದ್ದುಪಡಿ ಕಾಯ್ದೆ 2016ರ ಕುರಿತು ಕಾನೂನು ಅರಿವು-ನೆರವು ಕಾರ್ಯಕ್ರಮಗಳನ್ನು ಆಟೋ ಪ್ರಚಾರ ಕಾರ್ಯಕ್ರಮಗಳನ್ನು ಬೀದಿ ನಾಟಕಗಳನ್ನು ಗೋಡೆ ಬರಹಗಳನ್ನು, ಕರಪತ್ರವನ್ನು ಮತ್ತು ಭಿತ್ತಿಪತ್ರಗಳನ್ನು ಅಂಗಡಿಗಳ ಮಾಲೀಕರಿಗೆ ವಿತರಿಸುವ ಮೂಲಕ ಹೆಚ್ಚಿನ ಜಾಗೃತಿ ಮೂಡಿಸಿ ಎಂದರು.

## ಸಿಎಂ ಕುರ್ಚಿ ಮೇಲೆ ಟವಲ್ ಹಾಕ್ತಿದ್ದವರಿಗೆ ಗುಮ್ಮಿದ ಟಗರು..!

• ಉದಯವಾಹಿನಿ, ಬೆಂಗಳೂರು

ಇತ್ತೀಚಿನ ದಿನಗಳಲ್ಲಿ ರಾಜ್ಯ ಕಾಂಗ್ರೆಸ್‌ನಲ್ಲಿ ಸಿಎಂ ಬದಲಾವಣೆಯ ಚರ್ಚೆಗಳು ಹೆಚ್ಚುತ್ತಲೇ ಇದೆ. ಇತ್ತೀಚೆಗೆ ನ್ಯಾಷನಲ್ ಚಾನೆಲ್ ಒಂದಕ್ಕೆ ನೀಡಿದ್ದ ಸಂದರ್ಶನದಲ್ಲಿ ಡಿಸಿಎಂ ಡಿಕೆ ಶಿವಕುಮಾರ್ ಅವರು, ಅಧಿಕಾರ ಹಂಚಿಕೆಯ ಕುರಿತು ಮಾತನಾಡಿದ್ದರು ಹಾಗಾಗಿ ಸಿಎಂ ಸಿದ್ದರಾಮಯ್ಯ ಬದಲಾಗಲಿದ್ದಾರೆ ಎನ್ನುವ ಚರ್ಚೆಗಳು ಜೋರಾಗಿತ್ತು.

ಇದೀಗ ಖಾಸಗಿ ಸುದ್ದಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಸದ್ಯಕ್ಕೆ ಚುನಾವಣೆ ರಾಜಕೀಯಕ್ಕೆ ನಿವೃತ್ತಿಯ ನಿರ್ಧಾರ ಮಾಡಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಆ ಮೂಲಕ ಸಿಎಂ ಸ್ಥಾನದ ಆಕಾಂಕ್ಷಿಗಳಿಗೆ ಸಿದ್ರಾಮಯ್ಯ ಟಾಂಗ್ ನೀಡಿದ್ದಾರೆ.

ಚುನಾವಣಾ ರಾಜಕೀಯ ನಿವೃತ್ತಿ ವಿಚಾರವಾಗಿ ಖಾಸಗಿ ಸುದ್ದಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಸಿಎಂ ಸಿದ್ದರಾಮಯ್ಯ, ಚುನಾವಣೆ ರಾಜಕೀಯ ಸ್ವಲ್ಪ ಮಟ್ಟಿಗೆ ಸಾಕು ಎನಿಸುತ್ತಿದೆ. ಆದರೆ, ಜನರ ಪ್ರೀತಿ-ವಿಶ್ವಾಸ ಇರುವುದರಿಂದ ಮುಂದುವರಿಯಬೇಕೋ ಅಥವಾ ಬೇಡವೋ ಎಂಬುದನ್ನು ಜನರ ಅಭಿಪ್ರಾಯ ಪಡೆದು ತೀರ್ಮಾನಿಸುತ್ತೇನೆ. ಹಿತೈಷಿಗಳು ರಾಜಕೀಯದಲ್ಲಿ ಮುಂದುವರೆಯಬೇಕು ಎನ್ನುತ್ತಿದ್ದಾರೆ.

## ಪಿಎಂ ಸೂರ್ಯ ಘರ್ ಯೋಜನೆಗೆ 1 ವರ್ಷ, 9 ಲಕ್ಷ ಮನೆಗಳಿಗೆ ಸೋಲಾರ್ ಅಳವಡಿಕೆಗೆ ನೆರವು

• 1 ಕೋಟಿ ಮನೆಗಳಿಗೆ ಸೌರ ಶಕ್ತಿಯ ಬೆಳಕು ಚೆಲ್ಲುವ ಗುರಿ ಸೌರಶಕ್ತಿ • ಕೈಗೆಟುಕುವ ಹಾಗೆ ಯೋಜನೆ ರೂಪಿಸಿರುವ ಕೇಂದ್ರ

• ಉದಯವಾಹಿನಿ, ಬೆಂಗಳೂರು

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಅತ್ಯಂತ ಮಹತ್ವಾಕಾಂಕ್ಷೆ ಯೋಜನೆ 'ಪ್ರಧಾನಮಂತ್ರಿ ಸೂರ್ಯ ಘರ್ ಮುಫ್ತ್ ಬಿಜ್ಲಿ ಯೋಜನೆಗೆ ಫೆ.13ರಂದು ಒಂದು ವರ್ಷ ತುಂಬಿದೆ. 2027ರ ವೇಳೆಗೆ ದೇಶದ 1 ಕೋಟಿ ಮನೆಗಳಿಗೆ ಸೌರ ಶಕ್ತಿಯ ಬೆಳಕು ಚೆಲ್ಲುವ ಗುರಿಯನ್ನು ಈ ಯೋಜನೆ ಹೊಂದಿದೆ. ದೇಶದ ಪ್ರತಿ ನಾಗರಿಕರಿಗೆ ಸೌರಶಕ್ತಿ ಕೈಗೆಟುಕುವ ಹಾಗೆ ಯೋಜನೆ ರೂಪಿಸಿರುವ ಕೇಂದ್ರ ಸರ್ಕಾರ, ಇದೀಗ ಸೂರ್ಯ ಘರ್ ಮುಖೇನ ಮನೆ ಮನೆ ಬೆಳಗುವ ಮತ್ತು ಭಾರತದ ಸುಸ್ಥಿರ ಭವಿಷ್ಯಕ್ಕೆ ಒಂದು ಭದ್ರ ಬುನಾದಿ ಹಾಕುವ ಯೋಜನೆ ರೂಪಿಸಿದೆ. 2024ರ ಫೆಬ್ರವರಿ 13ರಂದು ಪ್ರಧಾನಿ ನರೇಂದ್ರ ಮೋದಿ ಅವರು ಇದಕ್ಕೆ ಚಾಲನೆ ನೀಡಿದ್ದರು. ಮನೆ ಮೇಲ್ಛಾವಣಿಗೆ ಸೌರ ಫಲಕ ಸ್ಥಾಪಿಸಿ ಉಚಿತ ವಿದ್ಯುತ್ ಒದಗಿಸುವ ಜತೆಗೆ ವಿದ್ಯುಚ್ಛಕ್ತಿ ಸ್ವಾವಲಂಬನೆ ಸಾಧಿಸುವುದು ಇದರ ಉದ್ದೇಶವಾಗಿದೆ.



ವಿಶ್ವದ ಅತಿದೊಡ್ಡ ದೇಶೀಯ ಮೇಲ್ಛಾವಣಿ ಸೌರ ವಿದ್ಯುತ್ ಉತ್ಪಾದನೆ ಯೋಜನೆ ಎಂದೇ ಇದು ಖ್ಯಾತಿ ಪಡೆದಿದೆ.

**9 ಲಕ್ಷ ಮನೆಗಳಿಗೆ ಅಳವಡಿಕೆ:** ಯೋಜನೆ ಆರಂಭವಾದ ಮೊದಲ ವರ್ಷದಲ್ಲೇ ಅಂದರೆ 2025ರ ಫೆಬ್ರವರಿವರೆಗೆ 9,04,823 ಮನೆಗಳಿಗೆ ಮೇಲ್ಛಾವಣಿ ಸೌರಶಕ್ತಿ ಘಟಕ ಒದಗಿಸಲಾಗಿದೆ. ಮಾಸಿಕ ಅಳವಡಿಕೆ ದರ ಹತ್ತು ಪಟ್ಟು ಹೆಚ್ಚಳವಾಗಿದ್ದು, ತಿಂಗಳಿಗೆ ಸುಮಾರು 70,000 ಮನೆಗಳಿಗೆ ಅಳವಡಿಕೆ ಮಾಡಲಾಗುತ್ತಿದೆ. ಈ ಯೋಜನೆ ವಸತಿ ವಲಯದಲ್ಲಿ ಮೇಲ್ಛಾವಣಿಗಳ ಮೂಲಕವೇ 30 ಗಿಗಾವ್ಯಾಟ್ ಸೌರಶಕ್ತಿಯನ್ನು ಉತ್ಪಾದಿಸುವ ಅಂದಾಜಿದೆ. ಇದು ಭಾರತದ ನವೀಕರಿಸಬಹುದಾದ ಇಂಧನ ಗುರಿಗಳಿಗೆ ಗಮನಾರ್ಹ ಕೊಡುಗೆ ನೀಡುತ್ತದೆ.

**ಸೌರ ಮೇಲ್ಛಾವಣಿ ಗುರಿಗಳು:** ಪ್ರಸಕ್ತ ಮಾರ್ಚ್ ವೇಳೆಗೆ 10 ಲಕ್ಷ ಮೇಲ್ಛಾವಣಿ ಸೌರ ಫಲಕ ಅಳವಡಿಕೆ ಗುರಿ ಮೀರುವ ನಿರೀಕ್ಷೆಯಿದ್ದು, ಅಕ್ಟೋಬರ್ ವೇಳೆಗೆ ಇದು 20 ಲಕ್ಷಕ್ಕೆ ದ್ವಿಗುಣಗೊಳ್ಳುವ ನಿರೀಕ್ಷೆಯಿದೆ. 2026ರ ಮಾರ್ಚ್ ವೇಳೆಗೆ 40 ಲಕ್ಷ ಹಾಗೂ ಅಂತಿಮವಾಗಿ 2027ಕ್ಕೆ ಮಹತ್ವಾಕಾಂಕ್ಷೆಯ ಒಂದು ಕೋಟಿ ಗುರಿ ಸಾಧಿಸುವ ಯೋಜನೆ ಇದೆ.

**5.54 ಲಕ್ಷ ಗ್ರಾಹಕರಿಗೆ ಸಬ್ಸಿಡಿ:** ಶೇ.40ರವರೆಗೆ ಸಬ್ಸಿಡಿ ಸಹಿತ ಸುಲಭವಾಗಿ ಕೈಗೆಟುಕುವಂತೆ ರೂಪಿತವಾದ ಸೂರ್ಯ ಘರ್ ಯೋಜನೆಯಡಿ ಪ್ರತಿ ಮನೆಗೆ ಸರಾಸರಿ 77,800 ಸಬ್ಸಿಡಿ ಇದ್ದು, ಈವರೆಗೆ 5.54 ಲಕ್ಷ ವಸತಿ ಗ್ರಾಹಕರಿಗೆ ಒಟ್ಟಾರೆ 4,308.66 ಕೋಟಿ ಮೊತ್ತ ಭರಿಸಲಾಗಿದೆ. ಸೂರ್ಯ ಘರ್ ಸೌರ ಘಟಕ ಅಳವಡಿಸಿಕೊಂಡ ಅಂದಾಜು ಶೇ.45ರಷ್ಟು ಫಲಾನುಭವಿಗಳು ಸೌರ ವಿದ್ಯುತ್ ಉತ್ಪಾದನೆ ಜತೆಗೆ ಶೂನ್ಯ ವಿದ್ಯುತ್ ಬಿಲ್ ಪಡೆಯುತ್ತಿದ್ದಾರೆ.

### ಕರ್ನಾಟಕದಲ್ಲಿ ಸೂರ್ಯ ಘರ್ ಯೋಜನೆಗೆ ಮಂಕು!

ಇಂಧನ ಸ್ವಾವಲಂಬನೆ ಮತ್ತು ಸೌರ ಶಕ್ತಿ ಉತ್ತೇಜನಗೊಳಿಸಲು ಭಾರತದಾದ್ಯಂತ ಪ್ರತಿ ಜಿಲ್ಲೆಗೊಂದು ಮಾದರಿ ಸೌರ ಗ್ರಾಮ ಸ್ಥಾಪಿಸುವತ್ತಲೂ ಯೋಜನೆ ಹಾಕಿಕೊಳ್ಳಲಾಗಿದೆ. ಈ ಘಟಕಕ್ಕಾಗಿ 800 ಕೋಟಿ ರೂ. ಹಂಚಿಕೆ ಮಾಡಿದ್ದು, ಆಯ್ಕೆಯಾದ ಪ್ರತಿ ಮಾದರಿ ಸೌರ ಗ್ರಾಮಕ್ಕೆ 1 ಕೋಟಿ ರೂ. ನೀಡಲಾಗಿದೆ. 5,000ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಕಂದಾಯ ಗ್ರಾಮಗಳು ಇದಕ್ಕೆ ಅರ್ಹತೆ ಪಡೆಯುತ್ತವೆ. ಸ್ಪರ್ಧಾತ್ಮಕ ಪ್ರಕ್ರಿಯೆ ಮೂಲಕ ಅರ್ಹ ಗ್ರಾಮಗಳ ಆಯ್ಕೆ ಮಾಡಲಾಗುತ್ತದೆ. ಜಿಲ್ಲಾ ಮಟ್ಟದ ಸಮಿತಿ ಗುರುತಿಸಿದ 6 ತಿಂಗಳ ನಂತರ ನವೀಕರಿಸಬಹುದಾದ ಇಂಧನ ವಿತರಣೆ ಸಾಮರ್ಥ್ಯದ ಮೇಲೆ ಮೌಲ್ಯಮಾಪನ ಮಾಡಲಾಗುತ್ತದೆ. ಪ್ರತಿ ಜಿಲ್ಲೆಯಲ್ಲೂ ಅತಿ ಹೆಚ್ಚು ನವೀಕರಿಸಬಹುದಾದ ಇಂಧನ ಸಾಮರ್ಥ್ಯ ಹೊಂದಿರುವ ಗ್ರಾಮ ಕೇಂದ್ರ ಸರ್ಕಾರದಿಂದ 1 ಕೋಟಿ ಹಣಕಾಸು ನೆರವಿನ ಅನುದಾನ ಪಡೆಯುತ್ತದೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹8,667 /Gram24ct ₹7,940/Gram22ct | ಬೆಳ್ಳಿ: ₹99.50/Gram

# ಪ್ರಗತಿಪರ ರೈತರನ್ನು ಹುಟ್ಟುಹಾಕುವಂತೆ ಎಚ್.ಟಿ.ಮಂಜು ಕರೆ

• ಉದಯವಾಹಿನಿ ಕೆ.ಆರ್.ಪೇಟೆ

ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಮತ್ತು ರೇಷ್ಮೆ ಇಲಾಖೆಗಳು ಒಗ್ಗೂಡಿ ಪರಸ್ಪರ ಸಮನ್ವಯದ ಮೇಲೆ ಕೆಲಸ ಮಾಡಿ ಪ್ರಗತಿಪರ ರೈತರನ್ನು ಹುಟ್ಟು ಹಾಕುವಂತೆ ಶಾಸಕ ಎಚ್.ಟಿ.ಮಂಜು ಕರೆ ನೀಡಿದರು.

ಪಟ್ಟಣದ ಟಿಎಪಿಸಿಎಂಎಸ್ ಸಮುದಾಯ ಭವನದ ಆವರಣದಲ್ಲಿ ತಾಲ್ಲೂಕ ಕೃಷಿ ಇಲಾಖೆಯಿಂದ ಆಯೋಜಿಸಿದ್ದ ಆಹಾರ ಮತ್ತು ಪೌಷ್ಟಿಕ ಭದ್ರತೆ ಕಿಸಾನ್ ಗೋಷ್ಠಿ ಮತ್ತು ಸವಲತ್ತು ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸರ್ಕಾರ ರೈತರ ಕಲ್ಯಾಣಕ್ಕಾಗಿ ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಸಾಕಷ್ಟು ಸಹಾಯ ಧನ ಮತ್ತು ಜಾಗೃತಿ ಕಾರ್ಯಕ್ರಮ ಮಾಡುತ್ತಿದೆ. ಸರ್ಕಾರದ ಯೋಜನೆಗಳನ್ನು ರೈತ ಸಮುದಾಯಕ್ಕೆ ತಲುಪಿಸುವಲ್ಲಿ ಅಧಿಕಾರಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಎಂದರು.



ಇಂದಿನ ಕಾರ್ಯಕ್ರಮದಲ್ಲಿ ಕೃಷಿ ಇಲಾಖೆ ಸಮಗ್ರ ಕೃಷಿ ಪದ್ಧತಿಯ ಬಗ್ಗೆ ವಿಚಾರ ಗೋಷ್ಠಿ ಸಂಘಟಿಸಿದೆ. ರಾಗಿ ಮಹತ್ವ ತಿಳಿಸಿ ರೈತರನ್ನು ರಾಗಿ ಬೆಳೆಯಲು ಉತ್ತೇಜಿಸುವುದು ಕಾರ್ಯಕ್ರಮದ ಮೂಲ ಗುರಿ. ಆದರೆ, ಈ ವಿಚಾರ ಗೋಷ್ಠಿಗೆ ಸವಲತ್ತು ಪಡೆಯಲು ಬಂದಿರುವ ರೈತರನ್ನು ಹೊರತುಪಡಿಸಿ ಇತರೆ ರೈತ ಸಮುದಾಯ ಬಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಧಿಕಾರಿಗಳು ಸರ್ಕಾರಿ ಕಾರ್ಯ ಕ್ರಮಗಳನ್ನು ಕೇವಲ ಕಾಗದದ ಮೇಲೆ ಮಾಡುವುದನ್ನು ನಿಲ್ಲಿಸಿ ರೈತ ಸಮುದಾಯದ ಬಳಿಗೆ ತೆರಳಿ ಮಾಹಿತಿ ನೀಡಬೇಕು. ಇಲಾಖೆ ಅಧಿಕಾರಿಗಳು ಕೇವಲ ಸರ್ಕಾರದಿಂದ ಬರುವ ಸವಲತ್ತುಗಳನ್ನು ವಿತರಣೆ ಮಾಡುವ ಏಜೆನ್ಸಿಗಳಂತೆ ಕೆಲಸ ಮಾಡದೆ ಗ್ರಾಮೀಣ ಪ್ರದೇಶದ ರೈತ ಯುವಕರಿಗೆ ಅಗತ್ಯ ತರಬೇತಿ ಮತ್ತು ಸೌಲಭ್ಯ ಒದಗಿಸಿಕೊಡಬೇಕು ಎಂದರು.

ತಾಲ್ಲೂಕಿನಲ್ಲಿ ಹೇಮಾವತಿ ನದಿ ಹರಿಯುತ್ತಿದೆ. ನದಿ ಬಯಲಿನ ಜೊತೆಗೆ ನೂರಾರು ಕೆರೆ-ಕಟ್ಟೆಗಳಿವೆ. ಇಲ್ಲೆಲ್ಲಾ ಮೀನುಗಾರಿಕೆ ಮಾಡಲು ವಿಪುಲ ಅವ ಕಾಶಗಳಿವೆ. ಅರೆ ನೀರಾವರಿ ಪ್ರದೇಶ ದಲ್ಲಿ ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ ಕ್ಷೇತ್ರವನ್ನು ವಿಸ್ತರಿಸಬಹುದಾದ ಅನುಕೂಲಗಳಿವೆ. ಸರ್ಕಾರಿ ಅಧಿಕಾರಿಗಳು ರೈತರನ್ನು ಉತ್ತೇಜಿಸಿ ಕೃಷಿ ಉದ್ದಿಮೆದಾರ ರೈತ ಸಮುದಾಯ ನಿರ್ಮಿಸಬೇಕೆಂದು ಕರೆ ನೀಡಿದರು. ಕೃಷಿ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಶ್ರೀನಿವಾಸ ಶೆಟ್ಟಿ ಸಮಗ್ರ ಕೃಷಿ ಪದ್ಧತಿಯ ಬಗ್ಗೆ ವಿಶೇಷ ಉಪ ನ್ಯಾಸನೀಡಿದರು.ಕೃಷಿ ಇಲಾಖೆಯಿಂದ ಅರ್ಹ ಫಲಾನುಭವಿಗಳಿಗೆ ವಿವಿಧ ಸಹಾಯಧನ ಯೋಜನೆಯಡಿ ಮಂಜೂರಾದ ಪವರ್ ಟಿಲ್ಲರ್, ಮೇವು ಕತ್ತರಿಸುವ ಯಂತ್ರ, ನೀರಾವರಿ ಪೈಪುಗಳು ಸೇರಿದಂತೆ ವಿವಿಧ ಪರಿಕರಗಳನ್ನು ಶಾಸಕ ಎಚ್.ಟಿ.ಮಂಜು ವಿತರಿಸಿದರು.

# ಜಿಲ್ಲೆ ಯೋಜನೆಗಳ ಅನುಷ್ಠಾನದಲ್ಲಿ, ಉತ್ತಮ ಪ್ರಗತಿ ಸಾಧನೆಯಲ್ಲಿ ಮುಂಚೂಣಿ

## ನಮ್ಮ ನಡಿಗೆ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕಡೆಗೆ ಕಾರ್ಯಕ್ರಮದಡಿ ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆ

• ಉದಯವಾಹಿನಿ ಚಾಮರಾಜನಗರ

ಚಾಮರಾಜನಗರ ಜಿಲ್ಲೆ ಯೋಜನೆಗಳ ಅನುಷ್ಠಾನದಲ್ಲಿ ಉತ್ತಮ ಪ್ರಗತಿ ಸಾಧಿಸಿ ಮುಂಚೂಣಿಯಲ್ಲಿರುವುದು ಅಭಿನಂದನೀಯವಾಗಿದೆ ಎಂದು ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಮೈಸೂರು ವಿಭಾಗದ ರಾಜ್ಯ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್ ಅವರು ಪ್ರಶಂಶಿಸಿದರು.

ಚಾಮರಾಜನಗರ ತಾಲ್ಲೂಕಿನ ಪುಣಜನೂರಿನ ಗ್ರಾಮ ಪಂಚಾಯಿತಿ ಕಚೇರಿ ಆವರಣದಲ್ಲಿಂದು ನಮ್ಮ ನಡಿಗೆ ಪಂಚ ಗ್ಯಾರಂಟಿ ಯೋಜನೆಗಳ ಅನುಷ್ಠಾನದ ಕಡೆಗೆ ಕಾರ್ಯಕ್ರಮದಡಿ ಆಯೋಜಿಸಲಾಗಿದ್ದ ತಾಲ್ಲೂಕು ಮಟ್ಟದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು ಗ್ಯಾರಂಟಿ ಯೋಜನೆಗಳನ್ನು ಪರಿಶೀಲಿಸಿದರು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು ಕರ್ನಾಟಕ ಸರ್ಕಾರವು ಬಡವರು, ಮಧ್ಯಮ ವರ್ಗದವರ ಆರ್ಥಿಕ ಸ್ವಾವಲಂಬನೆಗಾಗಿ ಇಡೀ ದೇಶದಲ್ಲಿಯೇ ಮೊದಲಬಾರಿಗೆ ಪಂಚ ಗ್ಯಾರಂಟಿ ಯೋಜನೆಗಳಾದ ಶಕ್ತಿ ಯೋಜನೆ, ಗೃಹಲಕ್ಷ್ಮೀ, ಅನ್ನ ಭಾಗ್ಯ, ಗೃಹಜ್ಯೋತಿ, ಯುವನಿಧಿ ಜಾರಿಗೊಳಿಸಿ ಇತರೆ ರಾಜ್ಯಗಳಿಗೂ ಮಾದರಿಯಾಗಿದೆ. ಅದರಲ್ಲೂ ಚಾಮರಾಜನಗರ ಜಿಲ್ಲೆ ಯೋಜನೆಗಳ ಅನುಷ್ಠಾನದಲ್ಲಿ ಉತ್ತಮ ಪ್ರಗತಿ ಸಾಧಿಸಿ ಮುಂಚೂಣಿಯಲ್ಲಿರುವುದು ಅಭಿನಂದನೀಯವಾಗಿದೆ ಎಂದರು.

**ಮಹಿಳೆಯರ ಪ್ರಯಾಣಕ್ಕೆ ಅನುಕೂಲ**

**ಗೃಹಲಕ್ಷ್ಮೀ ಯೋಜನೆಯಡಿ 2 ಸಾವಿರ ರೂ. ಪ್ರತಿತಿಂಗಳು ಖಾತೆಗೆ ಜಮೆಯಾಗಬೇಕು. ಶಕ್ತಿ ಯೋಜನೆಯಡಿ ಮಹಿಳೆಯರ ಪ್ರಯಾಣಕ್ಕೆ ಅನುಕೂಲವಾಗುವಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹೆಚ್ಚಿನ ಬಸ್ ವ್ಯವಸ್ಥೆ ಮಾಡಬೇಕು. ತಾಲ್ಲೂಕಿನ ಕಾಡಂಚಿನಲ್ಲಿರುವ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ವಿದ್ಯುತ್ ಸಮಸ್ಯೆ ಇದೆ. ನಿರಂತರವಾಗಿ ಲೋಡ್ ಶೆಡ್ಡಿಂಗ್ ಆಗುತ್ತಿದೆ. ಕನಿಷ್ಠ 4 ಗಂಟೆಯಾದರೂ ವಿದ್ಯುತ್ ನೀಡಬೇಕು. ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಇದರಿಂದ ಬುಡಕಟ್ಟು ಜನರು, ರೈತಾಪಿ ಜನರು ಸಂಕಷ್ಟಕ್ಕೀಡಾಗಿದ್ದಾರೆ. ಪಂಚಾಯಿತಿ ವ್ಯಾಪ್ತಿಯಲ್ಲಿ ಸಾಕಷ್ಟು ಜನರಿಗೆ ಮನೆಗಳಿಲ್ಲ. ನ್ಯಾಯಬೆಲೆ ಅಂಗಡಿಗಳನ್ನು ಪ್ರತಿದಿನವು ತೆರೆದು ಆಹಾರ ಪದಾರ್ಥ ವಿತರಿಸುವಂತೆ ಗ್ರಾಮಸ್ಥರೊಬ್ಬರು ಅಹವಾಲು ಸಲ್ಲಿಸಿದರು.**


ಉದಯವಾಹಿನಿ ಚಿತ್ರ

ಸಮಸ್ಯೆ ಸಂಬಂಧ ಪ್ರತಿಕ್ರಿಯಿಸಿದ ಅವರು ಗೃಹಲಕ್ಷ್ಮಿ ಯೋಜನೆಗೆ ಸಂಬಂಧಿಸಿದಂತೆ 2 ತಿಂಗಳ ಹಣ ಸದ್ಯದಲ್ಲಿಯೇ ಫಲಾನುಭವಿಗಳ ಖಾತೆಗೆ ಜಮೆಯಾಗಲಿದೆ. ಶಕ್ತಿ ಯೋಜನೆಯಡಿ ಪಂಚಾಯಿತಿ ವ್ಯಾಪ್ತಿಗೆ ಹೆಚ್ಚಿನ ಬಸ್ ವ್ಯವಸ್ಥೆ ಮಾಡಲಾಗುವುದು. ಪಂಚಾಯಿತಿ ವ್ಯಾಪ್ತಿಯಲ್ಲಿ ನಿರಂತರ ವಿದ್ಯುತ್ ನೀಡುವ ಬಗ್ಗೆ ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕರೊಂದಿಗೆ ಚರ್ಚಿಸಲಾಗುವುದು. ಜಿಲ್ಲೆಯಲ್ಲಿ ಮನೆ ಇಲ್ಲದವರಿಗೆ ಸರ್ಕಾರವು 39 ಮನೆಗಳನ್ನು ಮಂಜೂರು ಮಾಡಿದೆ.

ಗ್ಯಾರೆಂಟಿ ಯೋಜನೆಗಳ ಹೆಚ್ಚಿನ ನೊಂದಣಿಗಾಗಿ ದಾಖಲಾತಿಗಳು ಅವಶ್ಯವಾಗಿರುವ ಜನರಿಗೆ ಪಂಚಾಯಿತಿಮಟ್ಟದಲ್ಲಿ ಶಿಬಿರ ನಡೆಸಿ ದಾಖಲೆಗಳನ್ನು ಅಪ್ ಡೇಟ್ ಮಾಡಬೇಕು. ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಅನುಷ್ಠಾನ ಪ್ರಾಧಿಕಾರದ ಸದಸ್ಯರು ಮುಂದಾಗಬೇಕು ಎಂದರು.

**ಕಾಡಂಚಿನ ಜನರಿಗೂ ಗ್ಯಾರಂಟಿ ಯೋಜನೆ**

**ಆರಂಭದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಮಹಿಳೆಯರು ಹಾಗೂ ದುರ್ಬಲ ವರ್ಗದವರ ಸಬಲೀಕರಣಕ್ಕಾಗಿ ಸರ್ಕಾರ ಜಾರಿಗೊಳಿಸಿರುವ ಗ್ಯಾರಂಟಿ ಯೋಜನೆಗಳು ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನಗೊಂಡಿವೆ. ಗೃಹಲಕ್ಷ್ಮಿ ಯೋಜನೆಯಡಿ 2,76,226 ಮಂದಿ ನೊಂದಣಿ ಮೂಲಕ ರಾಜ್ಯದಲ್ಲಿಯೇ ಜಿಲ್ಲೆ ಮೊದಲ ಸ್ಥಾನದಲ್ಲಿದ್ದು, ಇತರೆ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನ ಮಾಡಲಾಗುತ್ತಿದೆ. ಪ್ರತಿ ತಿಂಗಳು ಅಧಿಕಾರಿಗಳ ಸಭೆ ನಡೆಸಿ ಯೋಜನೆಗಳ ಪರಿಣಾಮಕಾರಿ ಪ್ರಗತಿಗೆ ಶ್ರಮಿಸಲಾಗುತ್ತಿದೆ. ಕಾಡಂಚಿನ ಜನರಿಗೂ ಗ್ಯಾರಂಟಿ ಯೋಜನೆಗಳು ತಲುಪುವಂತೆ ನೋಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಬಳಿಕ ಅವರು ಜನರ ಕುಂದುಕೊರತೆಗಳನ್ನು ಆಲಿಸಿದರು.**

**ಮಧ್ಯಮವರ್ಗದ ಸಮಸ್ಯೆಗಳಿಗೆ ಶೀಘ್ರ ಪರಿಹಾರ**

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿವಾಹಕ ಅಧಿಕಾರಿ ಮೋನಾ ರೋತ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು, ಸದಸ್ಯರಾದ ರವಿ, ಎನ್. ಸಿದ್ದರಾಜು, ಉಮಾಪತಿ, ರಾಜಶೇಖರ್, ಅಫ್ಸರ್ ಪಾಷ, ದೇವರಾಜು, ರಾಚಯ್ಯ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸತೀಶ್‌ಕುಮಾರ್, ಇತರರು ಇದೇ ಸಂದರ್ಭದಲ್ಲಿ ಇದ್ದರು.

ಪುಣಜನೂರಿನಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಗೂ ಮೊದಲು ಗ್ಯಾರಂಟಿ ಯೋಜನೆಗಳ ರಾಜ್ಯ ಉಪಾಧ್ಯಕ್ಷರಾದ ಡಾ. ಪುಷ್ಪಾ ಅಮರನಾಥ್ ಹಾಗೂ ಜಿಲ್ಲಾಧ್ಯಕ್ಷ ಎಚ್.ವಿ. ಚಂದ್ರು ಅವರು ಪಂಚಾಯಿತಿ ವ್ಯಾಪ್ತಿಯ ಬೂದಿಪಡಗ ಗ್ರಾಮದಲ್ಲಿ ಬುಡಕಟ್ಟು ಜನಾಂಗದ ನಾಯಕರಾದ ಬಿರ್ಸಾ ಮುಂಡ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಬಳಿಕ ಪಂಚ ಗ್ಯಾರಂಟಿ ಯೋಜನೆಗಳ ಕುರಿತು ಗ್ರಾಮದ ಮನೆ ಮನೆಗೆ ಭೇಟಿ ನೀಡಿ ಜನರೊಂದಿಗೆ ಸಮಾಲೋಚನೆ, ಸಂವಾದ ನಡೆಸಿದರು.

# ಮಿನಿ ನ್ಯೂಸ್

## ಸುಳ್ಳು ಹೇಳಿಕೆ ಸತ್ಯಕ್ಕೆ ದೂರವಾದ ಸಂಗತಿ

• ಉದಯವಾಹಿನಿ ಪಿರಿಯಾಪಟ್ಟಣ

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ವಿವಿಧೋದ್ದೇಶ ಸಹಕಾರ ಸಂಘದ ಚುನಾವಣೆ ವೇಳೆ ಹಾಲಿ ಆಡಳಿತ ಮಂಡಳಿ ವಿರುದ್ಧ ಅಪಪ್ರಚಾರ ನಡೆಸುತ್ತಿರುವುದನ್ನು ಹಾಲಿ ಆಡಳಿತ ಮಂಡಳಿ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಖಂಡಿಸಿದ್ದಾರೆ.

ಈ ಸಂಬಂಧ ಸಂಘದ ಹಾಲಿ ಅಧ್ಯಕ್ಷರಾದ ಎಂ.ಸುರೇಶ್, ಮಾಜಿ ಅಧ್ಯಕ್ಷರಾದ ಶಿವಾನಂದ್ ಕುಂಬಾರ್, ಮಾಜಿ ಉಪಾಧ್ಯಕ್ಷರಾದ ಗುರುಲಿಂಗಯ್ಯ ಬಾರಾಗಣಿ, ಆರ್.ಪಿ ಶಿವಕುಮಾರ್ ಮತ್ತು ಪದಾಧಿಕಾರಿಗಳು ಹಾಗೂ ಬೆಂಬಲಿಗರು ಪತ್ರಿಕಾ ಹೇಳಿಕೆ ನೀಡಿದ್ದು ಸಂಘದ ಮುಂದಿನ ಆಡಳಿತ ಮಂಡಳಿಗೆ ಫೆಬ್ರವರಿ 14ರಂದು ಚುನಾವಣೆ ನಡೆಯುತ್ತಿದ್ದು ಚುನಾವಣೆಯಲ್ಲಿ ಸ್ಪರ್ಧಿಸಿರುವ ಕೆಲ ಅಭ್ಯರ್ಥಿಗಳು ಮತ ಕೇಳುವ ಸಂದರ್ಭ ಹಾಲಿ ಆಡಳಿತ ಮಂಡಳಿಯಲ್ಲಿ ಅವ್ಯವಹಾರ ನಡೆದಿದೆ ಎಂದು ಅಪಪ್ರಚಾರ ನಡೆಸುತ್ತಿದ್ದಾರೆ ಮತ್ತು ಈ ಸಂಬಂಧ ಸುದ್ದಿಗೋಷ್ಠಿ ನಡೆಸಿ ಸಹ ಮಾಧ್ಯಮಗಳ ಮುಂದೆ ಸುಳ್ಳು ಹೇಳಿಕೆ ನೀಡಿರುವುದು ಸತ್ಯಕ್ಕೆ ದೂರವಾದ ಸಂಗತಿ ಇದನ್ನು ಖಂಡಿಸುತ್ತೇವೆ, ನಮ್ಮಗಳ ಆಡಳಿತ ಅವಧಿಯಲ್ಲಿ ಪ್ರಾಮಾಣಿಕ ಪಾರದರ್ಶಕ ಆಡಳಿತ ನಡೆಸಿ ಸಂಘದ ಸರ್ವರ ಹಿತ ಕಾಪಾಡಿದ್ದೇವೆ, ನಮ್ಮ ಅವಧಿಯಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳು ಹಾಗೂ ಮುಂದೆ ಮತ್ತೆ ಅಧಿಕಾರಕ್ಕೆ ಬಂದರೆ ನೀಡುವ ಗ್ಯಾರಂಟಿ ಭರವಸೆಗಳ ಬಗ್ಗೆ ಪ್ರಣಾಳಿಕೆ ಸಿದ್ಧಪಡಿಸಿದ್ದು ಮತದಾರರು ಸುಳ್ಳು ವದಂತಿಗಳಿಗೆ ಕಿವಿ ಕೊಡಬಾರದು, ನಮ್ಮಗಳ ವಿರುದ್ಧ ಮಾಡಿರುವ ಆಪಾದನೆಗೆ ನಾವು ಉತ್ತರ ಕೊಡಲು ಸಿದ್ಧರಿದ್ದು ಸೂಕ್ತ ವೇದಿಕೆಯಲ್ಲಿ ಚರ್ಚೆಗೆ ಆಹ್ವಾನಿಸುತ್ತೇವೆ ಅದು ಬಿಟ್ಟು ಹಾದಿ ಬೀದಿಯಲ್ಲಿ ಸುಳ್ಳು ಅಪಪ್ರಚಾರ ಮುಂದುವರಿಸಿದರೆ ಅಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಮುಂದಾಗುತ್ತೇವೆ ಎಂದರು.

## ದೀಪದಗಿರಿ ಒಡ್ಡಿನ ರೈತರ ಜಮೀನುಗಳನ್ನು ವಶಪಡಿಸಿಕೊಂಡ ಪ್ರಾಧಿಕಾರ

• ಉದಯವಾಹಿನಿ ಹನೂರು

ಮಲೆ ಮಹದೇಶ್ವರ ಬೆಟ್ಟದ ದೀಪದ ಗಿರಿ ಒಡ್ಡಿನಲ್ಲಿ ವಶಪಡಿಸಿಕೊಂಡಿರುವ ರೈತರ ಜಮೀನುಗಳಿಗೆ ಪರಿಹಾರ ನೀಡಬೇಕು ಹಾಗೂ ಇಲ್ಲಿನ ನಿವಾಸಿಗಳ ಸಮಸ್ಯೆಗಳನ್ನು ಬಗೆ ಹರಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಹನೂರು ತಾಲ್ಲೂಕು ಅಧ್ಯಕ್ಷ ಚಂಗಡಿ ಕರಿಯಪ್ಪ ಅವರ ನೇತೃತ್ವದಲ್ಲಿ ಮನವಿ ಸಲ್ಲಿಸಲಾಯಿತು.

ದೀಪದ ಗಿರಿ ಒಡ್ಡಿನ ರೈತರು ಇಲ್ಲಿನ ನಿವಾಸಿಗಳ ಸಮಸ್ಯೆಗಳನ್ನು ಬಗೆ ಹರಿಸಬೇಕು ಎಂದು ಮಲೆ ಮಹದೇಶ್ವರ ಬೆಟ್ಟ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರು ಹಾಗೂ ಮುಖ್ಯಮಂತ್ರಿಯವರಿಗೆ ಪ್ರಾಧಿಕಾರ ಕಾರ್ಯದರ್ಶಿ ರಘು ಅವರ ಮೂಲಕ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಹನೂರು ತಾಲ್ಲೂಕು ಅಧ್ಯಕ್ಷ ಚಂಗಡಿ ಕರಿಯಪ್ಪ ಮತ್ತು ದೀಪದ ಗಿರಿ ಒಡ್ಡಿನ ರೈತರು ನಿವಾಸಿಗಳು ಮನವಿ ಪತ್ರ ಸಲ್ಲಿಸಿದರು. ಈ ಬಗ್ಗೆ ತಾಲ್ಲೂಕು ರೈತ ಸಂಘದ ಅಧ್ಯಕ್ಷ ಚಂಗಡಿ ಕರಿಯಪ್ಪ ಅವರು ಮಾತನಾಡಿ ದೀಪದ ಗಿರಿ ಒಡ್ಡಿನಲ್ಲಿ ಮಹದೇಶ್ವರ ಸ್ವಾಮಿಯ 108 ಅಡಿ ಪ್ರತಿಮೆ ಅಭಿವೃದ್ಧಿಗಾಗಿ ಹಿಂದಿನ ಕಾಲದಿಂದಲ್ಲೂ ವ್ಯಾವಸಯ ಹಾಗೂ ಜೀವನ ಸಾಗಿಸಿಸುತ್ತಿದ್ದ ರೈತರು ನಿವಾಸಿಗಳ ವ್ಯಾವಸಾಯದ ಭೂಮಿಯನ್ನು ವಶಪಡಿಸಿಕೊಂಡಿದ್ದಾರೆ.

# ಧೈರ್ಯದಿಂದ ಪರೀಕ್ಷೆ ಎದುರಿಸಿ: ಬಿಇಒ

• ಉದಯವಾಹಿನಿ ಕೆಜಿಎಫ್

ಕೆಜಿಎಫ್ ಶೈಕ್ಷಣಿಕ ವ್ಯಾಪ್ತಿಯಲ್ಲಿ 54 ಶಾಲೆಗಳಲ್ಲಿರುವ 3000 ಮಕ್ಕಳು ಈ ಭಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಎದುರಿಸುತ್ತಿದ್ದು ಹಿಂದಿನ ವರ್ಷಗಳಿಗಿಂತ ಅತಿ ಹೆಚ್ಚು ಫಲಿತಾಂಶವನ್ನು ನೀಡಬೇಕು ಎಂಬ ದೃಷ್ಠಿಯಿಂದ ಶಾಲೆ ಮುಗಿದ ನಂತರವು ಸಹ ವಿಶೇಷ ತರಗತಿಗಳನ್ನು ಮಾಡಲಾಗುತ್ತಿದೆ ತಜ್ಞ ಶಿಕ್ಷಕರು ಭೋದನೆ ಮಾಡುತ್ತಿದ್ದಾರೆ ಎಂದು ಹೇಳಿದರು.



ನಗರದಲ್ಲಿ ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಸೈದಾಭಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಪಠ್ಯಕ್ರಮವನ್ನು ಪೂರ್ಣಗೊಳಿಸಲಾಗಿದೆ ಇದೀಗ ಭಾನುವಾರದಂದು ಹಾಗೂ ಸಂಜೆ ತರಗತಿ ಇತರೆ ದಿನಗಳಲ್ಲಿ ತರಗತಿಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳಿಗೆ ಧೈರ್ಯ ತುಂಬುವ ಮತ್ತು ಪರೀಕ್ಷೆಯನ್ನು ಸುಲಭವಾಗಿ ಎದುರಿಸಲು ಸಾದ್ಯವಾಗುವಂತೆ ಮಾಡಲಾಗುತ್ತಿದೆ ಶಿಕ್ಷಣ ಇಲಾಖೆಯಿಂದ ಬಿಡುಗಡೆ ಮಾಡಿರುವ ಪ್ರಶ್ನೆ ಪತ್ರಿಕೆಗಳು ಬೋರ್ಡ್‌ನಿಂದ ಬಿಡುಗಡೆ ಮಾಡಿರುವ ಪ್ರಶ್ನೆ ಪತ್ರಿಕೆಗಳನ್ನು ಭೋದಿಸುತ್ತಿದ್ದೆವೆ ಶಾಲೆಗಳಲ್ಲಿ ಗುಂಪುಗಳನ್ನು ರಚಿಸಿಕೊಂಡು ಅವರೇಜ್ ಬಿಲೋ ಅವರೇಜ್ ಮಕ್ಕಳನ್ನು ವಿಂಗಡಣೆ ಮಾಡಿ ಇಬ್ಬರಿಗೂ ಪ್ರತ್ಯೆಕವಾಗಿ ಶಿಕ್ಷಕರು ಭೋಧನೆ ಮಾಡುತ್ತಿದ್ದಾರೆ.

ಇಂಟರ್‌ನಲ್ ಮಾರ್ಕ್ ಬಗ್ಗೆ ಬೋರ್ಡ್‌ನಿಂದ ಆದೇಶ ಬಂದಿದ್ದು ಅದನ್ನು ಪೂರ್ಣಗೊಳಿಸಲಾಗಿದೆ ಮತ್ತು 3 ವಿಶೇಷ ತಂಡಗಳನ್ನು ರಚಿಸಲಾಗಿದ್ದು ವಿಶೇಷ ತಂಡದಲ್ಲಿರುವ ತಜ್ಞ ಶಿಕ್ಷಕರು ಪ್ರತಿಯೊಂದು ಶಾಲೆಗೆ ಭೇಟಿ ನೀಡಿ ಶಾಲೆಯಲ್ಲಿ ಯಾವ ರೀತಿ ಭೋದನೆ ಮಾಡುತ್ತಿದ್ದಾರೆ ಎಂಬುದನ್ನು ಪರಿಶೀಲನೆ ನಡೆಸುತ್ತಿದ್ದೇವೆ. ಪರಿಶೀಲನೆ ನಡೆಸುವ ತಂಡಗಳು ನನಗೆ ವರದಿಯನ್ನು ನೀಡಲಿದ್ದಾರೆ ಶಾಲೆಗಳಲ್ಲಿ ನ್ಯೂನತೆ ಕಂಡು ಬಂದರೆ ಅವುಗಳನ್ನು ಸರಿಪಡಿಸುವಂತೆ ಸೂಚಿಸುತ್ತಿದ್ದೇವೆ ಎಂದು ಹೇಳಿದರು.

# ಜಿಲ್ಲಾಸ್ಪತ್ರೆಗಳಲ್ಲಿ ಬಾಣಂತಿಯರ ಸಾವಿಗೆ ಖಂಡನೆ

• ಉದಯವಾಹಿನಿ ಮೈಸೂರು

ಜಿಲ್ಲಾಸ್ಪತ್ರೆಗಳಲ್ಲಿ ಬಾಣಂತಿಯರ ಸಾವು ಖಂಡಿಸಿ, ಅಗತ್ಯ ವೈದ್ಯರು, ಮೂಲ ಸೌಲಭ್ಯ ಕಲ್ಪಿಸುವಂತೆ ಒತ್ತಾಯಿಸಿ ಸೋಷಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ ವತಿಯಿಂದ ಪುರಭವನದ ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಮೆ ನಡೆಸಲಾಯಿತು.

ಜಿಲ್ಲಾಸ್ಪತ್ರೆಗಳಲ್ಲಿ ಬಾಣಂತಿಯರ ಸಾವು ಹೆಚ್ಚಾಗಿದೆ. ದೊಡ್ಡಾಸ್ಪತ್ರೆಗಳಲ್ಲಿ ಐಸಿಯು ಇಲ್ಲದೇ ರೋಗಿಗಳು ಸಾವನ್ನಪ್ಪುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಮೂಲ ಸೌಲಭ್ಯಗಳಿಲ್ಲದೆ ರೋಗಿಗಳು ಪರದಾಡುತ್ತಿದ್ದಾರೆ. ಸ್ವತಂತ್ರ ಭಾರತದಲ್ಲಿ ಜನರ ಆರೋಗ್ಯ ಸೇವೆಯ ಜವಾಬ್ದಾರಿ ಸರ್ಕಾರದ್ದೇ ಆಗಿದ್ದು, ಸಾಮಾಜಿಕ ಬದ್ಧತೆ ಆಗಿರಬೇಕು. ಬಹುತೇಕ ಸರ್ಕಾರಿ ಸಂಸ್ಥೆಗಳೇ ಜನರಿಗೆ ತಕ್ಕಮಟ್ಟಿಗೆ ಒಳ್ಳೆಯ ಚಿಕಿತ್ಸೆ ಒದಗಿಸುತ್ತಿದ್ದವು.

ಆದರೆ 1990ರ ದಶಕದಲ್ಲಿ ಜಾಗತೀಕರಣ, ಖಾಸ ಗೀಕರಣ, ಉದಾರೀಕರಣ ನೀತಿಗಳನ್ನು ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ ಬಳಿಕ ಖಾಸಗಿ ಉದ್ದಿಮೆಯಾಗಿ ಬದಲಾಗಿದೆ. ಇತ್ತೀಚಿನ ದಶಕಗಳಲ್ಲಿ ಇದು ಕಾರ್ಪೊರೇಟೀಕರಣಕ್ಕೆ ಒಳಗಾದ ಬಳಿಕವಂತೂ ಸಾರ್ವಜನಿಕ ಆರೋಗ್ಯ ಸೇವೆ ಸರ್ಕಾರದ ಅಸೀಮ ನಿರ್ಲಕ್ಷ್ಯಕ್ಕೆ


ಉದಯವಾಹಿನಿ ಚಿತ್ರ

ಒಳಗಾಗಿದೆ ಎಂದು ಕಿಡಿ ಕಾರಿದರು. ದೇಶದ ಜನತೆಗೆ ಒಳ್ಳೆಯ ದಿನಗಳನ್ನು ಕೊಡುತ್ತೇವೆಂದು ಅಧಿಕಾರಕ್ಕೆ ಬಂದ ನರೇಂದ್ರ ಮೋದಿಯವರ ಸರ್ಕಾರ ಆಯುಷ್ಮಾನ್ ಭಾರತ ಯೋಜನೆ ಜಾರಿಗೆ ತಂದಿದೆ. ಆದರೆ, ಪ್ರತಿಯೊಂದು ಚಿಕಿತ್ಸೆ, ಪರೀಕ್ಷೆಗೆ ದರ ನಿಗದಿ ಮಾಡಲಾಗಿದೆ. ಆಯುಷ್ಮಾನ್ ಭಾರತ್ ಕಾರ್ಡ್, ಬಿಪಿಎಲ್ ಕಾರ್ಡ್ ಇರುವವರನ್ನು ಹೊರತುಪಡಿಸಿ ಉಳಿದವರು ಚಿಕಿತ್ಸೆಯ ದರ ಭರಿಸಬೇಕಾಗುತ್ತದೆ. ಬಡ ರೋಗಿಯೊಬ್ಬ ಬಿಪಿಎಲ್ ಕಾರ್ಡ್ ಹೊಂದಿಲ್ಲದಿದ್ದರೆ ದರ ಪಾವತಿಸಬೇಕು. ಇದರಿಂದ ಅಂತಿಮವಾಗಿ ಬಿಪಿಎಲ್ ಕಾರ್ಡ್ ಇಲ್ಲದವರೆಲ್ಲ ಖಾಸಗಿ ಆಸ್ಪತ್ರೆಗೇ ಹೋಗಲು ತಳ್ಳಿದಂತಾಗುತ್ತದೆ. ಹೀಗಾಗಿ ಸರ್ಕಾರ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಿ ಬಡವರಿಗೆ ಗುಣಮಟ್ಟದ ಚಿಕಿತ್ಸೆ ಸಿಗುವಂತೆ ಮಾಡಬೇಕು ಎಂದು ಆಗ್ರಹಿಸಿದರು. ಸರ್ಕಾರಿ ಆಸ್ಪತ್ರೆಗಳಿಗೆ ಗುಣಮಟ್ಟದ ಔಷಧಿಗಳನ್ನು ಪೂರೈಕೆ ಮಾಡಬೇಕು. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಗುಣಮಟ್ಟದ ಉಚಿತ ಚಿಕಿತ್ಸೆ ನೀಡಬೇಕು. ಆರೋಗ್ಯ ಕ್ಷೇತ್ರಕ್ಕೆ ಕೇಂದ್ರ ಮತ್ತು ರಾಜ್ಯ ಬಜೆಟ್ ಹೆಚ್ಚಿಸಬೇಕು. ಆರೋಗ್ಯ ಇಲಾಖೆಯ ಭ್ರಷ್ಟಾಚಾರ, ದುಂದು ವೆಚ್ಚಗಳಿಗೆ ಕಡಿವಾಣ ಹಾಕಬೇಕು ಎಂದು ಒತ್ತಾಯಿಸಿದರು.

**ಹಕ್ಕೊತ್ತಾಯಗಳು**


**ಮೈಸೂರಿನ ಜಿಲ್ಲಾ ಆಸ್ಪತ್ರೆ, ಕೆ.ಆರ್. ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ, ಎಸ್‌ಎಂಟಿ ಆಸ್ಪತ್ರೆ, ತಾಲ್ಲೂಕು ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ತಜ್ಞ ವೈದ್ಯರ ಮತ್ತು ಅರೆ ವೈದ್ಯಕೀಯ ಹುದ್ದೆಗಳನ್ನು ಭರ್ತಿ ಮಾಡಬೇಕು.**

# ಪಶು ಇಲಾಖೆ ಖಾಲಿ ಹುದ್ದೆ ಭರ್ತಿಗೆ ಒತ್ತಾಯ

• ಉದಯವಾಹಿನಿ ಮುಳಬಾಗಿಲು

ಜಿಲ್ಲಾದ್ಯಂತ ಪಶು ಇಲಾಖೆ ಖಾಲಿ ಇರುವ ಸಿಬ್ಬಂದಿಯನ್ನು ಕೂಡಲೇ ಭರ್ತಿ ಮಾಡಿ ಗ್ರಾಮೀಣ ಪ್ರದೇಶದ ಹಸುಗಳ. ಸೇವೆಗೆ ಹೆಚ್ಚಿನ ಆದ್ಯತೆ ನೀಡಿ, ಚಿಕಿತ್ಸೆ ನೀಡಲು ಹಣ ಕೇಳುವ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ರೈತ ಸಂಘದಿಂದ ಪಶು ಸಂಗೋಪನೆ ಇಲಾಖೆ ಮುಂದೆ ಹೋರಾಟ ಮಾಡಿ ಸಹಾಯಕ ನಿರ್ದೇಶಕರಿಗೆ ಮನವಿ ನೀಡಿ ಆಗ್ರಹಿಸಲಾಯಿತು.

ಮನವಿ ನೀಡಿ ಮಾತನಾಡಿದ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ನಾರಾಯಣಗೌಡ ಜಿಲ್ಲೆಯಲ್ಲಿ ಸತತ ಬರಗಾಲದ ಹಿನ್ನಲೆಯಲ್ಲಿ ಅಂರ್ತಜಲ ದಿನೆ ದಿನೆ ಕುಸಿತಗೊಂಡು ಕೊಳವೆಬಾವಿಗಳು ಕೈಕೊಟ್ಟು ಬೆಳೆ ಕೈಗೆ ಸಿಗದೆ ಖಾಸಗಿ ಸಾಲಕ್ಕೆ ಸಿಲುಕಿ ಕೃಷಿಯಿಂದ ವಿಮುಕ್ತಿ ಹೊಂದುತ್ತಿದ್ದ, ಜಿಲ್ಲೆಯ ರೈತರ ಬಾಳಿಗೆ ಬೆಳಕಾಗಿ ಹೈನೋದ್ಯಮ ಕೈ ಹಿಡಿದಿದೆ ಶೇಕಡ 90 ರಷ್ಟು ಗ್ರಾಮೀಣ ಪ್ರದೇಶ ಜನರು ಹೈನುಗಾರಿಕೆಯಿಂದ ಜೀವನ ಮಾಡುತ್ತಿದ್ದು, ಹಾಲು ಉತ್ಪಾದನೆಯಲ್ಲಿ ಕೋಲಾರ ಜಿಲ್ಲೆ ಪ್ರಥಮ ಸ್ಥಾನದಲ್ಲಿದೆ. ಸಮರ್ಪಕವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಪಶು ವೈದ್ಯ ಸೇವೆ ಇಲ್ಲದೆ ಜನ ಸಾಮಾನ್ಯರು ಪರದಾಡಬೇಕಾದ ಪರಿಸ್ಥಿತಿ ಇದ್ದರು ಇದನ್ನು ಗಂಭೀರವಾಗಿ ಪರಿಗಣಿಸುವಲ್ಲಿ ಉಸ್ತುವಾರಿ ಸಚಿವರು ಮತ್ತು ಸರ್ಕಾರ ವಿಫಲವಾಗಿದೆ ಎಂದು ಅಸಮದಾನ ವ್ಯಕ್ತಪಡಿಸಿದರು.


ಉದಯವಾಹಿನಿ ಚಿತ್ರ

ಮನವಿ ಸ್ವೀಕರಿಸಿ ಮಾತನಾಡಿದ ಸಹಾಯಕ ನಿರ್ದೇಶಕರಾದ ಅನುರಾದ ಮಾತನಾಡಿ ಇಲಾಖೆಯಲ್ಲಿ ಶೇಕಡ 60% ರಷ್ಟು ಸಿಬ್ಬಂದಿ ಕೊರತೆ ಇದೆ. ಇರುವ ಸಿಬ್ಬಂದಿಗೆ 3-4 ಹೋಬಳಿಗಳಿಗೆ ಪ್ರಭಾರವಾಗಿ ನೇಮಕ ಮಾಡಿ ಕೆಲಸದ ಒತ್ತಡ ಹೆಚ್ಚಾಗಿದೆ ಜೊತೆಗೆ ಗ್ರಾಮೀಣ ಪ್ರದೇಶಗಳ ಸಮರ್ಪಕವಾದ ಸೇವೆಗೆ ಹಣ ಕೇಳುವ ಬಗ್ಗೆ ಹೆಚ್ಚಿನ ದೂರುಗಳು ಬಂದಿದ್ದು, ಅದನ್ನು ಸರಿಪಡಿಸುವ ಜೊತೆಗೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂತೆ ಹಿರಿಯ ಅಧಿಕಾರಿಗಳೊಡನೆ ಚರ್ಚೆ ಮಾಡಿ ಸರ್ಕಾರಕ್ಕೆ ಮಾಹಿತಿ ನೀಡುವ ಭರವಸೆಯನ್ನು ನೀಡಿದರು.ಮನವಿ ನೀಡುವಾಗ.ಬಂಗಾರಿ ಮಂಜು. ರಾಜ್ಯ ಪ್ರಧಾನ ಕಾರ್ಯದರ್ಶಿ ಪಾರುಖಪಾಷ. ರಾಜೇಶ. ಬಾಸ್ಕರ್. ಹೆಬ್ಬಣಿ. ಅನಂದ ರಡ್ಡಿ. ಸುನಿಲ ಕುಮಾರ ಮುಂತಾದವರಿದ್ದರು.

> **ಇರುವ ಸಿಬ್ಬಂದಿ ಗ್ರಾಮೀಣ ಪ್ರದೇಶಗಳ ಸೇವೆಯೆಂದರೆ ಅಸಹ್ಯವಾಗಿ ವರ್ತನೆ ಮಾಡುವ ಜೊತೆಗೆ ಹಳ್ಳಿಗೆ ಕಾಲಿಟ್ಟರೆ ಹಣ ವಿಲ್ಲದೆ ಯಾವುದೇ ಚಿಕಿತ್ಸೆ ನೀಡುತ್ತಿಲ್ಲ ಅದರ ಜೊತೆಗೆ ಸರ್ಕಾರದಿಂದ ಬರುವ ಔಷಧಿಗಳನ್ನು ಸಮರ್ಪಕವಾಗಿ ವಿತರಣೆ ಮಾಡದೆ, ದಾಸ್ತಾನು ಮಾಡಿರುವ ಕೊಠಡಿಗಳಲ್ಲಿಯೇ ಕೊಳೆಯುತ್ತಿದ್ದರೂ ಅದರ ಬಗ್ಗೆ ಗಮನಹರಿಸದ ಪಶು ಉಪನಿರ್ದೇಶಕರ ರೈತ ವಿರೋಧಿ ದೋರಣೆಗೆ ಜನ ಸಾಮಾನ್ಯರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ**
> -ಯಲವಳ್ಳಿ.ಪ್ರಭಾಕರ, ತಾಲ್ಲೂಕಿನ.ಅಧ್ಯಕ್ಷ.

# ಪರೀಕ್ಷೆಗೆ ಆತ್ಮಸ್ಥೈರ್ಯದೊಂದಿಗೆ ಸಿದ್ಧರಾಗಿ: ಎ.ಎನ್.ನಾಗೇಂದ್ರಪ್ರಸಾದ್

• ಉದಯವಾಹಿನಿ ಕೋಲಾರ

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಪರೀಕ್ಷೆ ಕುರಿತು ಭಯ ಪಡುವ ಅಗತ್ಯವಿಲ್ಲ, ಆತ್ಮಸ್ಥೈರ್ಯ ಹಾಗೂ ಸಂಭ್ರಮದಿಂದ ಪರೀಕ್ಷೆ ಎದುರಿಸಲು ಸಿದ್ದರಾಗಿ, ಪಠ್ಯಕ್ರಮ ಪೂರ್ಣಗೊಂಡಿರುವುದನ್ನು ಖಾತ್ರಿ ಮಾಡಿಕೊಂಡು ನೈಜಗುರಿ ಸಾಧನೆಗೆ ಓದು ಮುಂದುವರೆಸಿ ಎಂದು ಎಸ್ಸೆಸ್ಸೆಲ್ಸಿ ಪರೀಕ್ಷಾ ನಿವೃತ್ತ ಜಿಲ್ಲಾ ನೋಡಲ್ ಅಧಿಕಾರಿ ಎ.ಎನ್.ನಾಗೇಂದ್ರಪ್ರಸಾದ್ ಕರೆ ನೀಡಿದರು.

ಜಿಲ್ಲೆಯ ಮುಳಬಾಗಿಲು ತಾಲ್ಲೂಕು ಎಂ.ಅಗ್ರಹಾರದ ಜಯಪ್ರಕಾಶ್ ನಾರಾಯಣ್ ಪ್ರೌಢಶಾಲೆಯಲ್ಲಿ 2024-25ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಬರೆಯಲಿರುವ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಲಿಕೆಯಲ್ಲಿ ಶಿಸ್ತು ಇರಬೇಕು, ಶಾಲೆ,ಮನೆಯಲ್ಲಿ ಕಾಲ ಹರಣ ಮಾಡಬಾರದು ಎಂದು ಸಲಹೆ ನೀಡಿದರು.

ಎಸ್ಸೆಸ್ಸೆಲ್ಸಿ ಜೀವನದ ಮೊದಲ ಪಬ್ಲಿಕ್ ಪರೀಕ್ಷೆಯಾಗಿದೆ, ಇದರಿಂದ ನಿಮ್ಮಲ್ಲಿ ಭಯ ಸಹಜ ಆದರೆ ನೀವು ಕಲಿಕೆಯಲ್ಲಿ ದೃಢತೆ ಸಾಧಿಸಿದರೆ ನೀವು ಹೆದರುವ ಅಗತ್ಯವೇ ಇಲ್ಲ, ಅದಕ್ಕಾಗಿಯೇ ಪೂರ್ವ ಸಿದ್ದತಾ ಪರೀಕ್ಷೆಗಳನ್ನು ನಡೆಸುವ ಮೂಲಕ ನಿಮ್ಮಲ್ಲಿ ಧೈರ್ಯ ತುಂಬುವಕೆಲಸ ಮಾಡಲಾಗುತ್ತಿದೆ ಎಂದರು.


ಉದಯವಾಹಿನಿ ಚಿತ್ರ

ಪಠ್ಯದಲ್ಲಿನ ಪ್ರತಿ ಪ್ರಶ್ನೆಗೂ ಉತ್ತರಿಸುವ ಶಕ್ತಿ ನಿಮಗೆ ಬಂದರೆ ಹೆದರಿಕೆ ನಿಮ್ಮಿಂದ ತಾನಾಗಿಯೇ ದೂರವಾಗುತ್ತದೆ, ನಿತ್ಯ ವೇಳಾಪಟ್ಟಿಹಾಕಿಕೊಂಡು ಅಭ್ಯಾಸ ಮಾಡಿ, ಕಷ್ಟವಾದ ಪ್ರಶ್ನೆಗಳಿಗೆ ಉತ್ತರವನ್ನು ಒಂದೆರಡು ಬಾರಿ ಬರೆದು ಅಭ್ಯಾಸ ಮಾಡಿ ಎಂದು ಕಿವಿ ಮಾತು ಹೇಳಿದರು.

ಮೊಬೈಲ್ ನೋಡದಿರಿ, ಓದಲು ಆಸಕ್ತಿ ಹೆಚ್ಚಲು ಉತ್ತಮ ನಿದ್ದೆಯೂ ಅಗತ್ಯವಿದೆ, ಆರೋಗ್ಯದ ಕಡೆ ಗಮನ ನೀಡಿ, ಮುರುಕುಲು ತಿಂಡಿ, ಎಣ್ಣೆಯಿಂದ ಕರಿದ ಪದಾರ್ಥ ತಿನ್ನದಿರಿ, ಪರೀಕ್ಷೆ ಮುಗಿಯುವವರೆಗೂ ಎಚ್ಚರವಹಿಸಿ ಗೈರು ತಪ್ಪಿಸಿ ಎಂದರು. ಅನ್ವಯಿಕ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರಿಸುವ ಮೂಲಕ ಶೇ.100 ಸಾಧನೆಗೆ ಪಠ್ಯ ಓದಿಗೆ ಒತ್ತು ನೀಡಿ, ಈಗಾಗಲೇ ಇಲಾಖೆಯಿಂದ ಮಾದರಿ ಪ್ರಶ್ನೆಪತ್ರಿಕೆ, ಪ್ರಶ್ನೋತ್ತರ ನೀಡಿದ್ದು, ಅದನ್ನು ನಿತ್ಯ ಬರೆದು ಅಭ್ಯಾಸ ಮಾಡಿ ಎಂದರು.ಶೇ.100 ಸಾಧನೆಗೆ ಪಠ್ಯಪುಸ್ತಕ ಓದು ಅತಿ ಅವಶ್ಯ ಎಂದರು.

**ನೈಜಗುರಿ ಸಾಧನೆಗೆ ಓದು ಮುಂದುವರೆಸಿ**

ಮುಖ್ಯಶಿಕ್ಷಕ ನಾರಾಯಣಸ್ವಾಮಿ ಮಾತನಾಡಿ, ಏಕಾಗ್ರತೆ ಅತಿ ಮುಖ್ಯವಾಗಿದೆ, ಶಾಲೆಗೆ ಗೈರಾಗದಿರಿ, ಆರೋಗ್ಯ ರಕ್ಷಣೆಗೆ ಒತ್ತು ನೀಡಿ, ಪ್ರತಿ ನಿತ್ಯ ಎಷ್ಟು ಓದಬೇಕು ಎಂಬುದರ ವೇಳಾಪಟ್ಟಿ ಹಾಕಿಕೊಳ್ಳಿ ಎಂದರು. ಈ ಸಂದರ್ಭದಲ್ಲಿ ಶಾಲೆಯ ಎಲ್ಲಾ ಶಿಕ್ಷಕರು, ವಿದ್ಯಾರ್ಥಿಗಳು ಹಾಜರಿದ್ದರು.

# ಗೋಮಾಳದಲ್ಲಿನ ಕಟ್ಟಡಗಳ ಖಾತೆ ರದ್ಧತಿಗೆ ಆಗ್ರಹ

• ಉದಯವಾಹಿನಿ ಕೆಜಿಎಫ್

ಘಟ್ಟಕಾಮದೇನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸರ್ಕಾರಿ ಪಿ.ನಂಬರ್ ಗೋಮಾಳದಲ್ಲಿ ನಿರ್ಮಿಸಲಾಗಿರುವ ಕಟ್ಟಡಗಳಿಗೆ ಇ ಖಾತೆಗಳನ್ನು ಮಾಡಲಾಗಿದ್ದು ರದ್ದುಪಡಿಸುವಂತೆ ಅಂತರಾಷ್ಟ್ರೀಯ ಮಾನವ ಹಕ್ಕುಗಳ ಸಂಘಟನೆ ಅಧ್ಯಕ್ಷ ಎಲ್. ಬಾಬು ತಾಲ್ಲೂಕು ಪಂಚಾಯ್ತಿ ಇಒ ವೆಂಕಟೇಶಪ್ಪ ರವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಮಾನವ ಹಕ್ಕುಗಳ ಸಂಘಟನೆ ಅಧ್ಯಕ್ಷ ಎಲ್.ಬಾಬು ಘಟ್ಟಕಾಮದೇನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ 2016ರಿಂದ ಸರಿ ಸುಮಾರು 100 ಕ್ಕೂ ಅಧಿಕ ಅಕ್ರಮ ಇ ಖಾತೆಗಳನ್ನು ಮಾಡಲಾಗಿದ್ದು ಅದರಲ್ಲೂ ಪಿ. ನಂಬರ್‌ನಲ್ಲಿರುವ ಜಮೀನುಗಳನ್ನು ಕಟ್ಟಡಗಳಿಗೆ ಇ ಖಾತೆ ಮಾಡಬಾರದು ಎಂದು ಆದೇಶವಿದ್ದರು ಘಟ್ಟಕಾಮದೇನಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ಅಕ್ರಮವಾಗಿ ಇ ಖಾತೆಹಗಳನ್ನು ಮಾಡಲಾಗಿದ್ದು ಎಲ್ಲಾ ಇ-ಖಾತೆಗಳನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸಿದರು. ಮನವಿಯನ್ನು ಸ್ವೀಕರಿಸಿದ ಇಒ ವೆಂಕಟೇಶಪ್ಪ ಮಾತನಾಡಿ ನಾನು ಇಲ್ಲಿ ಅಧಿಕಾರವಹಿಸಿಕೊಂಡು ಕೇವಲ 20 ದಿನಗಳು ಕಳೆದಿದ್ದು ಘಟ್ಟಕಾಮದೇನಹಳ್ಳಿ ಪಂಚಾಯ್ತಿ ಅಧಿಕಾರಿಗಳನ್ನು ಕರೆದು ಇ ಖಾತೆಗಳ ಬಗ್ಗೆ ಸಂಪೂರ್ಣವಾಗಿ ಮಾಹಿತಿಯನ್ನು ಕಲೆ ಹಾಕಿ ತಪ್ಪು ಮಾಡಿದ್ದಾರೆ ಕ್ರಮಕೈಗೊಳ್ಳಲು ಹಿಂಜರಿಯುವುದಿಲ್ಲ ಎಂದು ಹೇಳಿದರು.

# ಸಂಸದ ಸುಧಾಕರ್ ವಿರುದ್ಧ ರೆಡ್ಡಿ ಆರೋಪಗಳ ಸುರಿಮಳೆ

## • ತನ್ನ ಸ್ವಾರ್ಥಕ್ಕಾಗಿ ಯಾವ ರೀತಿಯ ಕೆಳಮಟ್ಟಕ್ಕೂ ಹೋಗುವಂತಹ ಕನಿಷ್ಠ ಮಟ್ಟದ ರಾಜಕಾರಣಿ ಡಾ. ಕೆ ಸುಧಾಕರ್

• ಉದಯವಾಹಿನಿ ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ಲೋಕಸಭಾ ಸದಸ್ಯ ಡಾಕ್ಟರ್ ಕೆ ಸುಧಾಕರ್ ಒಬ್ಬ ಸ್ವಾರ್ಥ ರಾಜಕಾರಣಿ ಆಗಿದ್ದು ಇವರು ಪರರ ಹೇಳಿಕೆಯನ್ನು ಸಹಿಸದ ಸ್ವಾರ್ಥಿಗಳಾಗಿದ್ದು ಶೀಘ್ರದಲ್ಲಿಯೇ ಇವರ ಭ್ರಷ್ಟಾಚಾರದ ಸಮಗ್ರ ಮಾಹಿತಿಯನ್ನು ಬಯಲು ಮಾಡುತ್ತೇನೆ ಎಂದು ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಸಂದೀಪ ಬಿ. ರೆಡ್ಡಿ ತಿಳಿಸಿದರು. ನಗರದ ಜಿಲ್ಲಾಧಿಕಾರಿಗಳ ವಸ್ತಿಗೃಹ ಮುಂಭಾಗದಲ್ಲಿ ಇರುವ ತಮ್ಮ ಕಚೇರಿಯಲ್ಲಿ ಏರ್ಪಡಿಸಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ತನ್ನ ಸ್ವಾರ್ಥಕ್ಕಾಗಿ ಯಾವ ರೀತಿಯ ಕೆಳಮಟ್ಟಕ್ಕೂ ಹೋಗುವಂತಹ ಕನಿಷ್ಠ ಮಟ್ಟದ ರಾಜಕಾರಣಿ ಡಾ. ಕೆ ಸುಧಾಕರ್ ಎಂದು ಬಣ್ಣಿಸಿದ್ದರು.

**ಚಿಕ್ಕಬಳ್ಳಾಪುರ ಲೋಕಸಭಾ ಸದಸ್ಯ ಡಾ.ಕೆ ಸುಧಾಕರ್ ಒಬ್ಬ ಸ್ವಾರ್ಥ ರಾಜಕಾರಣಿ**

ರಾಜಕಾರಣದಲ್ಲಿ ಈ ಮೊದಲು ನಾನು ಮತ್ತು ಸುಧಾಕರ್ ಇಬ್ಬರೂ ಕಾಂಗ್ರೆಸ್ ಪಕ್ಷದಲ್ಲಿಯೇ ಇದ್ದವು ನಮ್ಮ ತಾಯಿಯವರನ್ನು ಜಿಲ್ಲಾ ಪಂಚಾಯತ್ ಚುನಾವಣೆಗೆ ನಿಲ್ಲಿಸಿದಾಗ ಇದೇ ಸುಧಾಕರ್ ರಾಜಕೀಯ ದ್ವೇಷದಿಂದ ಮತ್ತೊಬ್ಬ ಸ್ವತಂತ್ರ ಅಭ್ಯರ್ಥಿಯನ್ನು ಅದೇ ಕ್ಷೇತ್ರಕ್ಕೆ ಹಾಕಿ ಸೋಲಿಸಿದರು. ನನ್ನ ರಾಜಕೀಯ ಜೀವನದಲ್ಲಿ ಹಾಗೂ ವೈಯಕ್ತಿಕ ಜೀವನದಲ್ಲಿಯೂ ಸುಧಾಕರ್ ದೇಶದ ಆಟ ಆಡುತ್ತಿದ್ದಾರೆ .

**ಹೊಟ್ಟೆ ಉರಿ**

**ಭಾರತೀಯ ಜನತಾ ಪಕ್ಷದ ಚಿಕ್ಕಬಳ್ಳಾಪುರ ಜಿಲ್ಲಾ ಘಟಕದ ಅಧ್ಯಕ್ಷನಾಗಿ ನನ್ನ ನೇಮಕ ಹೊರ ಬಿದ್ದ ದಿನದಿಂದಲೇ ಅವರಿಗೆ ಹೊಟ್ಟೆ ಉರಿ ಶುರುವಾಗಿ ಎಲ್ಲಿ ಅವರಿಗಿಂತ ನಾನು ಬೆಳೆದು ಬಿಡುತ್ತೇನೆ ಎಂಬ ಆತಂಕದಿಂದ ನನ್ನ ಅಧ್ಯಕ್ಷಗಿರಿಯನ್ನು ಹೋಲ್ಡ್ ಮಾಡಿಸಿದ್ದಾರೆ ಒಬ್ಬ ರಾಜಕಾರಣಿ ಇಷ್ಟೊಂದು ಕೀಳು ಮಟ್ಟಕ್ಕೂ ಇಳಿಯಬಹುದೇ ಎಂಬುದು ನನಗೆ ತಿಳಿದಿದ್ದೆ ಈಗ ಎಂದರು.**


ಉದಯವಾಹಿನಿ ಚಿತ್ರ

ಇದಕ್ಕೆ ತಕ್ಕ ಪ್ರತಿಫಲವನ್ನು ಅವರು ಉಣ್ಣುತ್ತಾರೆ. ಇದರಲ್ಲಿ ಯಾವುದೇ ಸಂಶಯ ಇಲ್ಲ ಎಂದರು.

ಕೊರೋನಾ ಸಂದರ್ಭದಲ್ಲಿ ಡಾಕ್ಟರ್ ಕೆ ಸುಧಾಕರ್ ನಡೆಸಿದ ಭ್ರಷ್ಟಾಚಾರದ ಪಿಂಟು ಪಿನ್ ಮಾಹಿತಿ ನನ್ನಲ್ಲಿದೆ ಅದನ್ನು ಕರೋನಾ ಭ್ರಷ್ಟಾಚಾರ ತನಿಕ ಆಯೋಗದ ಜಸ್ಟಿಸ್ ಕುನ್ನಾರ್ ಅವರಿಗೆ ಅಗತ್ಯ ಬಿದ್ದಾಗ ನಾನು ನೀಡುತ್ತೇನೆ ಎಂದರು.

**ತೇಜೋವಧೆ ಮಾಡುವ ದುಷ್ಟಬುದ್ಧಿ**

> **ಕೊರೋನಾ ಸಂದರ್ಭದಲ್ಲಿ ಇವರು ಭ್ರಷ್ಟಾಚಾರ ನಡೆಸಿದ ಹಣವನ್ನು ತಮಿಳುನಾಡಿನಲ್ಲಿರುವ ಒಂದು ಹಣಕಾಸು ಸಂಸ್ಥೆಗೆ ಬ್ಯಾಂಕ್‌ನಿಂದ ನೇರವಾಗಿ ಹಣ ವರ್ಗಾವಣೆ ಮಾಡಿದ್ದು ಅಲಿಯು ಸಹ ಇವರು ದಾಖಲೆ ಸಮೇತ ಸಿಕ್ಕಿಹಾಕಿಕೊಳ್ಳುತ್ತಾರೆ ಎಂದರು. ರಾಜಕೀಯ ಗಂಧಗಾಳಿಯ ಇಲ್ಲದ ಪ್ರದೀಪ್ ಈಶ್ವರ್ ಎಂಬ ಒಬ್ಬ ಹುಡುಗನ ಮೇಲೆ ಸೋತ ಸುಧಾಕರ್ ತಮ್ಮ ಸೋಲಿಗೆ ಕಾರಣವನ್ನು ಅರಿತು ರಾಜಕೀಯ ನಡೆ ಹಾಗೂ ವರ್ತನೆಯನ್ನು ಬದಲಾಯಿಸಿಕೊಳ್ಳಬೇಕಾಗಿತ್ತು ಆದರೆ ಅವರು ಹಾಗೆ ಮಾಡಿಕೊಳ್ಳಲೇ ಇಲ್ಲ ಅವರು ಕನಸು ಮನಸ್ಸಿನಲ್ಲಿಯೂ ಸಹ ಅವರ ವೈಯಕ್ತಿಕ ಸ್ವಾರ್ಥವನ್ನು ನೋಡಿಕೊಳ್ಳುತ್ತಾರೆ ಹೊರತು ಪರರ ಏಳಿಗೆಯನ್ನು ನೋಡಿರುವುದಿಲ್ಲ** -ಸಂದೀಪ ಬಿ. ರೆಡ್ಡಿ

ನಾನು ಹಾಗೂ ನನ್ನಂತಹ ಲಕ್ಷಾಂತರ ಮಂದಿ ಯುವಕರು ಪ್ರಧಾನಿ ನರೇಂದ್ರ ಮೋದಿರವರ ರಾಜಕಾರಣೆದಿಂದ ಆಕರ್ಷಿತರಾಗಿ ಕನಸುಗಳನ್ನು ಕಟ್ಟಿಕೊಂಡು ರಾಜಕಾರಣ ಪ್ರವೇಶಿಸಿದ್ದೇವೆ ನಾನು ವಿಜಯೇಂದ್ರರವರ ಬಳಿ ಲಾಭ ನಡೆಸಿ ಅಧ್ಯಕ್ಷಗಿರಿ ಪಡೆದಿಲ್ಲ ನಾನು ಅಧ್ಯಕ್ಷನಾಗುವ ತನಕ ವಿಜಯೇಂದ್ರರವರನ್ನು ಭೇಟಿ ಮಾಡಿಯೇ ಇಲ್ಲ ನನ್ನನ್ನು ಮುಂದಿಟ್ಟುಕೊಂಡು ವಿಜಯೇಂದ್ರರವರ ತೇಜೋವಧೆ ಮಾಡುವ ದುಷ್ಟಬುದ್ಧಿ ಡಾಕ್ಟರ್ ಕೆ ಸುಧಾಕರ್ ಅವರದು ಎಂದರು.

ಜನರ ಸೇವೆ ಮಾಡುವುದು ನನ್ನ ಗುರಿಯ ಹೊರತು ರಾಜಕಾರಣ ಮಾಡುವುದು ಎರಡನೆಯ ಆಯ್ಕೆ ನನ್ನ ಸ್ವಂತ ದುಡಿಮೆಯಿಂದ ನಾನು ಜನರ ಸೇವೆ ಮಾಡುತ್ತೇನೆ.

ಮುಂದಿನ ದಿನಗಳಲ್ಲಿ ಸುಧಾಕರ್ ತಾನು ಮಾಡಿದ ಎಲ್ಲಾ ಪಾಪಗಳಿಗೂ ತಾನೇ ಹೊರೆಹೊತ್ತು ಹೊಣೆ ಹೊತ್ತು ಫಲಿತವನ್ನು ಪಡೆಯುತ್ತಾನೆ ಎಂದರು.

ಅಂತರಾಳದಿಂದ...
EDITORIAL

# ನಮ್ಮ ಮೆಟ್ರೊ ದೇಶದಲ್ಲೇ ದುಬಾರಿ ಸುಲಿಗೆಯನ್ನು ತಕ್ಷಣ ನಿಲ್ಲಿಸಿ

ಬೆಂಗಳೂರು ಮೆಟ್ರೊ ರೈಲು ನಿಗಮವು (ಬಿಎಂಆರ್‌ಸಿಎಲ್) ನಮ್ಮ ಮೆಟ್ರೊ ಪ್ರಯಾಣ ದರವನ್ನು ಏಕಾಏಕಿ ಭಾರಿ ಪ್ರಮಾಣದಲ್ಲಿ ಹೆಚ್ಚಿಸುವ ಮೂಲಕ ಅಕ್ಷರಶಃ ಪ್ರಯಾಣಿಕರ ಸುಲಿಗೆಗೆ ಇಳಿದಿದೆ. ಪ್ರಯಾಣ ದರವನ್ನು ದೊಡ್ಡ ಪ್ರಮಾಣದಲ್ಲಿ ಹೆಚ್ಚಿಸಲು ನಿಗಮದ ಬಳಿ ಏನೇ ಸಬೂಬುಗಳಿದ್ದರೂ ಈ ನಿರ್ಧಾರವು ಯಾರೂ ಒಪ್ಪುವಂಥದ್ದಲ್ಲ. ದರ ಹೆಚ್ಚಳದ ಬಳಿಕ ದೇಶದಲ್ಲೇ ಬೆಂಗಳೂರು ಮೆಟ್ರೊ ಪ್ರಯಾಣವು ಅತ್ಯಂತ ದುಬಾರಿ ಎನಿಸಿದೆ. ಖಾಸಗಿ ವಾಹನಗಳ ಬಳಕೆಯನ್ನು ಕಡಿಮೆಗೊಳಿಸಿ, ಸಾರ್ವಜನಿಕ ಸಾರಿಗೆ ಬಳಕೆಯನ್ನು ಉತ್ತೇಜಿಸುವ ಮೂಲಕ ರಸ್ತೆಗಳ ಮೇಲಿನ ಒತ್ತಡವನ್ನು ಹಗುರಗೊಳಿಸಿ, ಸಂಚಾರದಟ್ಟಣೆಗೂ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಮೆಟ್ರೊ ಸಾರಿಗೆ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಗಿದೆ. ಆದರೆ, ಬಿಎಂಆರ್‌ಸಿಎಲ್ ಈಗ ಪ್ರಯಾಣದರ ಏರಿಕೆ ಮಾಡಿದ ಪರಿ ಹೇಗಿದೆಯೆಂದರೆ, ಜನ ಮೆಟ್ರೊ ಪ್ರಯಾಣವನ್ನೇ ತ್ಯಜಿಸಿ, ಖಾಸಗಿ ವಾಹನ ಬಳಸುವುದನ್ನು ಉತ್ತೇಜಿಸಲು ಹೊರಟಂತಿದೆ. ಗರಿಷ್ಠ ಶೇ 45ರಷ್ಟು ಹೆಚ್ಚಳ ಮಾಡಲಾಗಿದೆ ಎಂದು ಬಿಎಂಆರ್‌ಸಿಎಲ್ ಹೇಳುತ್ತಿದೆಯಾದರೂ ಹತ್ತಿರದ ನಿಲ್ದಾಣಗಳ ಪ್ರಯಾಣ ದರಗಳಲ್ಲಿ ಶೇ 100ರಷ್ಟು ಹೆಚ್ಚಳವಾಗಿದೆ ಎಂದು ಪ್ರಯಾಣಿಕರು ದೂರಿದ್ದಾರೆ. ಮೆಟ್ರೊ ಸಾರಿಗೆ ಇರುವುದು ಬರೀ ಉಳ್ಳವರ ಬಳಕೆಗಾಗಿ ಎಂಬ ಭ್ರಮೆಯಲ್ಲಿ ನಿಗಮದ ಆಡಳಿತ ಮಂಡಳಿ ಇದ್ದಂತಿದೆ.



> **ವಾಸಸ್ಥಳದಿಂದ ಕೆಲಸದ ಸ್ಥಳಕ್ಕೆ ಸಕಾಲದಲ್ಲಿ ತಲುಪಲು ಬಡವರು, ದಿನಗೂಲಿ ಕಾರ್ಮಿಕರು ಕೂಡ ಮೆಟ್ರೊ ಸಾರಿಗೆಯನ್ನು ಅವಲಂಬಿಸಿದ್ದರು. ವಿದ್ಯಾರ್ಥಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಮೆಟ್ರೊ ಬಳಸುತ್ತಿದ್ದರು. ಪ್ರಯಾಣ ದರದಲ್ಲಿ ಏಕಾಏಕಿ ಭಾರಿ ಏರಿಕೆ ಆಗಿದ್ದರಿಂದ ಅಷ್ಟೊಂದು ಹಣವನ್ನು ಹೊಂದಿಸಲು ಸಾಧ್ಯವಾಗದೆ ಅವರೆಲ್ಲ ಮೆಟ್ರೊ ಪ್ರಯಾಣವನ್ನೇ ತೊರೆಯುವಂತಾಗಿದೆ.**

ಪ್ರಯಾಣದರ ಹೆಚ್ಚಳದ ಬಳಿಕವೂ ಮೆಟ್ರೊ ಸಾರಿಗೆಯು ಆಟೊ ಪ್ರಯಾಣಕ್ಕೆ ಹೋಲಿಸಿದರೆ ಅಗ್ಗ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಅವರು ಹೇಳಿರುವುದು ಕೂಡ ವರದಿಯಾಗಿದೆ. ಈ ಹೋಲಿಕೆಯೇ ಹಾಸ್ಯಾಸ್ಪದ ಮತ್ತು ಸಮೂಹಸಾರಿಗೆ ವ್ಯವಸ್ಥೆಯ ಕುರಿತು ಆಡಳಿತವರ್ಗ ಅಸೂಕ್ಷ್ಮವಾಗಿ ಯೋಚಿಸುತ್ತಿರುವುದರ ಪ್ರತೀಕ.

ಒಂದುವೇಳೆ ಬಿಎಂಆರ್‌ಸಿಎಲ್ ಪೈಪೋಟಿ ನೀಡುವುದೇ ಇದ್ದರೆ ಜಗತ್ತಿನಲ್ಲೇ ಅತ್ಯಂತ ಅಗ್ಗದ ಸಮೂಹ ಸಾರಿಗೆಯನ್ನಾಗಿ ಬೆಂಗಳೂರು ಮೆಟ್ರೊ ಸೇವೆಯನ್ನು ರೂಪಿಸುವುದರತ್ತ ಆ ಪೈಪೋಟಿ ಇರಬೇಕು. ಸಾಲದ ತೀರುವಳಿ, ಸವಕಳಿಯ ಹೊರೆ ಮತ್ತು ಹೆಚ್ಚಿದ ದೈನಂದಿನ ಕಾರ್ಯಾಚರಣೆ ವೆಚ್ಚವನ್ನು ಸರಿದೂಗಿಸಲು ಈ ಹೆಚ್ಚಳವು ಅನಿವಾರ್ಯವಾಗಿದೆ ಎಂದು ಬಿಎಂಆರ್‌ಸಿಎಲ್ ಹೇಳಿದೆ. ಮುಂದಿನ ಐದು ವರ್ಷಗಳಲ್ಲಿ ಸಾಲ ತೀರಿಸಲು 10,422 ಕೋಟಿ ಬೇಕು, 7,316 ಕೋಟಿಯಷ್ಟು ಹಣ ಸವಕಳಿಗೆ ಬಂದ ಸಾಧನ–ಸಲಕರಣೆಗಳ ಬದಲಾವಣೆಗೆ ಬೇಕು ಎನ್ನುವುದು ನಿಗಮವು ನೀಡುವ ಲೆಕ್ಕಾಚಾರ. ಮೆಟ್ರೊ ರೈಲು ಮಾರ್ಗಗಳ ನಿರ್ಮಾಣ ಯೋಜನೆಯು ಕಾಲಮಿತಿಯಲ್ಲಿ ಮುಗಿದಿದ್ದರೆ ಇಷ್ಟೊಂದು ಸಾಲದ ಹೊರೆ ಉಳಿಯುತ್ತಿರಲಿಲ್ಲ. ಹಳದಿ ಮಾರ್ಗ ಸಿದ್ದವಾದರೂ ಬೋಗಿಗಳಿಲ್ಲದೆ ಅಲ್ಲಿ ಮೆಟ್ರೊ ಸಂಚಾರ ಶುರುಮಾಡಲು ಸಾಧ್ಯವಾಗಿಲ್ಲ. ನಿಗಮದ ಕಾರ್ಯವೈಖರಿಗೆ ಇದು ಕನ್ನಡಿ ಹಿಡಿಯುತ್ತದೆ. ಯೋಜನೆಯ ಅನುಷ್ಠಾನದಲ್ಲಿ ಕಾರ್ಯಕ್ಷಮತೆ ತೋರದೆ ಸಾಲದ ಹೊರೆಯನ್ನು ಹೆಚ್ಚಾಗಿಸಿಕೊಂಡು, ಅದನ್ನು ಪ್ರಯಾಣಿಕರ ಮೇಲೆ ವರ್ಗಾಯಿಸಲು ಹೊರಟಿರುವುದು ಯಾವ ಸೀಮೆಯ ನ್ಯಾಯ ದರ ಹೆಚ್ಚಳಕ್ಕೆ ರಾಜ್ಯ ಸರ್ಕಾರ ಕಾರಣ ಎಂದು ಬಿಜೆಪಿ ನಾಯಕರು ದೂರಿದರೆ, ಕೇಂದ್ರ ಸರ್ಕಾರ ಕಾರಣ ಎಂದು ಕಾಂಗ್ರೆಸ್ ನಾಯಕರು ದೂರುತ್ತಿದ್ದಾರೆ.

ಜನಸಾಮಾನ್ಯರನ್ನು ಮೂರ್ಖರನ್ನಾಗಿ ಮಾಡುವ ಸಲುವಾಗಿಯೇ ಈ ನಾಟಕ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಜಂಟಿಒಡೆತನ ಹೊಂದಿರುವ ಸಂಸ್ಥೆ ಬಿಎಂಆರ್‌ಸಿಎಲ್. ಕೇಂದ್ರ ಸರ್ಕಾರ ರಚಿಸಿದ ದರ ನಿಗದಿ ಸಮಿತಿಯ ಶಿಫಾರಸಿನ ಮೇರೆಗೆ ಈ ಏರಿಕೆ ಆಗಿದೆ. ಜನರ ಬಗ್ಗೆ ಕಳಕಳಿ ಇದ್ದರೆ ಎರಡೂ ಸರ್ಕಾರಗಳು ಒಟ್ಟಾಗಿ ಬೆಲೆ ಏರಿಕೆಯನ್ನು ತಡೆಹಿಡಿಯಬಹುದಿತ್ತು. ನಿಗಮದ ಪ್ರಸ್ತಾವಕ್ಕೆ ಸದ್ದಿಲ್ಲದೆ ಒಳಗೊಳಗೆ ಒಪ್ಪಿಗೆ ನೀಡಿ, ಈಗ ಬೀದಿಯಲ್ಲಿ ನಿಂತು ಮೊಸಳೆ ಕಣ್ಣೀರು ಸುರಿಸುತ್ತಿರುವವರಿಗೆ ಬಡವರ ಕಷ್ಟ ಅರ್ಥವಾಗುವುದಿಲ್ಲ. ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಇಂತಹ ನಾಟಕಗಳು ನಡೆಯುತ್ತವೆ ಅಷ್ಟೆ. ದರ ಏರಿಕೆಯ ಜಾರಿಯಲ್ಲಿ ವೈಪರೀತ್ಯಗಳು ಏನಾದರೂ ಆಗಿದ್ದರೆ ಅವಲೋಕಿಸುವುದಾಗಿ ಬಿಎಂಆರ್‌ಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕರು ಹೇಳಿದ್ದಾರೆ. ಪ್ರಯಾಣಿಕರ ಮೇಲೆ ಹೊರಿಸಿದ ಭಾರಿ ಹೊರೆಯನ್ನು ಹಿಂಪಡೆಯುವ ಕೆಲಸವನ್ನು ನಿಗಮವು ಆದಷ್ಟು ಬೇಗ ಮಾಡಬೇಕು. ವೆಚ್ಚ ಹೊಂದಾಣಿಕೆಗೆ ಬೇರೆ ದಾರಿಗಳನ್ನು ಕಂಡುಕೊಳ್ಳಬೇಕು. ಮೆಟ್ರೊ ಸಂಬಂಧಿತ ಪ್ರತೀ ಯೋಜನೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸುವುದು ವೆಚ್ಚ ಕಡಿತದ ಅತ್ಯಂತ ಸುಲಭದ ದಾರಿ. ನಿಗಮದ ವ್ಯಾಪ್ತಿಯಲ್ಲಿ ಲಭ್ಯವಿರುವ ಸ್ಥಳಗಳನ್ನು ಬಾಡಿಗೆಗೆ ಕೊಡುವುದರಿಂದಲೂ ಒಂದಿಷ್ಟು ವರಮಾನ ಗಳಿಸಬಹುದು. ಹೊರೆ ತಗ್ಗಿಸಿಕೊಳ್ಳಲು ಇಂತಹ ಪರ್ಯಾಯ ಮಾರ್ಗಗಳು ಇರುವಾಗ ದರ ಏರಿಕೆಯ ಸುಲಭದ ದಾರಿಯನ್ನೇ ಬಿಎಂಆರ್‌ಸಿಎಲ್ ಆಯ್ದುಕೊಂಡಿರುವುದು ಪ್ರಯಾಣಿಕರ ಮೇಲಿನ ಅದರ ನಿಷ್ಕಾಳಜಿಗೆ ದ್ಯೋತಕ.

# ರಾಮಾಯಣ



## ದಸರಥನು ಕೈಕೇಯಾದೇವಿಯನ್ನು ಸಂತವಿಟ್ಟದ್ದು

• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ಈ ಪ್ರಕಾರದಲ್ಲಿ ಕೈಕೇಯಿದೇವಿಯು ಮಂಥರೆಯ ದುರ್ಬೋಧನೆಗಳನ್ನು ಕೇಳಿ ಬಾಣದಿಂದ ಗಾಯಪಟ್ಟು ಬಿದ್ದ ಕಿನ್ನರಸ್ತ್ರೀಯ ಹಾಗೆ ನೆಲದ ಮೇಲೆ ಮಲಗಿಕೊಂಡಳು. ಮಂಥರೆಯು ಹೇಳಿದ ಆಲೋಚನೆಯು ಹಿತವಾದದ್ದೆಂತಲೂ ಶ್ರೇಯಸ್ಕರವಾದದ್ದೆಂತಲೂ ನಿಶ್ಚಯಿಸಿಕೊಂಡು ಅತ್ಯಂತ ಕೋಪಾತಿಶಯದಿಂದ ಹುಬ್ಬು ಗಂಟಿಕ್ಕಿಕೊಂಡಳು. ಆಭರಣಗಳಿಂದ ಆ ಭೂಮಿಯು ನಕ್ಷತ್ರಗಳಿಂದ ಒಪ್ಪುವ ಆಕಾಶದ ಹಾಗೆ ಕಂಗೊಳಿಸಿತು. ಇತ್ತ ದಶರಥರಾಯನು ಆಸ್ಥಾನ ಮಂಟಪಕ್ಕೆ ಬಂದು ಪ್ರಧಾನ ಪರಿಜನ ಪುರಜನಗಳನ್ನು ಕರೆಯಿಸಿ ಮಾರನೆಯ ದಿವಸ ಶ್ರೀರಾಮನಿಗೆ ಪಟ್ಟಾಭಿಷೇಕೋತ್ಸವವೆಂದು ಸಾರಿಸ ಹೇಳಿದನು. ಅನಂತರ ಆ ಶುಭವಾರ್ತೆಯನ್ನು ತನ್ನ ಪ್ರೀತಿಗೆ ಪಾತ್ರಳಾದ ಕೈಕೇಯಾದೇವಿಗೆ ತಿಳುಹಿಸಬೇಕೆಂದು ಆ ದೇವಿಯ ಅರಮನೆಗೆ ಬಂದನು. ಆ ಅರಮನೆಯು ಬಿಳಿಮುಗಿಲಿನಿಂದ ಕೂಡಿದ ಆಗಸದಂತೆಯೂ ರಾಹುವಿನಿಂದ ಕೂಡಿದ ಚಂದ್ರನ ಹಾಗೆಯೂ ಇದ್ದಿತು. ಎಲ್ಲಿ ನೋಡಿದರೂ ವಿನೋದಾರ್ಥವಾದ ನವಿಲುಗಳ ಕೇಕಾರವಗಳಿಂದಲೂ ಹಂಸಪಕ್ಷಿಗಳ ಧ್ವನಿಗಳಿಂದಲೂ ಲತಾಮಂಟಪಗಳಿಂದಲೂ ಸಂಪಿಗೆ ಅಶೋಕ ಮರಗಳಿಂದಲೂ ನಿರ್ಮಲವಾದ ಬೆಳ್ಳಿಯ ಜಗುಲಿಗಳಿಂದಲೂ ಸುವರ್ಣಮಯವಾದ ಮಂಟಪಗಳಿಂದಲೂ ಋತುನಿಯಮವಿಲ್ಲದೆ ಸದಾ ಪಲ್ಲವಿಸಿ ಪುಷ್ಪಿಸಿ ಫಲಿಸುವ ವೃಕ್ಷಗಳಿಂದಲೂ ಸ್ವಾದೋದಕವುಳ್ಳ ರತ್ನ ಸೋಪಾನಗಳುಳ್ಳ ವಾಪೀಕೂಪತಟಾಕಗಳಿಂದಲೂ ನಾನಾ ಪ್ರಕಾರವಾದ ಭಕ್ಷ್ಯ ಭೋಜ್ಯಗಳೂ ಷಡ್ರಸಾನ್ನರಾಶಿಗಳೂ ಉಳ್ಳ ಪಾಕಶಾಲೆಗಳಿಂದಲೂ ದಿವ್ಯಾಭರಣಗಳುಳ್ಳ ಬೊಕ್ಕಸದ ಮನೆಗಳಿಂದಲೂ ಅತಿಮನೋಹರವಾಗಿ ದೇವೇಂದ್ರನ ಅರಮನೆಯಂತೆ ಅದು ಒಪ್ಪುತ್ತಿತ್ತು. ಸಮಸ್ತ ಸಂಪತ್ತುಳ್ಳ ಆ ಆರಮನೆಯನ್ನು ಪ್ರವೇಶಿಸಿ ಶಯ್ಯಾಗೃಹದಲ್ಲಿದ್ದ ಮಂಚದ ಮೇಲೆ ತನ್ನ ಪಟ್ಟದ ರಾಣಿಯಾದ ಕೈಕೇಯಾದೇವಿಯನ್ನು ಕಾಣದೆ ಕಾಮಮೋಹಿತನಾಗಿ ಮನಸ್ಸಿನಲ್ಲಿ ವ್ಯಥೆಪಟ್ಟನು. ಮೊದಲು ಯಾವಾಗಲೂ ಆತನು ಹೋದಾಗ ಕೈಕೇಯಿ ಇಲ್ಲದೆ ಆ ಶಯ್ಯಾಗೃಹವು ಶೂನ್ಯವಾಗಿರಲಿಲ್ಲ. ಆ ದೇವಿಯು ಒಂದುಸಾರಿಯಾದರೂ ಆ ಗೃಹವನ್ನು ಬಿಟ್ಟು ಹೋದವಳಲ್ಲ, ಆದಕಾರಣ ದಶರಥರಾಯನು ಅವಳ ವೃತ್ತಾಂತವನ್ನರಿಯದೆ ಬಾಗಿಲನ್ನು ಕಾದುಕೊಂಡಿದ್ದ ದಾದಿಯರನ್ನು ಕೇಳಿದನು. ಆ ದಾದಿಯರು ಭಯದಿಂದ ಕಂಗೆಟ್ಟು, ಕೈಮುಗಿದುಕೊಂಡು ಮಹಾರಾಜ, ಕೈಕೇಯಿ ದೇವಿಯು ಏನು ಕಾರಣದಿಂದಲೋ ಅತ್ಯಂತ ಕೋಪಯುಕ್ತಯಾಗಿ ಕೋಪಗೃಹಕ್ಕೆ ಹೋಗಿದ್ದಾಳೆ ಎಂದು ಹೇಳಿದರು. ಆ ಮಾತನ್ನು ಕೇಳಿ ದಶರಥರಾಯನು ಮನಸ್ಸಿನಲ್ಲಿ ಅತ್ಯಂತ ವ್ಯಥೆಯಿಂದ ಕಂಗೆಟ್ಟು, ಶೀಘ್ರವಾಗಿ ಹೋಗಿ ಅಲ್ಲಿ ಸಮಸ್ತಾಭರಣಗಳನ್ನೂ ಕಳಚಿ ಭೂಮಿಯ ಮೇಲೆ ಹಾಕಿ ಮಲಿನವಾದ ವಸ್ತ್ರವನ್ನುಟ್ಟುಕೊಂಡು ನೆಲದ ಮೇಲೆ ಮಲಗಿ ಅಮಾಂಗಲ್ಯಸ್ವರೂಪಳಾಗಿದ್ದ, ತನ್ನ ಪ್ರಾಣಕ್ಕಿಂತಲೂ ಅಧಿಕಳಾದ ಕೈಕೇಯಾದೇವಿಯನ್ನು ಕಂಡನು. ಕತ್ತರಿಸಿ ಬಿದ್ದ ಲತೆಯೋಪಾದಿಯಲ್ಲಿಯೂ ಶಾಪವನ್ನು ಹೊಂದಿ ಸ್ವರ್ಗಲೋಕದಿಂದ ಬಿದ್ದ ಅಪ್ಸರಃಸ್ತ್ರೀಯ ಹಾಗೂ ಸಾಕ್ಷಾತ್ಪರಮಪುರುಷನಿಂದ ತೊಲಗಿಸಲ್ಪಟ್ಟ ಆದಿಮಾಯೆಯ ಹಾಗೂ ಬಲೆಗೆ ಸಿಕ್ಕಿದ ಎರಳೆಯ

ಮುಂದುವರಿಯುವುದು...

# ಬಾರೋ ಸಾಧನಕೇರಿಗೆ ಮರಳಿ ನಿನ್ನೀ ಊರಿಗೆ



☛ ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ವೃತ್ತಿಯಲ್ಲಿ ಎಂಜಿನಿಯರ್ ಪ್ರವೃತ್ತಿಯಲ್ಲಿ ಲೇಖಕರಾಗಿರುವ ಮಿರ್ಲೆಚಂದ್ರಶೇಖರ ಅವರ ಬಾರೋ ನಿನ್ನೀ ಊರಿಗೆ' ಕೃತಿಯು ಅನೇಕ ಅತ್ಯುತ್ತಮ ಲೇಖನಗಳನ್ನು ಒಳಗೊಂಡಿದೆ. ನೀರು, ಪರಿಸರ, ಪ್ರವಾಸೋದ್ಯಮ, ಶಿಕ್ಷಣ, ವ್ಯಕ್ತಿತ್ವ ವಿಕಸನ ಕುರಿತು ತುಂಬಾ ಚೆನ್ನಾಗಿ ನಿದರ್ಶನಗಳ ಸಹಿತ ಕಟ್ಟಿಕೊಟ್ಟಿದ್ದಾರೆ.

'ನೀರು ವ್ಯರ್ಥವಾಗದಿರಲಿ, ಕೃತಕವಾಗಿ ಉತ್ಪಾದಿಸಲಾಗದು' ಲೇಖನದಲ್ಲಿ ನಿರ್ವಹಣೆ ಹಾಗೂ ಹೂಳಿನ ಸಮಸ್ಯೆ, ನೀರಿಗೆಲ್ಲಿ ಬರವಿದೆ, ಇರುವುದೆಲ್ಲಾ ನಿರ್ವಹಣೆಯಲ್ಲಿ' ಲೇಖನ ಕೂಡ ಯಾವ ರೀತಿಯಲ್ಲಿ ನೀರನ್ನು ಬಳಸಬೇಕು. ಉಳಿಸಬೇಕು ಎಂಬುದನ್ನು ತಿಳಿಸಿಕೊಡುತ್ತದೆ. ಇಸ್ರೇಲ್ ಯುದ್ಧಕ್ಕಿಂತ ಅದರ ನೀರಿನ ಸದ್ಬಳಕೆಯ ಚಿಂತನೆ ನಮಗಿರಲಿ' ಎಂಬ ಲೇಖನದಲ್ಲಿ ಕಾವೇರಿ ಕಣಿವೆಯ ಜಲಾಶಯಗಳ ನೀರಿನ ಸದ್ಬಳಕೆಯನ್ನು ಹೋಲಿಕೆ ಮಾಡುತ್ತಾರೆ. ಪೂರಿಗಾಲಿ ಏತ ನೀರಾವರಿ ಯೋಜನೆಯೂ ಪ್ರಸ್ತಾಪವಾಗುತ್ತದೆ. ಎಲ್ಲಿಯ ಇಸ್ರೇಲ್, ಎಲ್ಲಿಯ ಪೂರಿಗಾಲಿ ಎನ್ನದಿರಿ. ಇಸ್ರೇಲ್ ಮಾದರಿಯಲ್ಲಿ ಕಡಿಮೆ ನೀರು ಬಳಸಿ, ಹೆಚ್ಚು ಇಳುವರಿ ಪಡೆಯುವ ಪದ್ಧತಿ ಅನುಸರಿಸಬೇಕಾದ ಅಗ್ಯತತೆಯನ್ನು ಪ್ರತಿಪಾದಿಸಿದ್ದಾರೆ. ವಾಗ್ಮಿಗಳೇ ಕೇಳುಗರ ಮನಸ್ಥಿತಿ ಏನೆಂದು ಬಲ್ಲಿರಾ?' ಲೇಖನವು ಪ್ರಸ್ತುತ ನಡೆಯುವ ಕವಿಗೋಷ್ಠಿಗಳ ಪರಿಸ್ಥಿತಿಯನ್ನು ಅನಾವರಣ ಮಾಡಿದೆ. ಮೈಸೂರು ಮೈಮನಸ್ಸುಗಳ ತಣಿಸುವ ತಾಣ', 'ಮೈಸೂರಿನಲ್ಲಿ ಇರುವುದನ್ನು ಇದ್ದ ಹಾಗೆ ಕಾಪಾಡಿಕೊಂಡು ಹೋದರೆ ಸಾಕು' ಲೇಖನಗಳಲ್ಲಿ ಮೈಸೂರು ಮತ್ತೊಂದು ಬೆಂಗಳೂರು ಆಗದಿರಲಿ ಎಂಬ ಕಳಕಳಿ ತೋರಿಸಿದ್ದಾರೆ. ಕೃಷಿ, ಪ್ರವಾಸೋದ್ಯಮ, ಶಿಕ್ಷಣ ಕುರಿತು ತಮ್ಮದೇ ಆದ ಸಲಹೆಗಳನ್ನು ನೀಡಿದ್ದಾರೆ. ಹಳ್ಳಿಗಳನ್ನು ನುಂಗುತ್ತಿರುವ ಅಭಿವೃದ್ಧಿ ಎಂಬ ರಕ್ಕಸ' ಲೇಖನದಲ್ಲಿ ಹಳ್ಳಿಯ ಸೌಂದರ್ಯ ಅದರ ವಾಸ್ತುಶಿಲ್ಪದಲ್ಲಿಲ್ಲ, ಅಲ್ಲಿರುವ ಜನರ ಆತ್ಮದಲ್ಲಿದೆ ಎಂಬದಕ್ಕೆ ಧಕ್ಕೆ ಒದಗಿದೆ ಎಂಬ ಆತಂಕ ತೋರಿಸಿದ್ದಾರೆ.

ಹಣೆಗೆ ಕುಂಕಮ, ಮಾಂಗಲ್ಯ ಮತ್ತು ಕಾಲುಂಗರಗಳು ಭಾರವಾಗಿವೆ ಸಣ್ಣ ಪುಟ್ಟ ಕಾರಣಗಳಿಗೆಲ್ಲಾ ಮುರಿದು ಬೀಳುತ್ತಿರುವ ಮದುವೆಗಳನ್ನು ಕುರಿತದ್ದಾಗಿದೆ. ಬಾಲ್ಯದ ಪೂರಕ ಸನ್ನಿವೇಶಗಳೇ ಸಂತೃಪ್ತ ಬಾಳಿನ ಹೆದ್ದಾರಿಗಳು ಲೇಖನ ಕಂಟ್ರಾಕ್ಟರ್ ಆಗಿದ್ದ ತಾತನ ಜೊತೆಗೆ ಚಿಕ್ಕಸಾಹೇಬರಾದ ಸಬ್ ಓವರ್ಸಿ ಅವರನ್ನು ನೋಡಲು ಹೋಗಿ, ಅವರಿಗೆ ಸಿಗುತ್ತಿದ್ದ ಗೌರವನ್ನು ಕಂಡು ತಾವು ಕೂಡ





ಅವರಂತೆ ಸಿವಿಲ್ ಎಂಜಿನಿಯರಿಂಗ್ ಡಿಪ್ಲೋಮಾ ಮಾಡಿ ಲೋಕೋಪಯೋಗಿ ಇಲಾಖೆ ಸೇರಿ ಅವರಂತೆಯೇ ಕೆಲಸ ಮಾಡಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆಗಿ ನಿವೃತ್ತರಾದ ಲೇಖಕ ಮಿರ್ಲೆಚಂದ್ರಶೇಖರ್ ಅವರ ಅನುಭವ ಕಥನ. ನಿನ್ನೀ ಊರು ನಿನ್ನ ಹೆಮ್ಮೆ ಬಾರೊ ನಿನ್ನೀ ಊರಿಗೆ ಕೃತಿಯ ಶೀರ್ಷಿಕೆಯ ಲೇಖನ. ವರಕವಿ ದ.ರಾ. ಬೇಂದ್ರೆ ಅವರ ಬಾರೋ ಸಾಧನಕೇರಿಗೆ, ಮರಳಿ ನಿನ್ನೀ ಊರಿಗೆಯಿಂದ ಸ್ಫೂರ್ತಿಯಿಂದ ತಮ್ಮ ಸ್ವಗ್ರಾಮ ಮಿರ್ಲೆಯ ಚಿತ್ರಣವನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ. ಎದೆಬಡಿತ ಜೋರಾಗಿದೆ, ಯಾವುದರಿಂದ ಏಕಾಗಿ ಲೇಖನವು ಮೊಬೈಲ್‌ನಿಂದ ಆಗುತ್ತಿರುವ ಕಿರಿಕಿರಿ ಕುರಿತದ್ದು. ಕಷ್ಟಸುಖಗಳ ಸರಣಿಗಳು ಬದುಕಿನಲ್ಲಿ ಸಹಜ ಮೋಸ ಹೋದ ಯುವಕನೊಬ್ಬನ ನೈಜ ಘಟನೆ.

ಮುಗಿಲೇರುತ್ತಿರುವ ಜನಸಂಖ್ಯಾ ಭಾರವನ್ನು ಹೊರುವದೆ ಭೂಮಿ ಜನಸಂಖ್ಯಾ ಸ್ಫೋಟದ ಬಗ್ಗೆ ಅರಿವು ಮೂಡಿಸುವಂಥದ್ದು. ಅಪ್ಪಾ... ಕ್ಷಮಿಸುಬಿಡು ತಂದೆ–ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಿ ಎಂಬುದನ್ನು ತಿಳಿಸುತ್ತದೆ. ವಿದೇಶಗಳಲ್ಲಿ ಮದು ಮಗಳು ಯುವತಿಯರೆ ಭವಿಷ್ಯದ ಚಿಂತನೆ ಇರಲಿ, ಅರ್ಹ ವಯಸ್ಸಿನಲ್ಲಿಯೇ ಮದುವೆಯಾಗಿ ಸದೃಢ ಕುಟುಂಬಗಳ ನಿರ್ಮಾಣವಾಗಲಿ ಎಂಬ ಕಳಕಳಿಯನ್ನು ತೋರಿಸುತ್ತದೆ.ಮಾಡುವ ಕೆಲಸ ಆ ದಿನದ ಮನಸ್ಥಿತಿಯ ಆಧಾರಿತವಾಗಿರುತ್ತದೆ ಎಂಬುದು ದಿಟ. ಜೀವನ ಸುಲಭವಾಗಿದೆ ಅದನ್ನು ಏಕೆ ಕಠಿಣಗೊಳಿಸುತ್ತೇವೆ ಲೇಖನ ಥೈಲ್ಯಾಂಡಿನ ಜನ್ ಜಾಂಡ್ಯೆ ಎಂಬ ಸಾಧಕನ ಸರಳ ಸೂತ್ರಗಳು ಕುರಿತದ್ದಾಗಿದೆ. ಪ್ರಯತ್ನದಿಂದ ಸಾಧಿಸಲಾರದ್ದು ಏನಿದೆ? ಎಂಬುದನ್ನು ಪದ್ಮಶ್ರೀ ಪುರಸ್ಕೃತರಾದ ತಮಿಳುನಾಡಿನ ಎಂಜಿನಿಯರ್ ಶ್ರೀಧರ್, ಮಂಗಳೂರಿನ ಕಿತ್ತಳೆ ಹಣ್ಣು ಮಾರಾಟ ಮಾಡುವ ಮೂಲಕವೇ ಶಾಲೆ ಕಟ್ಟಿದ ಹರೇಕಳ ಹಾಜಬ್ಬ ಅವರ ನಿದರ್ಶನದ ಮೂಲಕ ವಿವರಿಸಿದ್ದಾರೆ. ಕಡಲು ನಿನ್ನದೆ, ಹಡಗು ನಿನ್ನದೆ, ಮುಳುಗದಿರಲಿ ಬದುಕು ಪ್ರವಾಹಪೀಡಿತರ ಬದುಕು ಕುರಿತದ್ದು. ನ್ಯೂಟ್ರಿಷನ್ ಫುಡ್ ತಿನ್ನಬೇಕೆ ಅಥವಾ ಬೇಡವೆ? ಎಂಬುದು ಕಮೀಷನ್ ಆಸೆಗಾಗಿ ಮಧುಮೇಹಿಗಳಿಗೆ ಮೋಸ ಮಾಡುವ ಜಾಲದ ಬಗ್ಗೆ ಎಚ್ಚರಿಕೆ ವಹಿಸುವಂತೆ ತಿಳಿಸುತ್ತದೆ. ನಿವೃತ್ತಿ ಬದುಕಿನ ನೆಮ್ಮದಿಗೆ ಏನು ಬೇಕು' ಎಂಬುದನ್ನು ಅದ್ಭುತವಾಗಿ ವಿವರಿಸಿದ್ದಾರೆ. ನಿವೃತ್ತರು ಇಷ್ಟನ್ನು ಪಾಲಿಸಿದರೆ ಸಾಕು, ನಿಶ್ಚಿಂತೆಯಿಂದ ಕಾಲದೂಡಬಹುದು. ವಯಸ್ಸಿನಲ್ಲಿ ಹಿರಿಯನಾದರೂ ಕಿರಿಯರ ಒಡನಾಟವಿದ್ದರೆ ಬದುಕು ಚೆಂದ ಹಿರಿಯರಿಗೆ ಕಿವಿಮಾತಿನಂತಿದೆ. ಮಿರ್ಲೆಚಂದ್ರಶೇಖರ ಅವರು ಚೆನ್ನಾಗಿ ಓದಿಕೊಂಡಿದ್ದಾರೆ ಎಂಬುದಕ್ಕೆ ಲೇಖನಗಳಲ್ಲಿ ಅಲ್ಲಲ್ಲಿ ಖ್ಯಾತನಾಮ ಆಂಗ್ಲ ಹಾಗೂ ಕನ್ನಡ ಸಾಹಿತಿಗಳು ಹೇಳಿರುವುದನ್ನು, ಗಾದೆ ಮಾತುಗಳನ್ನು ಬಳಸಿರುವುದೇ ಸಾಕ್ಷಿ. ಅವರು ಪತ್ರಿಕೆಗಳಿಗೆ ಬರೆಯುವ ಹವ್ಯಾಸ ಹೊಂದಿದ್ದಾರೆ. ಪ್ರಚಲಿತ ವಿದ್ಯಮಾನಗಳ ಬಗ್ಗೆ ಸಾಕಷ್ಟು ಮಾಹಿತಿ ಸಂಗ್ರಹಿಸಿ, ಲೇಖನಗಳಿಗೆ ಅಧಿಕೃತತೆ ನೀಡಿದ್ದಾರೆ. ಅವರ ಅಂಕಣ ಬರಹಗಳು ಮುಂದುವರಿಯಲಿ. ಮತ್ತಷ್ಟು ಕೃತಿಗಳು ಬರಲಿ ಎಂದು ಆಶಿಸುವೆ.

## ಮನುಷ್ಯನ ಜೀವನ ಶಾಶ್ವತವಲ್ಲ

**ಧೂಳೆಬ್ಬಿಸಿ ದೂರವಾಗಿದ್ದೇನೆ ಆರೋಗ್ಯದಿಂದ ' ಶುದ್ಧ ಗಾಳಿಯ ಮಹತ್ವ, 'ಎಲ್ಲರ ಬಾಯಲ್ಲಿ ನನ್ನ ಹೆಸರೇ..' ಪ್ರಚಾರಕ್ಕೆ ಹಪಾಹಪಿಸುವವರಿಗೆ ಚಾಟಿ ಏಟಿನಂತಿದೆ. 'ಭಯವಿದ್ದವನು ಗೆಲ್ಲುತ್ತಾನೆಯೇ?' ಲೇಖನ ಭಯ ಬಿಟ್ಟರೆ ಮಾತ್ರ ಸಾಧನೆ ಎಂಬುದನ್ನು ತಿಳಿಸುತ್ತದೆ. 'ಮಕ್ಕಳನ್ನು ಹೊಡೆಯಬೇಕೆ, ಬೇಡವೆ?' ಎಂಬುದು ಹಿಂದಿನ ಹಾಗೂ ಇಂದಿನ ಶಿಕ್ಷಣ ಕಲಿಸುವ ವ್ಯವಸ್ಥೆಗೆ ಕ್ಷ– ಕಿರಣ ಬೀರಿದೆ. 'ಜೊತೆ ಜೊತೆಯಾಗಿ ನಡೆಯುವುದೇ ಜೀವನ', 'ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೆ ಕೋಟಿ ರುಪಾಯಿ' ಪತಿ– ಪತ್ನಿ ನಡುವೆ ಹೊಂದಾಣಿಕೆ ಮುಖ್ಯ ಎಂಬುದನ್ನು ಪ್ರತಿಪಾದಿಸುತ್ತದೆ. 'ಮುಂಜಾನೆ ಹೋದವರು ಸಂಜೆಗೆ ಬರುವುದು ಗ್ಯಾರಂಟಿ ಇಲ್ಲ' ಎಂಬುದನ್ನು ಮನುಷ್ಯನ ಜೀವನ ಶಾಶ್ವತವಲ್ಲ ಎಂಬುದನ್ನು ಅರಹುತ್ತದೆ.**

# ಕರಿಬೇವು ಬಳಸಿ ಕೂದಲಿನ ಸಮಸ್ಯೆಗೆ ಗುಡ್ ಬೈ ಹೇಳಿ



ಭಾರತೀಯ ಅಡುಗೆ ಮನೆಗಳಲ್ಲಿ ಕರಿಬೇವು ಖಂಡಿತವಾಗಿಯೂ ಇರುತ್ತದೆ. ಇದು ಅಡುಗೆಗೆ ಉತ್ತಮ ಸುವಾಸನೆ ನೀಡುತ್ತದೆ. ಕರಿಬೇವು ಆರೋಗ್ಯಕರ ಅಂಶಗಳನ್ನು ಒಳಗೊಂಡಿದ್ದು, ಯಾವುದೇ ಅಡುಗೆಗೆ ಒಗ್ಗರಣೆ ಹಾಕುವಾಗ ತಪ್ಪದೇ ಕರಿಬೇವು ಸೇರಿಸುತ್ತೇವೆ. ಈ ಕರಿಬೇವಿನ ಎಲೆಯಿಂದ ನಿಮ್ಮ ಕೂದಲನ್ನು ಸುಂದರವಾಗಿಸಬಹುದು ಎಂಬುದು ನಿಮಗೆ ತಿಳಿದಿದೆಯೇ ಕರಿಬೇವನ್ನು ಕೂದಲ ಆರೈಕೆಗೆ ಹೇಗೆ ಬಳಸುವುದು ಎಂಬುದನ್ನು ಇಲ್ಲಿ ತಿಳಿಯೋಣ. ಕರಿಬೇವು ನಮ್ಮ ಕೂದಲ ಆರೈಕೆಗೆ ಸುಲಭವಾಗಿ ಸಿಗುವ ಗಿಡಮೂಲಿಕೆ. ಕರಿಬೇವಿನ ಎಲೆಗಳು ಮತ್ತು ಕಡ್ಡಿಯಲ್ಲಿ ವಿಟಮಿನ್ ಎ, ಬಿ, ಸಿ, ಪ್ರೋಟೀನ್, ಉತ್ಕರ್ಷಣ ನಿರೋಧಕಗಳು, ಕ್ಯಾಲ್ಸಿಯಂ,ಕಬ್ಬಿಣದಂತ ಅಂಶಗಳಿವೆ. ಈ ಎಲ್ಲಾ ಉತ್ತಮ ಪೋಷಕಾಂಶಗಳು ನಿಮ್ಮ ಕೂದಲಿನ ಬೆಳವಣಿಗೆಗೆ ಸಹಕಾರಿ. ನೆತ್ತಿಯ ಪೋಷಣೆಗೂ ಕರಿಬೇವಿನ ಎಲೆಗಳು ಸಹಕಾರಿ. ಕೂದಲಿಗೆ ಹೊಳಪು ನೀಡಲು ಮತ್ತು ಕೂದಲಿನ ಬಿರುಕನ್ನು ತಡೆಯಲೂ ಇದರಲ್ಲಿರುವ ಅಂಶಗಳು ಸಹಾಯ ಮಾಡುತ್ತದೆ. ಕೂದಲಿನ ಆರೈಕೆಗೆ ನೈಸರ್ಗಿಕ ಉತ್ಪನ್ನಗಳನ್ನೇ ಬಳಸಬೇಕೆಂದುಕೊಂಡಿರುವವರು ಈ ಎಲೆಗಳನ್ನು ಕೂದಲ ಪೋಷಣೆಗೆ ಬಳಸಬಹುದು. ನಾವು ಮನೆಯಲ್ಲಿ ತಯಾರಿಸುವ ಕೂದಲ ಆರೈಕೆ ಪದಾರ್ಥಗಳು ರಾಸಾಯನಿಕಗಳಿಂದ ಮುಕ್ತವಾಗಿದ್ದು, ದೀರ್ಘಾವಧಿ ಪರಿಣಾಮ ಬೀರುತ್ತದೆ. ಕರಿಬೇವನ್ನು ಹೇಗೆಲ್ಲ ನಮ್ಮ ಕೂದಲ ಪೋಷಣೆಗೆ ಬಳಸಬಹುದು ಎಂದು ಇಲ್ಲಿ ಕೆಲವು ಸಲಹೆಗಳನ್ನು ನೀಡಿದ್ದೇವೆ.

**ಕೂದಲ ಪೋಷಣೆಗೆ ಕರಿಬೇವು**



**ಕೂದಲಿನ ಬೇರುಗಳನ್ನು ಬಲಪಡಿಸುತ್ತದೆ:** ಕರಿಬೇವಿನ ಎಲೆಗಳಲ್ಲಿರುವ ಪೋಷಕಾಂಶಗಳು ನಿಮ್ಮ ಕೂದಲಿನ ಬೇರುಗಳಿಗೆ ಬಲವನ್ನು ನೀಡುತ್ತವೆ. ಇದು ನಿಮ್ಮ ಕೂದಲನ್ನು ಒಡೆಯುವ ಹಾನಿಯಾಗುವ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ. ಕೂದಲು ಆರೋಗ್ಯಕರವಾಗಿ ಕಾಣುವಂತೆ ಮಾಡುತ್ತದೆ.

**ಕೂದಲು ಉದುರುವಿಕೆಯನ್ನು ಕಡಿಮೆ ಮಾಡುತ್ತದೆ:** ಕರಿಬೇವಿನ ಎಲೆಗಳು ನಿಮ್ಮ ಕೂದಲಿನ ಬೇರುಗಳನ್ನು ಬಲಪಡಿಸುವುದರಿಂದ, ಕೂದಲು ಬೆಳೆಯಲು ಆರೋಗ್ಯಕರ ವಾತಾವರಣವನ್ನು ಸೃಷ್ಟಿಸುತ್ತದೆ. ನೆತ್ತಿಯ ಆರೋಗ್ಯವನ್ನು ಕಾಪಾಡುವುದರ ಜೊತೆಗೆ ಕೂದಲಿಗೆ ಹೊಳಪು ನೀಡುತ್ತದೆ. ಕೂದಲು ಉದುರುವಿಕೆಯನ್ನು ಕಡಿಮೆ ಮಾಡುತ್ತದೆ ಮತ್ತು ನಿರಂತರ ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ.

**ತಲೆಹೊಟ್ಟಿಗೆ ಚಿಕಿತ್ಸೆ ನೀಡುತ್ತದೆ:** ತಲೆಹೊಟ್ಟು ಅನೇಕರು ಎದುರಿಸುವ ಸಾಮಾನ್ಯ ಸಮಸ್ಯೆ. ಕೂದಲಿನ ಆರೈಕೆಯ ದಿನಚರಿಗೆ ಕರಿಬೇವಿನ ಎಲೆಗಳನ್ನು ಸೇರಿಸುವುದರಿಂದ ತುರಿಕೆ, ಅಹಿತಕರ ಕೂದಲಿನ ಸಮಸ್ಯೆಯನ್ನು ತಡೆಯುತ್ತದೆ. ಕರಿಬೇವಿನ ಎಲೆಗಳು ನೆತ್ತಿಯ ಮೇಲಿನ ಶಿಲೀಂಧ್ರ, ಬ್ಯಾಕ್ಟೀರಿಯಾಗಳ ವಿರುದ್ಧ ಹೋರಾಡುತ್ತದೆ, ನೆತ್ತಿಯನ್ನು ಶುಚಿಯಾಗಿಡುವುದರಿಂದ ತಲೆಹೊಟ್ಟು ಸಮಸ್ಯೆ ನಿವಾರಣೆಯಾಗುತ್ತದೆ.

**ಕರಿಬೇವಿನ ಎಲೆಗಳು, ಮೊಸರು ಹೇರ್ ಮಾಸ್ಕ್:** 1 ಕಪ್ ಕರಿಬೇವಿನ ಎಲೆಗಳನ್ನು ಸ್ವಲ್ಪ ನೀರಿನೊಂದಿಗೆ ಪೇಸ್ಟ್ ತರಹದ ಸ್ಥಿರತೆಗೆ ರುಬ್ಬಿಕೊಳ್ಳಿ. ಪೇಸ್ಟ್ ಅನ್ನು 1/2 ಕಪ್ ಮೊಸರಿನೊಂದಿಗೆ ಬೆರೆಸಿ ನಿಮ್ಮ ಕೂದಲಿಗೆ ಹಚ್ಚಿ. 30–45 ನಿಮಿಷಗಳ ಕಾಲ ಬಿಡಿ, ಉಗುರುಬೆಚ್ಚಗಿನ ನೀರಿನಿಂದ ತೊಳೆಯಿರಿ.

# ಶುಗರ್ ಇರುವವರು ಸಿಹಿಗೆಣಸು ತಿನ್ನಬಹುದೇ?

ಸಿಹಿ ಗೆಣಸು ರುಚಿಯಲ್ಲಿ ಸಿಹಿಯಾಗಿರುವುದರಿಂದ ಮಧುಮೇಹಿಗಳು ಇದನ್ನು ತಿನ್ನಲೇ ಬಾರದು ಎನ್ನಲಾಗುತ್ತದೆ. ಆದರೆ ಇದು ಎಷ್ಟರ ಮಟ್ಟಿಗೆ ನಿಜ. ನಿಜಕ್ಕೂ ಸಿಹಿಗೆಣಸು ತಿಂದ್ರೆ ಶುಗರ್ ಹೆಚ್ಚಾಗುತ್ತಾ ವೈದ್ಯರಿಂದಲೇ ತಿಳಿಯೋಣ. ಸಿಹಿ ಗೆಣಸು ಸಾಕಷ್ಟು ಪೌಷ್ಟಿಕಾಂಶಗಳನ್ನು ಹೊಂದಿದ್ದು ಇದೊಂದು ಆರೋಗ್ಯಕರ ತಿನಿಸಾಗಿದೆ. ಆದರೆ ಇದು ಮಧುಮೇಹಿಗಳಿಗೆ ಉತ್ತಮವೇ, ಸಕ್ಕರೆಕಾಯಿಲೆ ಇರುವವರು ಸಿಹಿಗೆಣಸನ್ನು ಸೇವಿಸಬಹುದೇ ಎನ್ನುವ ಗೊಂದಲ ಹಲವರಲ್ಲಿದೆ. ಆದರೆ ಸಿಹಿಗೆಣಸು ಮಧುಮೇಹಿಗಳಿಗೂ ಉತ್ತಮ ಸ್ನಾಕ್ಸ್ ಆಗಿದೆ ಎಂದು ಇನ್‌ಸ್ಟಾಗ್ರಾಮ್‌ನ ವಿಡಿಯೋವೊಂದರಲ್ಲಿ ಹೇಳಲಾಗಿದೆ.

ಇದು ಸತ್ಯವೋ ಸುಳ್ಳೋ ಎನ್ನುವುದನ್ನು ತಿಳಿಯೋಣ.

**ವಿಡಿಯೋದಲ್ಲಿ ಏನಿದೆ?:** fithub.academy ಎನ್ನುವ ಇನ್‌ಸ್ಟಾಗ್ರಾಮ್‌ನ ವಿಡಿಯೋವೊಂದರಲ್ಲಿ ಸಿಹಿಗೆಣಸಿನ ಸೇವನೆ ಮಧುಮೇಹಿಗಳಿಗೆ ಉತ್ತಮ. ಇದರಿಂದ ಶುಗರ್ ಹೆಚ್ಚಾಗುವುದಿಲ್ಲ ಎಂದು ಹೇಳಲಾಗಿದೆ. ಸಾಮಾನ್ಯ ಆಲೂಗಡ್ಡೆಗೆ ಹೋಲಿಸಿದರೆ ಸಿಹಿಗೆಣಸಿನಲ್ಲಿ ಕಡಿಮೆ ಗ್ಲೈಸಮಿಕ್ ಇಂಡೆಕ್ಸ್ ಇದೆ. ಇದರಲ್ಲಿರುವ ಫೈಬರ್ ರಕ್ತದಲ್ಲಿನ ಸಕ್ಕರೆಯ ಮಟ್ಟವನ್ನು ನಿಯಂತ್ರಿಸುತ್ತದೆ, ಜೀರ್ಣಕ್ರಿಯೆಯನ್ನು ಉತ್ತಮವಾಗಿಸುತ್ತದೆ. ಮಧುಮೇಹಿಗಳು ತಾವು ಸೇವಿಸುವ ಪ್ರಮಾಣದ ಬಗ್ಗೆ ಗಮನಹರಿಸಬೇಕು. ಸ್ವಲ್ಪ ಪ್ರಮಾಣದ ಸೇವನೆ ಮಧುಮೇಹಿಗಳಿಗೆ ಒಳ್ಳೆಯದು ಎನ್ನಲಾಗಿದೆ.

**ವೈದ್ಯರು ಏನಂತಾರೆ?:** ಈ ವಿಡಿಯೋದಲ್ಲಿ ತಿಳಿಸಲಾಗಿರುವ ಮಾಹಿತಿಯು ಎಷ್ಟರ ಮಟ್ಟಿಗೆ ನಿಜ ಎನ್ನುವುದನ್ನು ತಿಳಿಯಲು ಫ್ಯಾಕ್ಟ್ ಚೆಕ್ ತಂಡವು ವೈದ್ಯರ ಅಭಿಪ್ರಾಯವನ್ನು ಪಡೆದಿದೆ. ಬೆಂಗಳೂರಿನಲ್ಲಿನ ದಿ ಬೆಂಗಳೂರು ಆಸ್ಪತ್ರೆಯ ಮಧುಮೇಹ ತಜ್ಞ ಡಾ. ಶಂಕರ್ ಅವರ ಪ್ರಕಾರ, ಮಧುಮೇಹಿಗಳು ಸ್ವಲ್ಪ ಪ್ರಮಾಣದಲ್ಲಿ ಸಿಹಿಗೆಣಸನ್ನು ಸೇವಿಸಬಹುದು. ಅಪರೂಪಕ್ಕೆ ಸೇವಿಸುವುದರಿಂದ ಶುಗರ್ ಲೆವೆಲ್ ಹೆಚ್ಚಾಗುವುದಿಲ್ಲ. ಈ ವಿಡಿಯೋದಲ್ಲಿ ತಿಳಿಸಿದರುವ ಮಾಹಿತಿ ನಿಜ ಎಂದಿದ್ದಾರೆ.

**ಫ್ಯಾಕ್ಟ್ ಚೆಕ್ ತೀರ್ಮಾನ**

**ಸಜಗ್ ಫ್ಯಾಕ್ಟ್ ಚೆಕ್‌ನಲ್ಲಿ ಮಧುಮೇಹಿಗಳು ಸಿಹಿಗೆಣಸನ್ನು ಸೇವಿಸಬಹುದು. ಆದರೆ ಸೇವಿಸುವಾಗ ಕಡಿಮೆ ಪ್ರಮಾಣದಲ್ಲಿ ಸೇವಿಸಬೇಕು ಎಂದು ಹೇಳಿದ್ದಾರೆ. ಇದರಿಂದ ಯಾವುದೇ ರೀತಿಯ ಹಾನಿಯಾಗುವುದಿಲ್ಲ ಎಂದು ತಿಳಿದು ಬಂದಿದೆ.**



# ಈ ಪ್ರಮುಖ ಲಕ್ಷಣಗಳು ಕಿಡ್ನಿ ವೈಫಲ್ಯದ ಸಂಕೇತವಾಗಿರಬಹುದು

ರಾತ್ರಿಯಲ್ಲಿ ಕಂಡುಬರುವ ಈ 5 ಲಕ್ಷಣಗಳನ್ನು ನಿರ್ಲಕ್ಷಿಸುವ ತಪ್ಪು ಮಾಡದಿರಿ. ಇವು ನಿಮ್ಮ ಮೂತ್ರಪಿಂಡ ವೈಫಲ್ಯದ ಸಂಕೇತವಾಗಿರಬಹುದು. ತಕ್ಷಣ ಚಿಕಿತ್ಸೆ ಪಡೆದರೆ ನಿಮ್ಮ ಮೂತ್ರಪಿಂಡದ ಹಾನಿಯನ್ನು ತಪ್ಪಿಸಬಹುದು. ಮೂತ್ರಪಿಂಡವು ನಮ್ಮ ದೇಹದಿಂದ ಹೆಚ್ಚುವರಿ ನೀರನ್ನು ಹಾಗೂ ಕೊಳೆಯನ್ನು ತೆಗೆದುಹಾಕುವ ಕೆಲಸ ಮಾಡುತ್ತದೆ. ಮೂತ್ರಪಿಂಡದ ಕಾರ್ಯದಲ್ಲಿ ಯಾವುದೇ ಅಡಚಣೆ ಉಂಟಾದರೂ ನಾವು ಆರೋಗ್ಯ ಸಮಸ್ಯೆ ಗಳನ್ನು ಎದುರಿಸಬೇಕಾಗುತ್ತದೆ. ಪರಿಣಾಮವಾಗಿ, ಅಧಿಕ ರಕ್ತ ದೊತ್ತಡ, ಮೂಳೆ ಸಮಸ್ಯೆಗಳು, ಮೂತ್ರದಲ್ಲಿ ರಕ್ತ ಮತ್ತು ಇತರ ಗಂಭೀರ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಅದೇ ಸಮಯದಲ್ಲಿ, ಸಕಾಲಿಕ ಚಿಕಿತ್ಸೆ ಪಡೆಯದಿದ್ದರೆ, ಈ ಸ್ಥಿತಿಯು ಮೂತ್ರಪಿಂಡ ವೈಫಲ್ಯಕ್ಕೆ ಕಾರಣವಾಗಬಹುದು. ಒಂದು ವೇಳೆ ರಾತ್ರಿಯಲ್ಲಿ ಈ ಕೆಲವು ಲಕ್ಷಣಗಳು ಕಂಡುಬಂದರೆ. ಇದು ಮೂತ್ರಪಿಂಡ ವೈಫಲ್ಯದ ಸಂಕೇತವಾಗಿರಬಹುದು. ಅವುಗಳನ್ನು ತಕ್ಷಣ ಗುರುತಿಸುವ ಮೂಲಕ ನಿಮ್ಮ ಮೂತ್ರಪಿಂಡಗಳು ಹಾನಿಗೊಳಗಾಗದಂತೆ ನೀವು ರಕ್ಷಿಸಬಹುದು.

**ರಾತ್ರಿಯಲ್ಲಿ ಆಗಾಗ್ಗೆ ಮೂತ್ರ ವಿಸರ್ಜನೆ ಮಾಡುವುದು:** ಅನೇಕ ಜನರಿಗೆ ರಾತ್ರಿಯಲ್ಲಿ ಮೂತ್ರ ವಿಸರ್ಜಿಸುವ ಅಭ್ಯಾಸವಿರುತ್ತದೆ. ಆದರೆ ರಾತ್ರಿಯಲ್ಲಿ ಆಗಾಗ್ಗೆ ಮೂತ್ರ ವಿಸರ್ಜನೆ ಮಾಡಬೇಕೆಂದು ನಿಮಗೆ ಅನಿಸಿದರೆ. ಆದ್ದರಿಂದ ಇದು ಮೂತ್ರಪಿಂಡದ ಸಮಸ್ಯೆಯ ಸಂಕೇತವಾಗಿರಬಹುದು. ಮೂತ್ರಪಿಂಡಗಳು ಸರಿಯಾಗಿ ಕಾರ್ಯನಿರ್ವಹಿಸದಿದ್ದಾಗ. ಆದ್ದರಿಂದ ದೇಹದ ದ್ರವಗಳು ಸರಿಯಾಗಿ ಫಿಲ್ಟರ್ ಆಗುವುದಿಲ್ಲ, ಇದು ಮೂತ್ರ ವಿಸರ್ಜನೆಯ ಆವರ್ತನದ ಮೇಲೆ ಪರಿಣಾಮ ಬೀರುತ್ತದೆ.






**ನಿದ್ರೆಯಿಂದ ಆಗಾಗ್ಗೆ ಎಚ್ಚರಗೊಳ್ಳುವುದು**

**ಮೂತ್ರಪಿಂಡದ ಸಮಸ್ಯೆಗಳು ನಿದ್ರೆಗೆ ಅಡ್ಡಿಯಾಗಬಹುದು. ಮೂತ್ರಪಿಂಡಗಳು ದೇಹದಿಂದ ವಿಷವನ್ನು ಸರಿಯಾಗಿ ತೆಗೆದುಹಾಕಲು ಸಾಧ್ಯವಾಗದಿದ್ದಾಗ, ಅದು ದೇಹದಲ್ಲಿ ವಿಷತ್ವವನ್ನು ಉಂಟುಮಾಡುತ್ತದೆ. ಇದು ನಿದ್ರೆಯ ಮೇಲೆ ಪರಿಣಾಮ ಬೀರುತ್ತದೆ. ಹಾಗಾಗಿ ವ್ಯಕ್ತಿಯು ಪದೇ ಪದೇ ನಿದ್ರೆಯಿಂದ ಎಚ್ಚರಗೊಳ್ಳುವುದನ್ನು ಅನುಭವಿಸಬಹುದು, ಇದು ಮೂತ್ರಪಿಂಡದ ಸಮಸ್ಯೆಗಳ ಸಂಕೇತವಾಗಿರಬಹುದು.**

**ರಾತ್ರಿಯಲ್ಲಿ ಅತಿಯಾದ ಬಾಯಾರಿಕೆ:** ಮೂತ್ರಪಿಂಡ ವೈಫಲ್ಯದಿಂದಾಗಿ, ದೇಹದಲ್ಲಿನ ನೀರಿನ ಸಮತೋಲನವು ತೊಂದರೆಗೊಳಗಾಗಬಹುದು. ಇದರಿಂದಾಗಿ ರಾತ್ರಿ ತುಂಬಾ ಬಾಯಾರಿಕೆ ಯಾಗುತ್ತದೆ. ರಾತ್ರಿಯಲ್ಲಿ ಪದೇ ಪದೇ ನೀರು ಕುಡಿಯುವ ಅಭ್ಯಾಸವಿದ್ದರೆ. ಆದ್ದರಿಂದ ಇದು ಮೂತ್ರಪಿಂಡದ ಸಮಸ್ಯೆಯ ಸಂಕೇತವಾಗಿರಬಹುದು ಅದನ್ನು ನಿರ್ಲಕ್ಷಿಸ ಬಾರದು.



**ಮೂತ್ರದಲ್ಲಿ ರಕ್ತಸ್ರಾವ:** ಮೂತ್ರದಲ್ಲಿ ರಕ್ತ ಕಾಣಿಸಿ ಕೊಳ್ಳುವುದು ಮೂತ್ರಪಿಂಡದ' ಸೋಂಕು, ಮೂತ್ರಪಿಂಡದಲ್ಲಿನ ಕಲ್ಲುಗಳು, ಇತರ ಗಂಭೀರ ಸಮಸ್ಯೆಗಳ ಸಂಕೇತವಾಗಿರಬಹುದು. ಮೂತ್ರದಲ್ಲಿ ರಕ್ತ ಕಾಣಿಸಿಕೊಂಡರೆ, ಅದನ್ನು ನಿರ್ಲಕ್ಷಿಸಬೇಡಿ. ಇದು ಗಂಭೀರ ಸ್ಥಿತಿಯಾಗಿರಬಹುದು ತಕ್ಷಣ ವೈದ್ಯರನ್ನು ಸಂಪರ್ಕಿಸಿ ಸರಿಯಾದ ಚಿಕಿತ್ಸೆ ಪಡೆಯುವುದು ಮುಖ್ಯ.

**ಮೂತ್ರ ವಿಸರ್ಜನೆಯ ಸಮಯದಲ್ಲಿ ನೋವು ಮತ್ತು ಉರಿ:** ಮೂತ್ರಪಿಂಡದ ತೊಂದರೆಗಳು ಮೂತ್ರನಾಳದ ಸೋಂಕು, ಉರಿಯೂತಕ್ಕೆ ಕಾರಣ ವಾಗಬಹುದು. ಇದು ಮೂತ್ರಪಿಂಡದ ಸೋಂಕು, ತಕ್ಷಣದ ವೈದ್ಯಕೀಯ ಚಿಕಿತ್ಸೆಯ ಅಗತ್ಯವಿರುವ ಯಾವುದಾದರೂ ಗಂಭೀರ ಸಮಸ್ಯೆಯ ಸಂಕೇತವಾಗಿರಬಹುದು.

# ಬಿಸಿಲ ನಾಡಿನಲ್ಲಿ ಸಾಂಸ್ಕೃತಿಕ ಸಂಭ್ರಮಕ್ಕೆ ಬೇಕಿದೆ ಉತ್ಸಾಹ

## ಬಳ್ಳಾರಿ ಜಿಲ್ಲೆಯಿಂದ ವಿಜಯನಗರ ವಿಭಜನೆಯಾಗುತ್ತಿದ್ದಂತೆಯೇ ಹಂಪಿ ನೂತನ ಜಿಲ್ಲೆಯ ಪಾಲಾಯಿತು

• ಉದಯವಾಹಿನಿ, ಬಳ್ಳಾರಿ

ಜಿಲ್ಲಾ ವಿಭಜನೆ ಬಳಿಕ ಹಂಪಿ ಉತ್ಸವ ವಿಜಯನಗರ ಜಿಲ್ಲೆ ಪಾಲಾಗುತ್ತಿದ್ದಂತೆಯೇ, ಗಣಿ ಜಿಲ್ಲೆ ಬಳ್ಳಾರಿಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಉತ್ತೇಜನ ಹಾಗೂ ಸಾಂಸ್ಕೃತಿಕ ಕಲರವಕ್ಕೆ ಸಾಕ್ಷೀಕರಿಸಲು ಆಯೋಜಿಸುತ್ತಿದ್ದ ಬಳ್ಳಾರಿ ಜಿಲ್ಲಾ ಉತ್ಸವ ಕೇವಲ ಒಂದೇ ವರ್ಷಕ್ಕೆ ಸೀಮಿತವಾದಂತಾಗಿದ್ದು, ಕಳೆದ ಎರಡು ವರ್ಷಗಳಿಂದ ಉತ್ಸವ ಆಚರಣೆಯಿಲ್ಲದೆ ನೇಪಥ್ಯಕ್ಕೆ ಸರಿದಿದ್ದು, ಜನತೆಯ ಅಸಮಾಧಾನಕ್ಕೆ ಕಾರಣವಾಗಿದೆ.

**ನೇಪಥ್ಯಕ್ಕೆ ಸರಿದ ಬಳ್ಳಾರಿ ಉತ್ಸವ**

**ಬಳ್ಳಾರಿ ಉತ್ಸವ ಮಾಡಲು ರಾಜ್ಯ ಸರಕಾರಕ್ಕೆ ಆಸಕ್ತಿಯಿಲ್ಲ. ಸರಕಾರ ಬಂದು ಎರಡು ವರ್ಷಗಳು ಕಳೆದರೂ ಮೈಸೂರು ದಸರಾ ಹೊರತುಪಡಿಸಿ ಯಾವುದೇ ಉತ್ಸವ ಆಚರಣೆ ಮಾಡಿಲ್ಲ. ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಿಗೆ ಈ ಬಗ್ಗೆ ಯಾವುದೇ ಕಾಳಜಿಯಿಲ್ಲ. ಜಿಲ್ಲಾ ಉತ್ಸವದಿಂದ ಆಯಾ ಜಿಲ್ಲೆಯ ಇತಿಹಾಸ ಪರಿಚಯಿಸಲು, ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯಲು, ಪ್ರವಾಸೋದ್ಯಮ ಅಭಿವೃದ್ಧಿಗೆ ಸಹಕಾರಿಯಾಗಿತ್ತು. ಆದರೆ, ಈ ಬಗ್ಗೆ ಸರಕಾರಕ್ಕೆ ಯಾವುದೇ ಆಸಕ್ತಿಯಿಲ್ಲ. ಜಿಲ್ಲಾಉಸ್ತುವಾರಿ ಸಚಿವರು ಜಿಲ್ಲೆಯಲ್ಲಿ ಬಾಣಂತಿಯರು ಮೃತಪಟ್ಟಾಗ ಬರಲಿಲ್ಲ. ಬಳ್ಳಾರಿ ಉತ್ಸವ ಆಚರಣೆ ಬಗ್ಗೆ ಮಾತನಾಡುವುದು ಮಾತು ದೂರದ ಮಾತು. ಆಸಕ್ತಿ ಇಲ್ಲವೆಂದರೆ ಉಸ್ತುವಾರಿ ಬಿಟ್ಟು ಹೋಗಲಿ. ಸಿಎಂ ಸಿದ್ದರಾಮಯ್ಯ ಅವರು ಬಳ್ಳಾರಿ ಉತ್ಸವ ಆಚರಣೆಗೆ ಕ್ರಮಕ್ಕೆಗೊಳ್ಳಬೇಕು.**

ಬಳ್ಳಾರಿ ಜಿಲ್ಲೆಯಿಂದ ವಿಜಯನಗರ ವಿಭಜನೆಯಾಗುತ್ತಿದ್ದಂತೆಯೇ ಹಂಪಿ ನೂತನ ಜಿಲ್ಲೆಯ ಪಾಲಾಯಿತು. ಜಿಲ್ಲೆ ವಿಭಜನೆಯ ಕೊರಗನ್ನು ನೀಗಿಸಲು, ಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಗಳನ್ನು ಮುಂದುವರಿಸಿಕೊಂಡು ಹೋಗಲು, ಜಿಲ್ಲೆಯ ಪ್ರವಾಸೋದ್ಯಮ ಹುಲುಸಾಗಿಸುವ ನಿಟ್ಟಿನಲ್ಲಿ ಬಿಜೆಪಿ ಸರಕಾರ 2023 ರ ಜನವರಿ 21, 22ರಂದು ಎರಡು ದಿನಗಳ ಕಾಲ ಹಂಪಿ ಉತ್ಸವಕ್ಕೂ ಮುನ್ನ ಬಳ್ಳಾರಿ ಉತ್ಸವವನ್ನು ಅದ್ದೂರಿಯಾಗಿ ಆಚರಣೆ ಮಾಡುವ ಮೂಲಕ ಮುನ್ನುಡಿ ಬರೆದಿತ್ತು. ಅಲ್ಲದೆ, ಅದೇ ಅವಧಿಯಲ್ಲಿ ತಾಲ್ಲೂಕು ಮಟ್ಟದ ಉತ್ಸವಕ್ಕೂ ಚಾಲನೆ ನೀಡಿತ್ತು.ಅದರಂತೆ ಪ್ರತಿ ವರ್ಷ ಬಳ್ಳಾರಿ ಉತ್ಸವ ಆಚರಣೆ ಮಾಡುವ ಕನಸು ಜಿಲ್ಲೆಯ ಜನರಲ್ಲಿ ಮನೆಮಾಡಿತ್ತು. ಆದರೆ, ಸರಕಾರ ಬದಲಾಗುತ್ತಿದ್ದಂತೆ, ಬಳ್ಳಾರಿ ಉತ್ಸವ ಆಚರಣೆ ವಿಚಾರ ಮೂಲೆಗುಂಪಾಗಿದ್ದು, ಜನರ ನಿರೀಕ್ಷೆಯೂ ತಲೆಕೆಳಗಾಗಿದ್ದು, ಸಾಂಸ್ಕೃತಿಕ ಪ್ರೇಮಿಗಳ ಅಸಮಾಧಾನಕ್ಕೆ ಕಾರಣವಾಗಿದೆ.

ಹಂಪಿ ಉತ್ಸವದಲ್ಲಿ ಜಿಲ್ಲೆಯ ಕಲಾವಿದರಿಗೆ ಅವಕಾಶ ನೀಡುತ್ತಿಲ್ಲ ಎಂಬ ಕೊರಗು ಬಳ್ಳಾರಿ ಉತ್ಸವ ದಿಂದ ಈ ಹಿಂದೆ ದೂರವಾಗಿತ್ತು. ಆದರೆ, ಇದು ಕೇವಲ ಒಂದು ವರ್ಷಕ್ಕೆ ಮಾತ್ರ ಸೀಮಿತವಾದಂತಾಗಿದೆ. ಈ ಹಿಂದೆ ಹಂಪಿ ಉತ್ಸವದ ಜತೆಗೆ ಬಳ್ಳಾರಿ ಉತ್ಸವ ಆಚರಣೆಗೆ ದಿನಾಂಕ ನಿಗದಿಪಡಿಸುವಂತೆ ಕಲಾವಿದರಿಂದ ಜನಪ್ರತಿನಿಧಿಗಳಿಗೆ ಒತ್ತಾಯಿಸಿ ಮನವಿ ಸಲ್ಲಿಸಿದರೂ, ಬಳ್ಳಾರಿ ಉತ್ಸವದ ಬಗ್ಗೆ ಮಾತ್ರ ಯಾವುದೇ ಚಕಾರವಿಲ್ಲದಂತಾಗಿದೆ. ಈ ಹಿಂದೆ ಅಖಂಡ ಬಳ್ಳಾರಿ ಜಿಲ್ಲೆಯಾಗಿದ್ದ ಸಂದರ್ಭದಲ್ಲಿಐತಿಹಾಸಿಕ ಹಂಪಿ ಉತ್ಸವ ಆಚರಣೆಗಾಗಿ ಪ್ರತಿ ವರ್ಷ ಕಲಾವಿದರು ಬೀದಿಗಿಳಿದು ಸರಣಿ ಹೋರಾಟ ನಡೆಸುತ್ತಿದ್ದ, ಮಾದರಿಯಲ್ಲೇ ಈಗ ಬಳ್ಳಾರಿ ಉತ್ಸವಕ್ಕೆ ಪುನಃ ಜಿಲ್ಲೆಯ ಕಲಾವಿದರು, ಜನತೆ ಹೋರಾಟದ ಹಾದಿ ಹಿಡಿಯುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಬಳ್ಳಾರಿ ಉತ್ಸವ ಆಚರಣೆ ಬಗ್ಗೆ ಈವರೆಗೂ ಯಾವುದೇ ಚರ್ಚೆಯಾಗಿಲ್ಲ. ಸರಕಾರದಿಂದ ಯಾವುದೇ ಸೂಚನೆ ಬಂದಿಲ್ಲ.




### ಎರಡು ಜಿಲ್ಲೆಗೆ ಒಬ್ಬರೇ ಉಸ್ತುವಾರಿ

**ಜಿಲ್ಲೆಯಲ್ಲಿ 2023 ರಲ್ಲಿ ನಡೆದ ಬಳ್ಳಾರಿ ಉತ್ಸವ ಆಚರಣೆ ಸಾಂಸ್ಕೃತಿಕ ಸೊಬಗು, ಕಲೆಗಳ ಅನಾವರಣಕ್ಕೆ ಸಾಕ್ಷಿಯಾಗಿತ್ತು. ಆದರೆ, ಈ ಬಾರಿ ಇಂಥ ದೃಶ್ಯಗಳ ಕಾಣ ಸಿಗುವುದು ಕಷ್ಟಸಾಧ್ಯವಾಗಿದೆ. ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ಉಸ್ತುವಾರಿ ಸಚಿವರು ಒಬ್ಬರೇ ಆಗಿದ್ದರೂ, ಹಂಪಿ ಉತ್ಸವ ಆಚರಣೆ ಬೆನ್ನಲೇ ಬಳ್ಳಾರಿ ಉತ್ಸವದ ಭರವಸೆ ನೀಡಿದ್ದರು. ಆದರೆ, ಈಗ ಹಂಪಿ ಉತ್ಸವಕ್ಕೆ ಮಾತ್ರ ದಿನಾಂಕ ನಿಗದಿಪಡಿಸಿ, ಬಳ್ಳಾರಿ ಉತ್ಸವ ಕಡೆಗಣಿಸಿರುವ ಸಚಿವರ ವಿರುದ್ಧ ಅಸಮಾಧಾನದ ಮಾತುಗಳು ಕೇಳಿಬರುತ್ತಿವೆ. ಇದಲ್ಲದೆ, ಬಳ್ಳಾರಿ ಉತ್ಸವ ಆಚರಣೆಗೆ ಸಂಬಂಧಿಸಿದಂತೆ ಈವರೆಗೂ ಜಿಲ್ಲೆಯ ಜನಪ್ರತಿನಿಧಿಗಳು ಯಾವುದೇ ಧ್ವನಿ ಎತ್ತದೆ ಇರುವುದು ಕಲಾವಿದರ ತೀವ್ರ ಆಕ್ರೋಶಕ್ಕೂ ಗುರಿಯಾಗಿದೆ.**

## ಮಿನಿ ನ್ಯೂಸ್

### ಬೀದರ್ ಮುಖ್ಯರಸ್ತೆಯಿಂದ ಬುಗ್ಗಿಯವರೆಗೆ ರಸ್ತೆ ನಿರ್ಮಿಸಲು ಮನವಿ



ಉದಯವಾಹಿನಿ ಚಿತ್ರ

• ಉದಯವಾಹಿನಿ,ಚಿಂಚೋಳಿ

ಪಟ್ಟಣದಲ್ಲಿ ಅತ್ಯಂತ ವಿಜೃಂಭಣೆಯಿಂದ ಮಾರ್ಚ್ ನಲ್ಲಿ ನಡೆಯುವ ಚನ್ನಬಸವ ಶಿವಯೋಗಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಬರುವ ಭಕ್ತಾದಿಗಳಿಗೆ ಸಾರ್ವಜನಿಕರಿಗೆ ಮತ್ತು ರೈತರ ಅನುಕೂಲಕ್ಕಾಗಿ ಪುರಸಭೆ ವ್ಯಾಪ್ತಿಯ ಬೀದರ ಮುಖ್ಯರಸ್ತೆಯಿಂದ ಪಂಚಾಲಿಂಗೇಶ್ವರ ಬುಗ್ಗಿಯವರೆಗೆ ಹೋಗುವ ರಸ್ತೆಯ ಕಾಮಗಾರಿಯನ್ನು ಶೀಘ್ರದಲ್ಲೇ ಪ್ರಾರಂಭಿಸಿ ಮುಕ್ತಾಯಗೊಳಿಸಿ ಅನುಕೂಲ ಕಲ್ಪಿಸಿಕೊಡಬೇಕು ಎಂದು ಜಾತ್ರಾ ಮಹೋತ್ಸವದ ಸಮಿತಿ, ಗ್ರಾಮಸ್ಥರು ಪುರಸಭೆ ಮುಖ್ಯಾಧಿಕಾರಿ ಕಾಶಿನಾಥ ಧನ್ನಿಯವರಿಗೆ ಮನವಿಪತ್ರ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಂತೋಷ ಗಡಂತಿ,ಗೋಪಾಲರಾವ ಕಟ್ಟಿಮನಿ,ಕೆಎಂ ಬಾರಿ,ವಿಜಯಕುಮಾರ ಚೇಂಗಟಾ,ರಾಜು ಪವ್ಹಾರ,ಗಿರಿರಾಜ ನಾಟೀಕಾರ,ಶ್ರೀಕಾಂತ ಪಿತ್ತಲ,ರವಿ ಹೊಸಬಾಯಿ,ಭೀಮಶೆಟ್ಟಿ,ಭೀಮರಾವ ರಾಠೋಡ್,ಲೋಕೇಶ ಶೇಳ್ಳಗಿ,ಅಭಿಷೇಕ,ಮಧುಕರ ಮಡಿವಾಳ ಇದ್ದರು.

### ಕಣ್ಣಿಗೇರಿ ಬಳಿ ಕೆಎಸ್ಆರ್‌ಟಿಸಿ ಬಸ್ ಪಲ್ಟಿ, 17 ಜನರಿಗೆ ಗಾಯ

• ಉದಯವಾಹಿನಿ, ಕಾರವಾರ

ಕೆಎಸ್ಆರ್‌ಟಿಸಿ ಬಸ್‌ಪಲ್ಟಿಯಾಗಿ 17 ಜನ ಗಾಯಗೊಂಡ ಘಟನೆ ಉತ್ತರಕನ್ನಡ ಜಿಲ್ಲೆ ಯಲ್ಲಾಪುರ ತಾಲ್ಲೂಕಿನ ಕಣ್ಣಿಗೇರಿ ಬಳಿ ಸಂಭವಿಸಿದೆ. ಶಿರಸಿಯಿಂದ ಬೆಳಗಾವಿಗೆ ಹೋಗುತ್ತಿದ್ದ ಕೆಎಸ್ಆರ್‌ಟಿಸಿ ಬಸ್ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿಯಾಗಿ ಪಲ್ಟಿಯಾಗಿದೆ. ಗಾಯಾಳುಗಳನ್ನು ಯಲ್ಲಾಪುರ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಂಭೀರವಾಗಿ ಗಾಯಗೊಂಡ ಇಬ್ಬರನ್ನು ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಯಲ್ಲಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಘಟನೆ ಸಂಭವಿಸಿದೆ.

### ಸಮಾಜದಲ್ಲಿ ವಿಷ ಬೀಜ ಬಿತ್ತುವ ಕೆಲಸವನ್ನು ಪ್ರತಾಪ್ ಸಿಂಹ ಮಾಡಬಾರದು

• ಉದಯವಾಹಿನಿ, ಬೀದರ್

ಪೊಲೀಸ್ ಠಾಣೆ ಮೇಲೆ ಕಲ್ಲುತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ಪ್ರತಾಪ್ ಸಿಂಹ್ ಹೇಳಿಕೆಗೆ ಪೌರಾಡಳಿತ ಸಚಿವ ರಹೀಂಖಾನ್ ಏಕವಚನದಲ್ಲೇ ತಿರುಗೇಟು ಕೊಟ್ಟಿದ್ದಾರೆ. ಸಮಾಜದಲ್ಲಿ ವಿಷ ಬೀಜ ಬಿತ್ತುವ ಕೆಲಸವನ್ನ ಪ್ರತಾಪ್ ಸಿಂಹ ಮಾಡಬಾರದು. ಪ್ರತಾಪ ಸಿಂಹರಿಗೆ ಇರುವ ಗೌರವ ಎಷ್ಟು ಅನ್ನೋದು ಈಗಾಗಲೇ ಜಗಜ್ಜಾಹೀರಾಗಿದೆ ಎಂದು ಹೇಳಿದರು ಬೀದರ್‌ನಲ್ಲಿ ಮಾತನಾಡಿದ ಅವರು, ಸಿಟ್ಟಿಂಗ್ ಸಂಸದ ಇದ್ರೂ, ಅವರಿಗೆ ಈ ಬಾರಿ ಟಿಕೆಟ್ ನೀಡಿಲ್ಲ, ಸುಳ್ಳು ಆರೋಪ ಮಾಡುವುದು, ವಿಷಬೀಜ ಬಿತ್ತುವುದನ್ನು ಮಾಡುತ್ತಿದ್ದಾರೆ. ತಪ್ಪು ಯಾರೇ ಮಾಡಿದ್ರೂ ಅವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳುತ್ತೆ. ಎಲ್ಲಾ ವಿಚಾರದಲ್ಲೂ ಒಂದು ಸಮುದಾಯವನ್ನ ಟಾರ್ಗೆಟ್ ಮಾಡುವ ಕೆಲಸ ಬಿಜೆಪಿ ಮಾಡ್ತಿದೆ. ಉಪಚುನಾವಣೆಗಳಲ್ಲಿ ಬಿಜೆಪಿಗೆ ಜನರು ತಕ್ಕಪಾಠ ಕಲಿಸಿದ್ದಾರೆ. ಇನ್ನು ಬಿಜೆಪಿ ಬುದ್ಧಿ ಕಲಿತುಕೊಂಡಿಲ್ಲ ವಾಗ್ದಾಳಿ ನಡೆಸಿದರು.

### ಗಂಗಾ ಪುಣ್ಯಸ್ನಾನದ ಬಗ್ಗೆ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ

• ಉದಯವಾಹಿನಿ, ರಾಯಚೂರು

ಕುಂಭಮೇಳ ಮತ್ತು ಗಂಗಾ ಪುಣ್ಯಸ್ನಾನದ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೀಡಿದ ಹೇಳಿಕೆಗೆ ಮಂತ್ರಾಲಯ ಶ್ರೀಗಳು ಬೇಸರ ವ್ಯಕ್ತಪಡಿಸಿದ್ದಾರೆ. ಇನ್ನೊಬ್ಬರ ಶ್ರದ್ದೆ, ಆಚರಣೆಯ ಬಗ್ಗೆ ಲೇವಡಿ ಮಾಡುವುದು ಸರಿಯಲ್ಲ ಎಂದು ಶ್ರೀಗಳು ಅಭಿಪ್ರಾಯ ಪಟ್ಟಿದ್ದಾರೆ. ಮೌನಿ ಅಮಾವಾಸ್ಯೆಯ ದಿನ ನಡೆದ ಕಾಲ್ತುಳಿತದ ಬಗ್ಗೆ ಪ್ರತಿಕ್ರಿಯಿಸಿದ ಅವರು, ಮಂತ್ರಾಲಯ ಮಠದ ಸುಬುಧೇಂದ್ರ ತೀರ್ಥ ಶ್ರೀಗಳು, ಭಕ್ತರು ಸಹ ಸ್ವಯಂ ಜಾಗೃತರಾಗಿರಬೇಕು. ನಿಯಮ ಪಾಲನೆ ಜೊತೆಗೆ ತಾಳ್ಮೆಯಿಂದ ಇರಬೇಕು. ಪೊಲೀಸ್ ಮತ್ತು ಜಿಲ್ಲಾಡಳಿತದ ಜೊತೆ ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

# ಕೋಲಿ ಸಮಾಜ ಸಂಘಟನಾ ಕಾರ್ಯದರ್ಶಿ ಉಮೇಶ ಮುದ್ನಾಳ ಹೇಳಿಕೆ

• ಉದಯವಾಹಿನಿ, ಯಾದಗಿರಿ

ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಜೊತೆಗೆ ಸಂಸ್ಕಾರ ಕೊಡಿಸಿದಾಗ ಮಾತ್ರ ಸಮಾಜದಲ್ಲಿ ಮುಖ್ಯವಾಹಿನಿಗೆ ಬರಲು ಸಾಧ್ಯ ವಾಗುತ್ತದೆ ಎಂದು ಅಖೀಲ ಭಾರತೀಯ ಕೋಲಿ ಸಮಾಜ ರಾಜ್ಯ ಸಂಘಟನಾ ಕಾರ್ಯದರ್ಶಿ ಉಮೇಶ ಮುದ್ನಾಳ ಅವರು ಹೇಳಿದರು. ನಗರದ ಗಂಜ್ ಪ್ರದೇಶದಲ್ಲಿರುವ ಮೌನೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದ ಮೆಕ್ಯಾನಿಕರ ಮತ್ತು ಮಾಲೀಕರ ಜಾಗೃತಿ ಸಭೆಯಲ್ಲಿ ಅವರು ಮಾತನಾಡಿದರು.

ಸರಕಾರದಿಂದ ಬರುವಂತಹ ಸಾಲ ಸೌಲ್ಯಭ್ಯಗಳನ್ನು ಪಡೆಯದೆ ಮೆಕ್ಯಾನಿಕರರು ಮತ್ತು ಮಾಲೀಕರು ವಂಚಿತರಾಗಿದ್ದು ದುರದೃಷ್ಟಕರ ಸಂಗತಿಯಾಗಿದೆ. ಜಿಲ್ಲೆಯಾಗಿ ಸುಮಾರು 15 ವರ್ಷ ಗತಿಸಿದರೂ, ಯಾದಗಿರಿ ಜಿಲ್ಲೆಯು ಎಲ್ಲಾ ಕ್ಷೇತ್ರದಲ್ಲಿ ಹಿಂದುಳಿಯಲು ಅಧಿಕಾರಿಗಳು ಮತ್ತು ಜನ ಪ್ರತಿನಿಧಿಗಳ ದಿವ್ಯ ನಿರ್ಲಕ್ಷ್ಯವೇ ಕಾರಣವಾಗಿದೆ ಎಂದರು. ಕೃಷಿ ಕೂಲಿ ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳನ್ನು ಉಳ್ಳವರ ಮತ್ತು ದಲ್ಲಾಳಿಗಳ ಪಾಲಾಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ, ಮಕ್ಕಳಿಗೆ ಆಸ್ತಿ ಮಾಡುವ ಬದಲು ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿ ಎಂದು ಹೇಳಿದರು. ಶರಣಪ್ಪ ಕೌಳೂರು, ಹನುಮಂತ ಆರ್ಯರ್, ಮೊಹಮದ್ ಶಫಿ, ಬನ್ನಪ್ಪಗೌಡ ಯಲ್ಲೇರಿ, ಮೊಹ ಮದ್ ಗೌಸ್ ಯಾದಗಿರಿ, ಮಹ್ಮದ್ ಕರೀಮ್ ,ಸೈಯದ್ ಶಿರಾಜುದ್ದಿನ್, ಮೊಹಮದ್ ನಿಸ್ಸಾರ್, ವೀರಣ್ಣ ಯಳವಾರ, ಜಲಾಲ ಸಾಬ್ ಯಾದಗಿರಿ, ಚಾಂದ್ ಪಾಷಾ ಯಾದಗಿರಿ, ಪ್ರಭು ಹಯ್ಯಾಳ, ಎಂ.ಡಿ.ಉಮರ್, ಮೊಹಮದ್ ಜಲಾಲುದ್ದೀನ್, ಬಾಬರ್ ಅಲಿಮುದ್ದಿನ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

**ಮೆಕ್ಯಾನಿಕರ ಮತ್ತು ಮಾಲೀಕರ ಜಾಗೃತಿ ಸಭೆ**

# ದೇವರ ಒಲುಮೆಗೆ ಕರುಣೆ ಬಹಳ ಮುಖ್ಯ

• ಉದಯವಾಹಿನಿ, ಕಲಬುರಗಿ

ದೇವರ ಒಲುಮೆ ಪಡೆದುಕೊಳ್ಳಲು ಹಲವಾರು ಮಾರ್ಗಗಳಿದ್ದು ಅವುಗಳಲ್ಲಿ ತ್ಯಾಗ ಮತ್ತು ಕರುಣೆ ಉತ್ತಮವಾದದ್ದು' ಎಂದು ಶಿರಹಟ್ಟಿ ಭಾವೈಕ್ಯತೆ ಸಂಸ್ಥಾನ ಮಠದ ಶ್ರೀಫಕೀರ ದಿಂಗಾಲೇಶ್ವರ ಜಗದ್ಗುರುಗಳು ತಿಳಸಿದರು.

ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ ಕೊಕಟನೂರ ಗ್ರಾಮದ ಮಡಿವಾಳೇಶ್ವರ ಗದ್ದಿಗಿ ಮಠದಲ್ಲಿ ಲಿಂ. ಸಿದ್ಧಲಿಂಗ ಮಹಾಶಿವಯೋಗಿಗಳ 31ನೇ ಪುಣ್ಯಸ್ಮರಣೋತ್ಸವ ಹಾಗೂ ಮಡಿವಾಳೇಶ್ವರ ಮಹಾಸ್ವಾಮಿಗಳವರ 16ನೇ ಪಟ್ಟಾಧಿಕಾರ ವಾರ್ಷಿಕೋತ್ಸವದ ಅಂಗವಾಗಿ ನಡೆಯುತ್ತಿರುವ ಬಸವಪುರಾಣದಲ್ಲಿ ಭಾವೈಕ್ಯತಾ ಧರ್ಮ ಸಭೆಯ ದಿವ್ಯ ಸಾನಿಧ್ಯ ವಹಿಸಿ ಶಿರಹಟ್ಟಿ ಜಗದ್ಗುರುಗಳು ಆಶೀರ್ವಚನ ನೀಡಿದರು. ಮಸಬಿನಹಾಳ ದಾಸೋಹ ಮಠದ ಶ್ರೀಸಿದ್ದರಾಮ ಮಹಾಸ್ವಾಮಿಗಳು, ಮಮದಾಪುರ ವಿರಕ್ತಮಠದ ಶ್ರೀ ಮುರುಗೇಂದ್ರ ಮಹಾಸ್ವಾಮಿಗಳು, ಶ್ರೀಮಠದ ಪೂಜ್ಯರಾದ ಶ್ರೀ ಮಡಿವಾಳೇಶ್ವರ ಮಹಾಸ್ವಾಮಿಗಳು,ಬಿಳಗಿಯ ಸಂಗನಬಸವ ದೇವರು ಸಮ್ಮುಖ ವಹಿಸಿದ್ದರು ಪುರಾಣಿಕರಾದ ಶ್ರೀ ಬಂಡಯ್ಯ ಶಾಸ್ತ್ರಿಗಳು ಸುಂಟನೂರ ಬಸವ ಪುರಾಣ ಹೇಳಿದರು.



ಉದಯವಾಹಿನಿ ಚಿತ್ರ

# ರಾಯಚೂರು-ಬೆಳಗಾವಿ ರಾಜ್ಯ ಹೆದ್ದಾರಿ ಅದ್ವಾನ

• ಉದಯವಾಹಿನಿ, ಬಾಗಲಕೋಟೆ

ಜಿಲ್ಲೆಯ ಹಲವೆಡೆ ರಾಜ್ಯ ಹೆದ್ದಾರಿ ಸೇರಿದಂತೆ ಗ್ರಾಮೀಣ ರಸ್ತೆಗಳು ಸುಧಾರಣೆ ಕಾಣುತ್ತಿದ್ದರೂ ರಾಯಚೂರು – ಬೆಳಗಾವಿ ರಾಜ್ಯ ಹೆದ್ದಾರಿ ಸುಧಾರಣೆ ಕಾಣದೆ ಸಂಪೂರ್ಣ ಹದಗೆಟ್ಟಿದ್ದು, ಸಂಚಾರ ಬಲೂ ದುಸ್ತರವಾಗಿದೆ. ಜಿಲ್ಲೆಯ ಶಿರೂರು ಕ್ರಾಸ್‌ನಿಂದ ಹುನಗುಂದ ಮಾರ್ಗದಲ್ಲಿ ಸಂಚರಿಸುವ ಹೆದ್ದಾರಿಯಲ್ಲಿ ಬಹುತೇಕ ಕಡೆ ಡಾಂಬರ್ ಕಿತ್ತು ಹೋಗಿದ್ದು, ಸವಾರರ ಸಂಚಾರಕ್ಕೆ ಸಂಚಕಾರ ಬಂದೊದಗಿದೆ. ಈ ಹೆದ್ದಾರಿಯಲ್ಲಿ ಶಿರೂರ ಕ್ರಾಸ್ ದಾಟಿದಾಕ್ಷಣ ಅಂದಾಜು 5 ಕಿ ಮೀ ವ್ಯಾಪ್ತಿಯಲ್ಲಿ ಅಲ್ಲಲ್ಲಿ ಡಾಂಬರ್ ಕಿತ್ತು ಹೋಗಿದ್ದು ಇದು ರಾಜ್ಯ ಹೆದ್ದಾರಿಯೋ, ಗ್ರಾಮೀಣ ರಸ್ತೆಯೋ ಎಂಬಂತಾಗಿದೆ.

ಹಲವು ವರ್ಷದ ಹಿಂದೆ ಬಾಗಲಕೋಟೆಯಿಂದ ಹುನಗುಂದವರೆಗೆ ನಿರ್ಮಾಣವಾದ ಈ ರಾಜ್ಯ ಹೆದ್ದಾರಿಯಲ್ಲಿ ಸಂಚಾರ ಸುಲಭವಾಗಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಶಿರೂರ ಕ್ರಾಸ್‌ನಿಂದ ಕಮತಗಿ ತಲುಪಬೇಕೆಂದರೆ ವಾಹನ ಸವಾರರು ಹರಸಾಹಸ ಪಡಬೇಕು. ಅದರಲ್ಲೂ ಬೈಕ್ ಸವಾರರಂತೂ ಸ್ವಲ್ಪ ಯಾಮಾರಿದರೆ ಸಾಕು ಅಪಾಯ ಕಟ್ಟಿಟ್ಟ ಬುತ್ತಿಯಂತಾಗಿದೆ. ಇನ್ನು ರಸ್ತೆ ಅಕ್ಕಪಕ್ಕ ಗಿಡಗಂಟಿಗಳು ಬೆಳೆದಿದ್ದು, ಅವುಗಳನ್ನು ತೆರವುಗೊಳಿಸುವಲ್ಲಿ ಇಲಾಖೆ ನಿರ್ಲಕ್ಷ್ಯ ವಹಿಸಿದೆ ಎಂಬ ದೂರು ಕೇಳಿ ಬಂದಿದೆ. ವರ್ಷಕ್ಕೊಮ್ಮೆ ಈ ರಸ್ತೆಗೆ ಡಾಂಬರ್ ಹಾಕುವ ಇಲಾಖೆ ಶಾಶ್ವತ ಯೋಜನೆಗೆ ಯಾವ ಕ್ರಮ ಕೈಗೊಳ್ಳಲಿದೆ ಎಂಬ ಪ್ರಶ್ನೆ ಎದುರಾಗಿದೆ. ಈ ರಸ್ತೆ ವ್ಯಾಪ್ತಿ ಹುನಗುಂದ ಹಾಗೂ ಬಾಗಲಕೋಟೆಯ ಉಪವಿಭಾಗಕ್ಕೆ ಸಂಬಂಧಿಸಿದ್ದಾಗಿದ್ದು, ಸೂಕ್ತ ವ್ಯವಸ್ಥೆ ಮಾಡಿ ಸುಲಭ ಸಂಚಾರ ಹಾಗೂ ಅಪಘಾತವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂಬ ಆಗ್ರಹ ಕೇಳಿದೆ.



ಉದಯವಾಹಿನಿ ಚಿತ್ರ

**ರಾಂಗ್ ರೂಟ್:** ಈ ರಸ್ತೆಯಲ್ಲಿ ಅಂದಾಜು ಐದಾರು ಕಿ ಮೀ ವ್ಯಾಪ್ತಿಯಲ್ಲಿ ಹದಗೆಟ್ಟಿರುವ ರಸ್ತೆಯಿಂದಾಗಿ ವಾಹನಗಳು ರಾಂಗ್ ರೂಟ್‌ನಲ್ಲಿ ಅಡ್ಡಾದಿಡ್ಡಿಯಾಗಿ ಸಂಚರಿಸುತ್ತವೆ. ಕೆಲವೊಮ್ಮೆ ರಸ್ತೆ ತಿರುವು ಇರುವಲ್ಲಿಎದುರಿಗೆ ಬರುವ ವಾಹನಗಳು ಕಾಣದಂತಾಗಿ ಅಪಾಯಕ್ಕೆ ಆಹ್ವಾನ ನೀಡುವಂತಾಗಿದೆ ಎಂದು ಬೈಕ್ ಸವಾರರು ಗೋಳಿಡುತ್ತಾರೆ.

**ಕಾಟಾಚಾರದ ರಿಪೇರಿ:** ಈ ಹೆದ್ದಾರಿಯಲ್ಲಿ ತನ್ನ ವ್ಯಾಪ್ತಿಯಲ್ಲಿನ ರಸ್ತೆ ದುರಸ್ತಿಗೆ ಪಿಡಬ್ಲ್ಯೂಡಿ ಇಲಾಖೆಯ ಹುನಗುಂದ ಉಪವಿಭಾಗ ಮುಂದಾಗಿತ್ತು. ಅಲ್ಲಲ್ಲಿ ತಗ್ಗು–ಗುಂಡಿಗಳಿಗೆ ಡಾಂಬರ್ ಹಾಕಿ ರಸ್ತೆಗೆ ತೇಪೆ ಹಚ್ಚುವ ಕೆಲಸ ಮಾಡಿದ್ದು, ಸ್ವಲ್ಪ ಮಟ್ಟಿನ ಸಮಾಧಾನ ಸವಾರರಲ್ಲಿ ಉಂಟಾಗಿದೆ.

ಶಿರೂರ ಕ್ರಾಸ್‌ನಿಂದ ನಾಲ್ಕೈದು ಕಿ.ಮೀ. ರಸ್ತೆಯಲ್ಲಿನ ಡಾಂಬರ್ ಕಿತ್ತು ಹೋಗಿದ್ದು, ಬೈಕ್ ಸವಾರರಿಗೆ ಭಯದ ವಾತಾವರಣವಿದೆ. ಇಲಾಖೆ ಅಧಿಕಾರಿಗಳು ಎಚ್ಚೆತ್ತುಗೊಳ್ಳಬೇಕು.

### ಪ್ರಯಾಣಕ್ಕೆ ಭಯ

**ಹೆದ್ದಾರಿಯಲ್ಲಿನ ಗುಂಡಿಗಳಿಂದಾಗಿ ರಾತ್ರಿ ಈ ರಸ್ತೆಯಲ್ಲಿ ಪ್ರಯಾಣ ಮಾಡಬೇಕೆಂದರೆ ಜೀವ ಕೈಯಲ್ಲಿ ಹಿಡಿದುಕೊಂಡು ಸಂಚರಿಸಬೇಕಾದ ಅನಿವಾರ್ಯತೆ ಇದೆ. ಅಂದಾಜು ಒಂದು ವರ್ಷದಿಂದ ಈ ಪರಿಸ್ಥಿತಿ ಇದ್ದು, ಇಲಾಖೆ ಅಧಿಕಾರಿಗಳ ಕಣ್ಣಿಗೆ ಕಾಣುವುದಿಲ್ಲವೇ? ಎಂಬ ಪ್ರಶ್ನೆ ಮೂಡಿದೆ. ಹೆದ್ದಾರಿ ಪ್ರಾಧಿಕಾರದಿಂದ ರಸ್ತೆ ದುರಸ್ತಿಗೊಳ್ಳಲಿದೆ. ಇದಕ್ಕೆಂದೇ 5 ಕೋಟಿ ರೂ. ವೆಚ್ಚದ ಟೆಂಡರ್ ಕರೆಯಲಾಗಿದ್ದು, ಪ್ರಕ್ರಿಯೆ ಪೂರ್ಣಗೊಂಡ ತಕ್ಷಣ ಕಾಮಗಾರಿ ಆರಂಭಗೊಳ್ಳಲಿದೆ.**


# ಹೊನ್ನಳ್ಳಿ ಯಲ್ಲಾದೇವಿ ಜಾತ್ರೆಗೆ ಆಳಂದದಿಂದ ಪಲ್ಲಕ್ಕಿ ಉತ್ಸವ

• ಉದಯವಾಹಿನಿ, ಆಳಂದ

ತಾಲ್ಲೂಕಿನ ಹೊನ್ನಳ್ಳಿ ಗ್ರಾಮದಲ್ಲಿ ಫೆ.12ರಂದು ನಡೆಯಲಿರುವ ಗ್ರಾಮದೇವತೆ ಶ್ರೀ ಯಲ್ಲಮ್ಮದೇವಿ ಜಾತ್ರೆಮಹೋತ್ಸವ ಆರಂಭಪೂರ್ವ ಪಟ್ಟಣದ ಹನುಮಾನ ದೇವಸ್ಥಾನದಿಂದ ಮಂಗಳವಾರ ಹೊರಟ ಪಲ್ಲಕ್ಕಿ ಉತ್ಸವಕ್ಕೆ ಯಲ್ಲಮ್ಮ ದೇವಸ್ಥಾನ ಕಮೀಟಿ ಅಧ್ಯಕ್ಷರಾದ, ತಹಸೀಲ್ದಾರ ಅಣ್ಣಾರಾವ್ ಪಾಟೀಲ ಅವರು ಮಂಗಳವಾರ ದೇವಿಗೆ ಪೂಜೆ ನೆರವೇರಿ ಪಲ್ಲಕ್ಕಿ ಉತ್ಸವಕ್ಕೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಗ್ರೇಡ್–2ತಹಸೀಲ್ದಾರ ಬಿ.ಜಿ.ಕುದರಿ, ಶಿರಸ್ತೆದಾರ ಮಹೇಶ ಸಜ್ಜನ್, ಕಂದಾಯ ನಿರೀಕ್ಷಕ ಮುಜಾಹೀದ್, ಗ್ರಾಮದ ಭಕ್ತಮಂಡಳಿಯ ಪ್ರಮುಖ ಬಸವರಾಜ ಪಾಟೀಲ, ಶಶಿಕಾಂತ ಮಾನೆ, ನಾಗಣ್ಣಪ್ಪ ಕೋರೆ, ಮಲ್ಲಿನಾಥ ಜವಳಿ, ಶರಣಪ್ಪ ಕಾಂಬಳೆ, ಮೋಹನ ಪವಾರ, ಈಶ್ವರ ಪವಾರ, ಮಲ್ಲೇಶ ಬಿರಾದಾರ, ದಯಾನಂದ ಜವಳಿ, ಬಾಬು ಹದರಿ, ತುಕಾರಾಮ ಕಲಕೇರಿ, ರಾಜೇಂದ್ರ ಅಟ್ಟೂರ, ಗ್ರಾಪಂ ಸದಸ್ಯ ನಿತ್ಯನಂದ ಜವಳಿ, ಸುನಿಲ ಜಮಾದಾರ, ಗ್ರಾಮ ಆಡಳಿತಾಧಿಕಾರಿ ಆನಂದ ಪೂಜಾರಿ ಸೇರಿದಂತೆ ಭಕ್ತಾದಿಗಳು ಉಪಸ್ಥಿತರಿದ್ದರು.

ಬಳಿಕ ಭಕ್ತಾದಿಗಳು ಪಲ್ಲಕ್ಕಿ ಉತ್ಸವ ಹನುಮಾನ ಮಂದಿರದಿಂದ ಹೊರಟು ಹತ್ಯಾನಗಲ್ಲಿ, ಮುಖ್ಯರಸ್ತೆಯ ಮಾರ್ಗವಾಗಿ ಸಡಗರ, ಸಂಭ್ರಮದ ಮಧ್ಯ ವಾದ್ಯ ವೈಭವಗಳೊಂದಿಗೆ ಹೊರಟ ಮೆರವಣಿಗೆ ರಾತ್ರಿ ಹೊನ್ನಳ್ಳಿ ದೇವಸ್ಥಾನಕ್ಕೆ ತಲುಪಿದ ಬಳಿಕ ಚೌಡಕಿಯರ ಹಾಗೂ ಜೋಗಪ್ಪ ಮೇಳದಿಂದ ಯಲ್ಲದೇವಿಯ ಭಜನೆ, ಗೊಂದಲ ಹಾಗೂ ಜಾಗರಣೆ ಸಾಂಸ್ಕೃತಿಕ ಕಾರ್ಯಕ್ರಮ ನಡೆದವು. ಬುಧವಾರ ಫೆ 12ಕ್ಕೆ ಭಾರತ ಹುಣ್ಣಿಮೆ ಅಂಗವಾಗಿ ನಡೆಯುವ ಜಾತ್ರಾ ಮಹೋತ್ಸವದಲ್ಲಿ ಕರ್ನಾಟಕ ಹಾಗೂ ಮಹಾರಾಷ್ಟ್ರ ಭಾಗದ ಸಹಸ್ರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಪಾಲ್ಗೊಳ್ಳಲಿದ್ದು, ಬೆಳಗಿನ 5:00ಗಂಟೆಗೆ ರುದ್ರಾಭಿಷೇಕ ವಿಶೇಷ ಪೂಜೆ ಮಧ್ಯಾಹ್ನ ಗ್ರಾಮದ ಪ್ರಮುಖ ಬೀದಿಯಲ್ಲಿ ದೇವಿಯ ಪಲ್ಲಕ್ಕಿ ಮಹೋತ್ಸವ ಹಾಗೂ ವಿವಿಧ ಭಾಗಗಳಿಂದ ಆಗಮಿಸುವ ದೇವಿಯ ಭಕ್ತಾದಿಗಳಿಂದ ನೈವೇದ್ಯ ಅರ್ಪಣೆ, ದರ್ಶನ ನಡೆಯುವುದು. ಸಂಜೆ ಗೊಂದಲ, ಚೌಡಕಿ ಪದ, ಜೋಗಪ್ಪರ ಕುಣಿತದಂತಹ ಸಾಂಸ್ಕೃತಿ ಕಾರ್ಯಕ್ರಮ ಜರುಗಲಿವೆ



ಉದಯವಾಹಿನಿ ಚಿತ್ರ

**ಫೆ. 13ರಂದು 11:00ಗಂಟೆಗೆ ಗೀ ಗೀ ಪದಗಳು, ಮಧ್ಯಾಹ್ನ 4:00ಗಂಟೆಗೆ ಜಂಗೀ ಪೈಲ್ವಾನರ ಕುಸ್ತಿಗಳು ಸಂಜೆ ರಂಗು ರಂಗಿನ ಮದುಸುಡುವ ಕಾರ್ಯಕ್ರಮ ಅನ್ನ ಪ್ರಸಾದ ಹಾಗೂ ಫೆ. 14ರಂದು ಸಂಜೆ ದೇವಸ್ಥಾನದಲ್ಲಿ ಭಕ್ತಾದಿಗಳಿಂದ ದೀಪೋತ್ಸವ ಕಾರ್ಯಕ್ರಮ ನಡೆಯಲಿದೆ, ಆಗಮಿಸುವ ಭಕ್ತಾದಿಗಳು ಶಾಂತತೆಯಿಂದ ದರ್ಶನ ಕೈಗೊಳ್ಳಬೇಕು. ಸ್ವಚ್ಛತೆ ಕಾಪಾಡಿಕೊಳ್ಳಬೇಕು ಎಂದು ಜಾತ್ರಾ ಕಮೀಟಿ ತಿಳಿಸಿದೆ.**

# ಸ್ಕ್ರೀನಿಂಗ್ ಮೂಲಕ ಕ್ಷಯರೋಗ ತಪಾಸಣೆ

• ಉದಯವಾಹಿನಿ, ಕಲಬುರಗಿ

ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕ್ಷಯ ರೋಗ ನಿರ್ಮೂಲನಾ ಕಾರ್ಯಾಲಯ ಹಾಗೂ ಕೇಂದ್ರ ಕಾರಾಗೃಹದ ಇವುಗಳ ಸಹಯೋಗದೊಂದಿಗೆ ಕಲಬುರಗಿ ಕೇಂದ್ರ ಕಾರಾಗೃಹದ ಬಂದಿಗಳಿಗೆ ಬುಧವಾರ ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಉಚಿತವಾಗಿ ಟಿ.ಬಿ. ಮುಕ್ತ ಭಾರತ 100 ದಿನಗಳ ಕ್ಷಯರೋಗ ಅಭಿಯಾನದಡಿ ಸ್ಕ್ರೀನಿಂಗ್ ಮೂಲಕ ಕ್ಷಯರೋಗ ಪರೀಕ್ಷೆ ಮೂಲಕ ತಪಾಸಣೆ ನಡೆಸಲಾಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ, ಜಿಲ್ಲಾ ಕ್ಷಯ ರೋಗ ನಿರ್ಮೂಲನಾ ಅಧಿಕಾರಿ ಡಾ|| ಚಂದ್ರಕಾಂತ ನರಬೋಳಿ ಅವರು ಮಾತನಾಡಿ, ಕ್ಷಯ ರೋಗವು ಬ್ಯಾಕ್ಟೀರಿಯಾ ಮೂಲಕ ಹರಡಲಿದ್ದು, ಒಬ್ಬರಿಂದ ಒಬ್ಬರಿಗೆ ಹರಡುವ ಕಾಯಿಲೆ ಇದಾಗಿದೆ. ಪ್ರತಿಯೊಬ್ಬರು ಸ್ಕ್ರೀನಿಂಗ್ ಮಾಡಿಸಿಕೊಳ್ಳುವುದರ ಮೂಲಕ ಹಾಗೂ ಇದಕ್ಕೆ ಉಚಿತವಾಗಿ ಚಿಕಿತ್ಸೆಯನ್ನು ಪಡೆದುಕೊಂಡು ಟಿಬಿ ಮುಕ್ತ ಭಾರತಕ್ಕೆ ಕೈಜೋಡಿಸಬೇಕು ಎಂದು ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿದ ಕಾರಾಗೃಹದ ಮುಖ್ಯ ಅಧೀಕ್ಷಕರಾದ ಡಾ. ಅನಿತಾ ಆರ್. ಮಾತನಾಡಿ, ಟಿಬಿ ಮುಕ್ತ ಭಾರತ ಅಭಿಯಾನಕ್ಕೆ ತಮ್ಮ ಸಂಪೂರ್ಣ ಬೆಂಬಲವಿದೆ. ಕಾರಾಗೃಹದಲ್ಲಿರುವ ಪ್ರತಿಯೊಬ್ಬ ಬಂದಿಗಳು ಹಾಗೂ ಸಿಬ್ಬಂದಿ ವರ್ಗದವರು ಸ್ಕ್ರೀನಿಂಗ್ ಮಾಡಿಸಿಕೊಳ್ಳುವುದರ ಮೂಲಕ ಟಿ.ಬಿ.ಮುಕ್ತ ಭಾರತ 100 ದಿನಗಳ ಕ್ಷಯ ರೋಗ ಅಭಿಯಾನವನ್ನು ಯಶಸ್ವಿಗೊಳಿಸಬೇಕು. ಬಂದಿಗಳ ಆರೋಗ್ಯದ ದೃಷ್ಟಿಯಿಂದ ನಿರಂತರವಾಗಿ ಪ್ರತಿ ಮಾಹೆ ಆರೋಗ್ಯ ತಪಾಸಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಸುಮಾರು 425 ಜನ ಬಂದಿಗಳಿಗೆ ಕ್ಷಯರೋಗ ಸ್ಕ್ರೀನಿಂಗ್ ಪರೀಕ್ಷೆಯಲ್ಲಿ ತಪಾಸಣೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ವೈದ್ಯಾಧಿಕಾರಿ ಡಾ. ಅರ್ಚನಾ, ಡಾ. ಆನಂದ ಅಡಕಿ, ಡಾ. ರವಿಂದ್ರ ಬನ್ನೇರ, ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಮಾರುತಿರಾವ್, ಫರತಾಬಾದ್ ಪ್ರಥಮಿಕ ಆರೋಗ್ಯ ಕೇಂದ್ರದ ಡಾ. ಸಂತೋಷ ಪಾಟೀಲ್, ಸಹಾಯಕ ಅಧೀಕ್ಷ ಚನ್ನಪ್ಪ, ಸಹಾಯಕ ಆಡಳಿತಾಧಿಕಾರಿ ಭೀಮಾಶಂಕರ ಡಾಂಗೆ, ಜೈಲರ್ಗಳಾದ ಸುನಂದ ವಿ., ಸಾಗರ ಪಾಟೀಲ ಹಾಗೂ ಐ.ಸಿ.ಎಂ.ಆರ್. ತಂಡದವರು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

# ಗ್ರಾಮ ಆಡಳಿತಾಧಿಕಾರಿಗಳ ಮುಷ್ಕರ

## ಜಿಲ್ಲಾಧ್ಯಕ್ಷ್ಯ ಗಂಗಾಧರ ಜೂಲಗುಡ್ಡ ಸುಮಾರು 23 ಬೇಡಿಕೆಗಳನ್ನ ಇಟ್ಟಕೊಂಡು ಧರಣಿ

• ಉದಯವಾಹಿನಿ, ಮುದ್ದೇಬಿಹಾಳ

ಕರ್ನಾಟಕ ರಾಜ್ಯ ಗ್ರಾಮ ಆಡಳಿತ ಮುದ್ದೇಬಿಹಾಳ ತಾಳಿಕೋಟೆ ತಾಲ್ಲೂಕು ಸಂಘದಿಂದ ತಾಲ್ಲೂಕಾ ಆಡಳಿತ ಸೌಧದ ಮುಂಭಾಗದಲ್ಲಿ ನಡೆಯುತ್ತಿರುವ ಅನಿರ್ದಿಷ್ಟಾವಧಿ ಮುಷ್ಕರ 3 ದಿನಕ್ಕೆ ಕಾಲಿಟ್ಟಿದ್ದು, ಮುಷ್ಕರ ಸ್ಥಳಕ್ಕೆ ಬುಧುವಾರ ಶಾಸಕ ಕೆಎಸ್ ಡಿ ನಿಮಮದ ಅಧ್ಯಕ್ಷ ಸಿ.ಎಸ್ ನಾಡಗೌಡ ಭೇಟಿ ನೀಡಿದರು.

ಈ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷ್ಯ ಗಂಗಾಧರ ಜೂಲಗುಡ್ಡ ಸುಮಾರು 23 ಬೇಡಿಕೆಗಳನ್ನ ಇಟ್ಟಕೊಂಡು ನಾವು ಮುಷ್ಕರ ನಡೆಸುತ್ತಿದ್ದೇವೆ. ಈಗಾಗಲೇ ಒಂದು ಬಾರಿ ನಾವು ಮುಷ್ಕರ ನಡೆಸಿದಾಗ ನಮಗೆ ಯಾವುದೇ ರೀತಿಯ ಲಿಖಿತ ರೂಪದ ಭರವಸೆ ಸಿಗಲಿಲ್ಲಾ, ಆದರೆ ನಾವು ಸಾರ್ವಜನಿಕರ ಹಿತದೃಷ್ಟಿಯಿಂದ ಪ್ರತಿಭಟನೆಯನ್ನ ಹಿಂಪಡೆದುಕೊಂಡಿದ್ದೇವು ಆದರೆ ನಮ್ಮ ಹಾಗೂ ನಮ್ಮ ಕುಟುಂಬದವರ ಸಲುವಾಗಿ ನಾವು ಪ್ರತಿಭಟನೆ ಮಾಡುವದು ಅವಶ್ಯವಾಗಿದೆ ಮತ್ತು ಬೇರೆ ಇಲಾಖೆಗಳಲ್ಲಿ ಇರುವಂತೆ ಕಂದಾಯ ಇಲಾಖೆಯಲ್ಲೂ ವರ್ಗಾವಣೆ ನೀತಿ ಜಾರಿಗೆ ತರಲು ಮಾರ್ಗಸೂಚಿ ರೂಪಿಸಬೇಕು.

ಸುಸಜ್ಜಿತ ಕಚೇರಿ ಸೇರಿ ಮೂಲಸೌಕರ್ಯ ಒದಗಿಸಬೇಕು. ಜೀವ ಹಾನಿಯಾಗುವ ಗ್ರಾಮ ಆಡಳಿತ ಅಧಿಕಾರಿಗಳ ಕುಟುಂಬಕ್ಕೆ ಪರಿಹಾರ ಒದಗಿಸಬೇಕು. ಪ್ರಯಾಣ ಭತ್ಯೆ ಹೆಚ್ಚಿಸಬೇಕು. ಗ್ರಾಮಾಡಳಿತ ಅಧಿಕಾರಿಗಳ ಹುದ್ದೆಗೆ ತಾಂತ್ರಿಕ ಹುದ್ದೆಗಳಿಗೆ ನೀಡುವ ವೇತನ ಶ್ರೇಣಿ ನಿಗದಿಪಡಿಸಬೇಕು ಇಲಾಖೆಗೆ ಅಗತ್ಯ ಇರುವ ಕಂಪ್ಯೂಟರ್, ಸ್ಕ್ಯಾನರ್, ಪ್ರಿಂಟರ್‌ಗಳನ್ನು ಒದಗಿಸಬೇಕು. ಮೊಬೈಲ್ ಆ್ಯಪ್ ಮೂಲಕ ಕೆಲಸ ಮಾಡಿ ಎನ್ನುತ್ತಾರೆ.

ಆದರೆ, ಮೊಬೈಲ್ ಫೋನ್ ನೀಡುತ್ತಿಲ್ಲ, ಸ್ವಂತ ಮೊಬೈಲ್ ಫೋನ್‌ಗಳ ಮೂಲಕ ಇಲಾಖೆಯ ಕೆಲಸ ಮಾಡಲಾಗುತ್ತಿದೆ. 5 ವರ್ಷದಿಂದ ಬಡ್ತಿ ನೀಡುತ್ತಿಲ್ಲವೆಂದು ಗ್ರಾಮಾಡಳಿತಾಧಿಕಾರಿಗಳ ಬೇಡಿಕೆಗಳ ಕುರಿತು ವಿವರಿಸಿ ಶಾಸಕರಿಗೆ ಮನವಿಯನ್ನು ಸಲ್ಲಿಸಿದರು

ಈ ವೇಳೆ ಬ್ಲಾಕ್ ಕಾಂಗ್ರೇಸ್ ಅಧ್ಯಕ್ಷ ಗುರು ತಾರನಾಳ, ಅಶೋಕ ನಾಡಗೌಡ ,ಚಿನ್ನು ನಾಡಗೌಡ , ಪಿಎಸೈ ಸಂಜಯ ತಿಪ್ಪರೆಡ್ಡಿ ಹಾಗೂ ಗ್ರಾಮಾಡಳಿತಾಧಿಕಾರಿಗಳ ಸಂಘದ ಮನೋಜ ರಾಠೋಡ, ರಿಯಾಜ್ ನಾಯ್ಕೊಡಿ, ರಾಮು ಹೊಸೂರ ಶಬ್ಬಿರ ಮುಲ್ಲಾ, ಸೇರಿದಂತೆ ಮುದ್ದೇಬಿಹಾಳ ತಾಳಿಕೋಟೆ ತಾಲ್ಲೂಕಿನ ಗ್ರಾಮಾಡಳಿತಾಧಿಕಾರಿಗಳು ಸಹಾಯಕರು ಉಪಸ್ಥಿತರಿದ್ದರು



ಉದಯವಾಹಿನಿ ಚಿತ್ರ

**ಶಾಸಕ ಅಪ್ಪಾಜಿ ನಾಡಗೌಡ ಭೇಟಿ**

**ಮನವಿ ಸ್ವೀಕರಿಸಿದ ಶಾಸಕ ಸಿ.ಎಸ್ ನಾಡಗೌಡ ಅಪ್ಪಾಜಿ ಮಾತನಾಡಿ, 'ಗ್ರಾಮ ಆಡಳಿತಾಧಿಕಾರಿಗಳ ಬೇಡಿಕೆಗಳು ನ್ಯಾಯಸಮ್ಮತವಾಗಿದೆ. ಬಜೆಟ್ ಅಧಿವೇಶನದಲ್ಲಿ ರಾಜ್ಯ ಸರ್ಕಾರದ ಗಮನಕ್ಕೆ ತರುತ್ತೇನೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ವಿಳಂಬವಾಗುತ್ತಿದೆ. ಇದರಿಂದ ಸದ್ಯ ಕೆಲಸ ನಿರ್ವಹಿಸುತ್ತಿರುವ ಗ್ರಾಮ ಆಡಳಿತಾಧಿಕಾರಿಗಳ ಕೆಲಸದ ಒತ್ತಡ ಹೆಚ್ಚಾಗಿದೆ' ಎಂದರು.**

# ಬಿಜೆಪಿ ಮಾಜಿ ಶಾಸಕ ದಡೇಸಗೂರ್ ಕಬ್ಜಾ ಆರೋಪ

• ಉದಯವಾಹಿನಿ, ಕೊಪ್ಪಳ

ಬಿಜೆಪಿ ಮಾಜಿ ಶಾಸಕ ಬಸವರಾಜ್ ದಡೇಸಗೂರ್ ಜಮೀನು ಕಬ್ಜಾ ಆರೋಪ ಕುರಿತಂತೆ ಸಚಿವ ಶಿವರಾಜ್ ತಂಗಡಗಿ ಪ್ರತಿಕ್ರಿಯಿಸಿದ್ದಾರೆ. ಆ ಪ್ರಕರಣದ ಬಗ್ಗೆ ತಮಗೇನೂ ಗೊತ್ತಿರಲಿಲ್ಲ. ಆದರೆ, ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿ ಬಳಿ ಈ ಬಗ್ಗೆ ಮಾತನಾಡಿ ಪ್ರಕರಣದ ಬಗ್ಗೆ ಮಾಹಿತಿ ಪಡೆದಿರುವುದಾಗಿ ಅವರು ತಿಳಿಸಿದ್ದಾರೆ.

ತಮ್ಮ ಮಾತು ಮುಂದುವರಿಸಿ, ಆ ಪ್ರಕರಣ ನಡೆಯುತ್ತಿರುವುದು ರಾಯಚೂರು ಜಿಲ್ಲೆಯಲ್ಲಿ, ನನ್ನ ಕ್ಷೇತ್ರದಲ್ಲೇನಾದರೂ ಆ ಪ್ರಕರಣ ನಡೆದಿದ್ದರೆ ಅದನ್ನು ನಾನು ಬೇರೆಯ ರೀತಿಯಲ್ಲೇ ಬಗೆಹರಿಸುತ್ತಿದ್ದೆ ಎಂದು ಮಾರ್ಮಿಕವಾಗಿ ಹೇಳಿದ್ದಾರೆ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲ್ಲೂಕಿನಲ್ಲಿ ದೇವದಾಸಿಯ ಭೂಮಿಯನ್ನು ಕಬಳಿಕೆ ಮಾಡಿರುವ ಆರೋಪ ದಡೇಸಗೂರ್ ಮೇಲಿದೆ. ಈ ಕುರಿರಂತೆ ಸಿಂಧನೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಫ್ ಐಆರ್ ದಾಖಲಾಗಿದೆ. ಜಮೀನು ಕಬ್ಜಾ ಮಾಡಿರುವ ಬಗ್ಗೆ ಪ್ರಶ್ನಿಸಲು ಮುಂದಾಗಿದ್ದ ದೇವದಾಸಿಯರ ಮೇಲೆ ದಡೇಸಗೂರ್ ಅವರ ಬೆಂಬಲಿಗರ ಗುಂಪೊಂದು ಹಲ್ಲೆ ನಡೆಸಲು ಮುಂದಾಗಿದ್ದು ಸಹ ವಿವಾದಕ್ಕೆ ಕಾರಣವಾಗಿದೆ.

ಇತ್ತ, ಬೆಂಗಳೂರಿನಲ್ಲಿ ಈ ಬಗ್ಗೆ ಪ್ರತಿಕ್ರಿಯಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ, ದೇವದಾಸಿಯ ಮೇಲಿನ ದೌರ್ಜನ್ಯವನ್ನು ಸಹಿಸುವುದಿಲ್ಲ ಎಂದಿರುವುದು ಪ್ರಕರಣಕ್ಕೆ ಮತ್ತಷ್ಟು ಪುಷ್ಟಿ ನೀಡಿದೆ. ಅತ್ತ, ಸಿಂಧನೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗುತ್ತಲೇ ದಡೇಸಗೂರ್ ಅವರು ನಾಪತ್ತೆಯಾಗಿದ್ದಾರೆ.

ಅಸಲಿಗೆ, ಶಿವರಾಜ್ ತಂಗಡಗಿ ಹಾಗೂ ದಡೇಸಗೂರ್ ಇಬ್ಬರೂ ರಾಜಕೀಯ ವಿರೋಧಿಗಳು. ಅದೇ ಕಾರಣಕ್ಕಾಗಿ ಕೊಪ್ಪಳದಲ್ಲಿ ಫೆ. 10ರಂದು ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಿವರಾಜ್ ತಂಗಡಗಿಯವರಿಗೆ ದಡೇಸಗೂರ್ ಅವರ ದೇವದಾಸಿ ಜಮೀನು ಕಬಳಿಕೆ ಆರೋಪದ ಬಗ್ಗೆ ಪ್ರಶ್ನೆಯನ್ನು ಕೇಳಲಾಯ್ತು. ಅದಕ್ಕೆ ಉತ್ತರಿಸಿದ ತಂಗಡಗಿ, ಪ್ರಕರಣದ ಬಗ್ಗೆ ತಮಗೇನೂ ಗೊತ್ತಿಲ್ಲ. ಈಗಷ್ಟೇ ರಾಯಚೂರು ಜಿಲ್ಲಾಧಿಕಾರಿಗಳಿಗೆ ದೂರವಾಣಿ ಕರೆಮಾಡಿ ಮಾಹಿತಿ ಪಡೆದಿದ್ದೇನೆ ಎಂದು ಹೇಳಿದ್ದಾರೆ.

ಮಹರ್ಷಿ ವಾಲ್ಮಿಕಿ ರಾಮ ಬೇರೆ, ಅಯೋಧ್ಯೆ ರಾಮ ಬೇರೆ, ಎನ್ನುವ ಸಚಿವ ಎಚ್.ಸಿ.ಮಹದೇವಪ್ಪ ಅವರ ಹೇಳಿಕೆ ಕುರಿತು ಪ್ರತಿಕ್ರಿಯಿಸಿ, ರಾಮ ಒಬ್ಬನೇ, ಆದರೆ ರಾಮನನ್ನು ಸೃಷ್ಟಿ ಮಾಡಿದ್ದು ಮಹರ್ಷಿ ವಾಲ್ಮಿಕಿ, ಎಂದ ಅವರು, ಬಿಜೆಪಿಯವರು ಕೆಲವು ದೇವರನ್ನು ಗುತ್ತಿಗೆ ಪಡೆದವರಂತೆ ಮಾತನಾಡುತ್ತಿದ್ದಾರೆ.

ನಾವೂ ರಾಮ, ಆಂಜನೇಯನ ಭಕ್ತರಿದ್ದೇವೆ. ಬಿಜೆಪಿಯವರು ಅಭಿವೃದ್ಧಿ ಬಗ್ಗೆ ಮಾತನಾಡುವುದಿಲ್ಲ. ಕೇವಲ ಜಾತಿ, ಧರ್ಮದ ಹೆಸರಲ್ಲಿ ವಿಷ ಬೀಜ ಬಿತ್ತುತ್ತಿದ್ದಾರೆ, ಎಂದು ಕಿಡಿಕಾರಿದರು.

### ಮತಪತ್ರ ವಿದ್ದರೆ ಕಾಂಗ್ರೇಸ್‌ಗೆ 185 ಸ್ಥಾನ



**ಕಳೆದ ವಿಧಾನಸಭೆ ಚುನಾವಣೆ ವೇಳೆ ರಾಜ್ಯದಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ) ಬದಲು ಮತಪತ್ರ ಪದ್ಧತಿ ಅನುಸರಿಸಿದ್ದರೆ ಕಾಂಗ್ರೆಸ್ 185 ರಿಂದ 190 ಸ್ಥಾನ ಗೆಲ್ಲಬಹುದಿತ್ತು. ಇವಿಎಂ ಮೇಲೆ ನಂಬಿಕೆ ಇಲ್ಲದಿದ್ದರೂ 135 ಸ್ಥಾನಗಳನ್ನು ಗೆದ್ದು ಬಂದಿದ್ದೇವೆ ಎಂದು ಶಿವರಾಜ ತಂಗಡಗಿ ಹೇಳಿದರು. ದೇಶದ ಯಾವುದಾದರೂ ಒಂದು ರಾಜ್ಯದ ಚುನಾವಣೆಯನ್ನು ಮತಪತ್ರಗಳನ್ನು ಆಧರಿಸಿ ಚುನಾವಣೆ ಮಾಡಿದರೆ ನಿಜಾಂಶ ತಿಳಿಯಲಿದೆ. ಇವಿಎಂ ಬಳಸಿದ್ದರಿಂದ ಮಹಾರಾಷ್ಟ್ರದಲ್ಲಿ 34 ಲಕ್ಷ ಮತಗಳು ಹೆಚ್ಚಿಗೆ ದಾಖಲಾಗಿವೆ. ಅದು ಹೇಗೆ ಸಾಧ್ಯ ಈ ಬಗ್ಗೆ ತನಿಖೆ ನಡೆಯುತ್ತಿದೆ. ಒಂದಿಲ್ಲ ಒಂದು ದಿನ ದೇಶದ ಜನ ರೊಚ್ಚಿಗೇಳುತ್ತಾರೆ. ಆಗ ಬಿಜೆಪಿಯ ನಿಜವಾದ ಬಣ್ಣ ಬಯಲಾಗಲಿದೆ ಎಂದರು.**

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ನಿಮ್ಮ ಆಸಕ್ತಿಗಳನ್ನು ಮುಂದುವರಿಸಲು ಅಥವಾ ನೀವು ತುಂಬ ಆನಂದಿಸುವ ಕೆಲಸಗಳನ್ನು ಮಾಡಲು ಹೆಚ್ಚು ಸಮಯ ಕಳೆಯಬೇಕು. ಕೆಲವರಿಗೆ ಪ್ರಯಾಣದ ಗಡಿಬಿಡಿ ಮತ್ತು ಒತ್ತಡದಿಂದ ಕೂಡಿರುತ್ತವೆ.

**ವೃಷಭ** ಆಹಾರದ ಸ್ವಾದ ಉಪ್ಪಿನಿಂದ ಬರುವಂತೆ ಅತೃಪ್ತಿಯಿದ್ದಾಗಲೇ ನೀವು ಸಂತೋಷದ ಮೌಲ್ಯವನ್ನು ಅರ್ಥ ಮಾಡಿಕೊಳ್ಳುತ್ತೀರಿ. ಮನೆಯ ಸಣ್ಣವಸ್ತುಗಳ ಮೇಲೆ ನಿಮ್ಮ ಸಾಕಷ್ಟು ಹಣ ಹಾಳಾಗಬಹುದು.

**ಮಿಥುನ** ನೀವು ಬಹುಕಾಲದಿಂದ ಎದುರು ನೋಡುತ್ತಿದ್ದ ಜೀವನದ ಒತ್ತಡಗಳಿಂದ ಇಂದು ಶಮನ ಪಡೆಯುತ್ತೀರಿ. ಅವುಗಳನ್ನು ಶಾಶ್ವತವಾಗಿ ದೂರವಿಸಿರಿಸಲು ನಿಮ್ಮ ಜೀವನಶೈಲಿಯನ್ನು ಬದಲಿಸಲು ಇದು ಸರಿಯಾದ ಸಮಯ.

**ಕರ್ಕಾಟಕ** ಧಾರ್ಮಿಕ ಭಾವನೆಗಳನ್ನು ಉದ್ಭವಿಸಿ ಒಬ್ಬ ಪವಿತ್ರ ವ್ಯಕ್ತಿಯಿಂದ ದೈವಿಕ ಜ್ಞಾನವನ್ನು ಪಡೆಯಲು ನೀವು ಒಂದು ಧಾರ್ಮಿಕ ಸ್ಥಳಕ್ಕೆ ಭೇಟಿ ನೀಡುವಂತೆ ಮಾಡುತ್ತವೆ.

**ಸಿಂಹ** ಇಂದು ನೀವು ಭರವಸೆಯ ಮಾಯಾಜಾಲದಲ್ಲಿದ್ದೀರಿ. ಇಂದಿನ ದಿನ, ನಿಮ್ಮ ಬಳಿ ಸಾಲವನ್ನು ಕೇಳುವ ಮತ್ತು ಅದನ್ನು ಹಿಂತಿರುಗಿಸದೆ ಇರುವಂತಹ ಸ್ನೇಹಿತರಿಂದ ನೀವು ನಿಮ್ಮನ್ನು ತಪ್ಪಿಸುವ ಅಗತ್ಯವಿದೆ.

**ಕನ್ಯಾ** ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ.

**ತುಲಾ** ಆರೋಗ್ಯ ದೃಷ್ಟಿಯಿಂದ ಉತ್ತಮವಾದ ದಿನ. ನಿಮ್ಮ ಹರ್ಷಚಿತ್ತದ ಮನಸ್ಸು ರಾಜ್ಯದ ನೀವು ಬಯಸಿದ ಟಾನಿಕ್ ನೀಡುತ್ತದೆ ಮತ್ತು ನಿಮಗೆ ಆತ್ಮವಿಶ್ವಾಸ ತರುತ್ತದೆ.

**ವೃಶ್ಚಿಕ** ನಿಮ್ಮ ಆಕರ್ಷಕ ವರ್ತನೆ ಗಮನ ಸೆಳೆಯುತ್ತದೆ. ಹಣಕ್ಕೆ ಸಂಬಂಧಿಸಿದ ಯಾವುದೇ ವಿಷಯ ನ್ಯಾಯಾಲಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದರೆ, ಇಂದು ನೀವು ಅದರಲ್ಲಿ ವಿಜಯವನ್ನು ಪಡೆಯಬಹುದು.

**ಧನಸ್ಸು** ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ. ಕೆಲಸದ ಸ್ಥಳದಲ್ಲಿ ಅಥವಾ ವ್ಯಾಪಾರದಲ್ಲಿ ನಿಮ್ಮ ಯಾವುದೇ ಅಜಾಗರೂಕತೆ ಇಂದು ನಿಮಗೆ ಆರ್ಥಿಕ ನಷ್ಟವನ್ನು ಉಂಟುಮಾಡಬಹುದು.

**ಮಕರ** ಸಾಮಾಜಿಕ ಚಟುವಟಿಕೆಗಳು ಆನಂದಮಯವಾಗಿದ್ದರೂ ನೀವು ಇತರರೊಂದಿಗೆ ನಿಮ್ಮ ರಹಸ್ಯಗಳನ್ನು ಹಂಚಿಕೊಳ್ಳಬಾರದು. ನಿಮ್ಮ ಸಂಗಾತಿಯ ಅನುಪಸ್ಥಿತಿ ಕಾಡುವ ಸಾಧ್ಯತೆಯಿದೆ.

**ಕುಂಭ** ವಿಶೇಷವಾಗಿ ಹೊರಗಿಟ್ಟ ಆಹಾರ ತಿನ್ನುವಾಗ ವಿಶೇಷ ಮುನ್ನೆಚ್ಚರಿಕೆ ತೆಗೆದುಕೊಳ್ಳಬೇಕು. ಆದರೆ ಅನಗತ್ಯ ಒತ್ತಡ ಕೇವಲ ನಿಮಗೆ ಮಾನಸಿಕ ಉದ್ವೇಗ ಉಂಟುಮಾಡುತ್ತದೆ.

**ಮೀನ** ನಿಮ್ಮ ಮನೆಯಲ್ಲಿ ಸ್ವಲ್ಪ ಸ್ವಚ್ಛತಾ ಕಾರ್ಯವನ್ನು ತಕ್ಷಣ ಕೈಗೊಳ್ಳಬೇಕು. ನಿಮ್ಮ ಕನಸುಗಳು ಹಾಗೂ ವಾಸ್ತವವು ಪ್ರೀತಿಯ ಭಾವಪರವಶತೆಯಲ್ಲಿ ಇಂದು ಸೇರಿಹೋಗುತ್ತವೆ. ನಿಮ್ಮ ನಡೆಯಲ್ಲಿ ಪ್ರಾಮಾಣಿಕವಾಗಿರಿ.

## ಕಲಿಕಾ ಮೇಳ ಮಕ್ಕಳಲ್ಲಿ ಅಡಗಿರುವ ಪ್ರತಿಭೆ ಅನಾವರಣಕ್ಕೆ ಸಹಕಾರಿ: ಕಾವಲಿ

• ಉದಯವಾಹಿನಿ ಸೈದಾಪುರ

ಸರಕಾರಿ ಶಾಲೆಗಳಲ್ಲಿ ಕಲಿಕಾ ಮೇಳ ಆಯೋಜನೆ ಮಾಡುವುದರಿಂದ ಮಕ್ಕಳಲ್ಲಿ ಅಡಗಿರುವ ಪ್ರತಿಭೆಯನ್ನು ಅನಾವರಣ ಮಾಡಲು ಸಹಕಾರಿಯಾಗಲಿದೆ ಎಂದು ಎಸ್‌ಡಿಎಂಸಿ ಅಧ್ಯಕ್ಷ ಮರಿಲಿಂಗಪ್ಪ ಕಾವಲಿ ಅಭಿಪ್ರಾಯಪಟ್ಟರು. ಸಮೀಪದ ಬದ್ದೇಪಲ್ಲಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಕಲಿಕಾ ಮೇಳವನ್ನು ಉದ್ಘಾಟಿಸಿ ಮಾತನಾಡಿದರು. ಪ್ರತಿಯೊಂದು ಮಗುವಿನಲ್ಲೂ ಪ್ರತಿಭೆ ಇದ್ದೇ ಇರುತ್ತದೆ ಅದನ್ನು ಗುರುತಿಸಿ, ಪ್ರೋತ್ಸಾಹಿಸುವ ಮಹತ್ತರ ಜವಾಬ್ದಾರಿ ಶಿಕ್ಷಕರ ಮೇಲಿದ್ದು ಅದನ್ನು ನಮ್ಮ ಶಾಲೆಯ ಬೋಧಕ ವರ್ಗ ಅಚ್ಚುಕಟ್ಟಾಗಿ ಮಾಡುತ್ತಿದ್ದಾರೆ. ಅದಕ್ಕೆ ಪೂರಕವಾಗಿ ಮಕ್ಕಳು ಶೈಕ್ಷಣಿಕವಾಗಿ ಪ್ರಗತಿ ಹೊಂದುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಡಿಸಿದರು. ಸ್ಥಳೀಯ ಪ್ರೌಢ ಶಾಲೆಯ ಪ್ರಭಾರಿ ಮುಖ್ಯಾಧ್ಯಾಪಕ ರೂಪೇಶ್‌ಕುಮಾರ ಮಾತನಾಡಿದರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳು ಕನ್ನಡ, ಗಣಿತ, ಇಂಗ್ಲಿಷ್ ಒಳಗೊಂಡಂತೆ ಇನ್ನುಳಿದ ವಿಷಯಗಳ ಚಾರ್ಟ್‌ಗಳ ಪ್ರದರ್ಶನ ಮಾಡಿ ವಿವರಣೆ ನೀಡಿದರು. ನರಸೇಗೌಡ ಕಲಾಲ್, ಅಂಜಪ್ಪ ಬಾಲಚೇಡ, ನೋಬಲ್ ಪಬ್ಲಿಕ್ ಶಾಲೆಯ ಮುಖ್ಯಸ್ಥ ನರಸಪ್ಪ ನಾರಾಯಣೋರ, ಸೇರಿದಂತೆ ಇತರ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಶ್ರೀ ಗಾಯತ್ರಿ ಪೂಜೆ, ಉಪಾಸನೆ

• ಉದಯವಾಹಿನಿ ದಾವಣಗೆರೆ

ದಾವಣಗೆರೆಯ ಆಧ್ಯಾತ್ಮ ಪರಂಪರೆಯ ಕ್ರಿಯಾತ್ಮಕ ಸಂಸ್ಥೆ ಶ್ರೀ ಗಾಯತ್ರಿ ಪರಿವಾರದ ಆಶ್ರಯದಲ್ಲಿ ಶ್ರೀ ಗಾಯತ್ರಿ ಪೂಜೆ ಉಪಾಸನೆ ಭಾರತ ಹುಣ್ಣಿಮೆ ಪ್ರಯುಕ್ತ ನಗರದ ಜಯದೇವ ವೃತ್ತದಲ್ಲಿರುವ ಶ್ರೀ ಶಂಕರಮಠದ ಸಭಾಂಗಣದಲ್ಲಿ ನಡೆದ ಈ ಧಾರ್ಮಿಕ ಸೇವೆ ಪೂಜೆ ಸುಸಂಪನ್ನಗೊಂಡಿತು ಎಂದು ಪರಿವಾರದ ಪ್ರಧಾನ ಕಾರ್ಯದರ್ಶಿ ಸಾಲಿಗ್ರಾಮ ಗಣೇಶ್‌ಶೆಣೈ ತಿಳಿಸಿದ್ದಾರೆ. ಈ ಅಪ್ಪಟ ಆಧ್ಯಾತ್ಮ ಸಮಾರಂಭದ ಪೂಜಾ ಸೇವಾಕರ್ತರಾದ ಬಿ. ಸತ್ಯನಾರಾ ಯಣಮೂರ್ತಿ ಸೇರಿದಂತೆ ಶ್ರೀ ಗಾಯತ್ರಿ ಪರಿವಾರದ ಅಧ್ಯಕ್ಷರಾದ ಡಾ. ರಮೇಶ್ ಪಟೇಲ್, ಖಜಾಂಚಿ ಪುರುಷೋತ್ತಮ ಪಟೇಲ್, ಗೌರವ ಅಧ್ಯಕ್ಷರಾದ ಕೆ.ಹೆಚ್. ಮಂಜುನಾಥ್, ಸಂಚಾಲಕರಾದ ಭಾವನ್ನಾರಾಯಣ, ವಿಕ್ರಂಜೈನ್, ಸತೀಶ್ ಆರ್.ಎಂ., ವಿ.ಕೃಷ್ಣಮೂರ್ತಿ, ಸಮಿತಿ ಸದಸ್ಯರಾದ ಶ್ರೀಮತಿ ನಿರ್ಮಲಾ ಜನಾರ್ಧನ ಗುಪ್ತಾ ದಂಪತಿಗಳು, ವೀರಭದ್ರಪ್ಪ ದಂಪತಿಗಳು ಮುಂತಾದವರು ಉಪಸ್ಥಿತರಿದ್ದರು.

## ಶ್ರೀ ಹರಿಹರೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವ

• ಉದಯವಾಹಿನಿ ಹರಿಹರ

ನಗರದ ಗುಹಾರಣ್ಯ ಕ್ಷೇತ್ರವೆಂದೇ ಪ್ರಸಿದ್ಧವಾಗಿರುವ ಐತಿಹಾಸಿಕ ಸ್ಥಳವಾದ ಹರಿಹರದಲ್ಲಿ ಶ್ರೀ ಹರಿಹರೇಶ್ವರನ ಬ್ರಹ್ಮ ರಥೋತ್ಸವ ವಿಧಿ ವಿಧಾನಗಳಿಂದ ಜರುಗಿತು.ಬೆಳಗಿನ ಜಾವದಿಂದ ದೇವಸ್ಥಾನದಲ್ಲಿ ವಿವಿಧ ಧಾರ್ಮಿಕ ಪೂಜೆಗಳು ನಡೆದು ಹರಿಹರನ ಉತ್ಸವ ಮೂರ್ತಿಯು ಪಲ್ಲಕ್ಕಿಯೊಂದಿಗೆ ಸಕಲ ವಾದ್ಯಗಳಿಂದ ಮೆರವಣಿಗೆ ಮೂಲಕ ರಥೋತ್ಸವದ ಬಳಿ ಕರೆ ತರಲಾಯಿತು. ನಂತರ ಉತ್ಸವ ಮೂರ್ತಿ ರಥೋತ್ಸವದಲ್ಲಿ ಪ್ರತಿಷ್ಠಾಪಿಸಿ ಶುಭ ಮುಹೂರ್ತದಲ್ಲಿ 10:25 ನಿಮಿಷಕ್ಕೆ ರಥೋತ್ಸವವೂ ಚಾಲನೆಗೊಂಡಿತು. ಭಕ್ತರು ರಥೋತ್ಸವದ ಸಂದರ್ಭದಲ್ಲಿ ಬಾಳೆಹಣ್ಣು ಕಳಸಕ್ಕೆ ಹಾಕುವ ಮೂಲಕ ತಮ್ಮ ಭಕ್ತಿಯನ್ನು ಸಮರ್ಪಿಸಿ ಹರಿಹರನ ಕೃಪೆಗೆ ಪಾತ್ರರಾದರು. ಭಕ್ತರು ಹರಿ ಗೋವಿಂದ ಹರಿ ಗೋವಿಂದ ಶ್ರೀ ರಾಮು ರಾಮು ಗೋವಿಂದ ಹರ ಹರ ಮಹಾದೇವ್ ಭಕ್ತಿಯ ಜಯ ಘೋಷಗಳನ್ನು ಕೂಗುತ್ತಾ ಭಾವುಕರಾದರು.ರಥೋತ್ಸವಕ್ಕೆ ಶಾಸಕ ಬಿಪಿ ಹರೀಶ್ ಚಾಲನೆ ನೀಡಿದರು. ಗ್ಯಾರಂಟಿ ಅನುಷ್ಠಾನದ ತಾಲ್ಲೂಕು ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್, ನಗರ ಠಾಣೆ ಇನ್ಸ್‌ಪೆಕ್ಟರ್ ದೇವಾನಂದ ಎಸ್, ದೇವಸ್ಥಾನದ ಆಡಳಿತ ಅಧಿಕಾರಿಯ ಆನಂದ್, ಕಾರ್ಯದರ್ಶಿ ವಾರಿಜ, ಚುನಾಯಿತರ ಪ್ರತಿನಿಧಿಗಳು, ಸರ್ವಭಕ್ತ ವೃಂದದವರು ರಥೋತ್ಸವದಲ್ಲಿ ಭಾಗವಹಿಸಿದ್ದರು.

# ಹೈನುಗಾರಿಕೆ ಕೃಷಿಯಲ್ಲಿ ಬಹಳ ಮುಖ್ಯ: ಎನ್.ಚೆಲುವರಾಯಸ್ವಾಮಿ

### ಗ್ರಾಮೀಣ ಭಾಗದ ಪ್ರತಿ ಮನೆ-ಮನೆಯಲ್ಲಿಯೂ ಸಹ ಶೇ.100ರಷ್ಟು ಗ್ಯಾರಂಟಿ ಯೋಜನೆಗಳಿಂದ ಅನುಕೂಲ ಪಡೆದಿದ್ದಾರೆ

• ಉದಯವಾಹಿನಿ ಚಿತ್ರದುರ್ಗ

''ಹೈನುಗಾರಿಕೆ'' ಕೃಷಿಯಲ್ಲಿ ಬಹಳ ಮುಖ್ಯವಾಗಿದ್ದು, ಕೃಷಿಯ ಬಲವರ್ಧನೆಗೆ ಹೈನುಗಾರಿಕೆಯನ್ನು ಕೂಡ ಸರ್ಕಾರ ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ ಎಂದು ಕೃಷಿ ಸಚಿವರಾದ ಎನ್. ಚಲುವರಾಯಸ್ವಾಮಿ ಹೇಳಿದರು.

ಚಳ್ಳಕೆರೆ ತಾಲ್ಲೂಕಿನ ರೇಣುಕಾಪುರ ಗ್ರಾಮದಲ್ಲಿ ಜಲಾನಯನ ಅಭಿವೃದ್ಧಿ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ವತಿಯಿಂದ ಮಳೆಯಾಶ್ರಿತ ಪ್ರದೇಶದಲ್ಲಿ ಆದಾಯೋತ್ಪನ್ನ ಮಾರ್ಗಗಳ ಮೂಲಕ ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳ ಅಭಿವೃದ್ಧಿ ಮತ್ತು ಪುನಶ್ಚೇತನಗೊಳಿಸುವ ಯೋಜನೆಯಡಿ ರೈತ ಫಲಾನುಭವಿಗಳೊಂದಿಗೆ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

**ಜಿಲ್ಲೆಗೆ 4.18 ಕೋಟಿ ಅನುದಾನ:** ಮಳೆಯಾಶ್ರಿತ ಪ್ರದೇಶದಲ್ಲಿ ಆದಾಯೋತ್ಪನ್ನ ಮಾರ್ಗಗಳ ಮೂಲಕ ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳ ಅಭಿವೃದ್ಧಿ ಮತ್ತು ಪುನಶ್ಚೇತನಗೊಳಿಸುವ ಯೋಜನೆಯಡಿ ಚಿತ್ರದುರ್ಗ ಜಿಲ್ಲೆಯಾದ್ಯಂತ ಸುಮಾರು 2,000 ಹಸುಗಳನ್ನು ರೂ.4.18 ಕೋಟಿಗೂ ಅಧಿಕ ವೆಚ್ಚದಲ್ಲಿ ನೀಡಲಾಗಿದ್ದು, ಜಿಲ್ಲೆಯ 60 ಗ್ರಾಮಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ ಎಂದು ಸಚಿವರು ತಿಳಿಸಿದರು.

**ಪ್ರತಿ ಮನೆಗೂ ಗ್ಯಾರಂಟಿ ಯೋಜನೆ ತಲುಪಿದೆ:** ಗ್ಯಾರಂಟಿ ಯೋಜನೆಗಳಿಂದ ಪ್ರತಿ ಒಂದು ತಾಲ್ಲೂಕಿಗೆ ಸುಮಾರು 200 ರಿಂದ 230 ಕೋಟಿಗೂ ಅಧಿಕ ಹಣ ಯೋಜನೆಗಳ ಫಲಾನುಭವಿಗಳಿಗೆ ನೇರವಾಗಿ ಪಾವತಿಯಾಗಿದೆ. ಗ್ರಾಮೀಣ ಭಾಗದ ಪ್ರತಿ ಮನೆ ಮನೆಯಲ್ಲಿಯೂ ಸಹ ಶೇ.100ರಷ್ಟು ಗ್ಯಾರಂಟಿ ಯೋಜನೆಗಳಿಂದ ಅನುಕೂಲ ಪಡೆದಿದ್ದಾರೆ ಎಂದು ಕೃಷಿ ಸಚಿವರು ತಿಳಿಸಿದರು.

ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕ ಮಂಜುನಾಥ್ ಮಾತನಾಡಿ, ಕಳೆದ ವರ್ಷ ಪರಶುರಾಂಪುರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಕೃಷಿ ಸಚಿವರು ಚಿತ್ರದುರ್ಗ ಜಿಲ್ಲೆಗೆ ಜಲಾನಯನ ಕಾರ್ಯಕ್ರಮಕ್ಕೆ ಹೆಚ್ಚಿನ ಅನುದಾನ ನೀಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದರ ಫಲವಾಗಿ ಕಳೆದ ವರ್ಷ 2023-24ನೇ ಸಾಲಿನಲ್ಲಿ ರೂ.84 ಲಕ್ಷ ಹಾಗೂ 2024-25ನೇ ಸಾಲಿನಲ್ಲಿ ಇದುವರೆಗೂ ರೂ.4.18 ಕೋಟಿ ಅನುದಾನವನ್ನು ಸಚಿವರು ಜಿಲ್ಲೆಗೆ ನೀಡಿದ್ದಾರೆ.

ಮಳೆಯಾಶ್ರಿತ ಪ್ರದೇಶದಲ್ಲಿ ಆದಾಯೋತ್ಪನ್ನ ಮಾರ್ಗಗಳ ಮೂಲಕ ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳ ಅಭಿವೃದ್ಧಿ ಮತ್ತು ಪುನಶ್ಚೇತನಗೊಳಿಸುವ ಯೋಜನೆಯಡಿ ಸುಮಾರು 2,000 ಹಸುಗಳನ್ನು ನೀಡುವ ಮೂಲಕ ಜಿಲ್ಲೆಯ 60 ಗ್ರಾಮಗಳಲ್ಲಿ ಅನುಷ್ಠಾನಗೊಳಿಸಲಾಗಿದೆ.

ರೇಣುಕಾಪುರ ಗ್ರಾಮದಲ್ಲಿಯೇ 200 ಹಸು ಹಾಗೂ ಎಮ್ಮೆಗಳನ್ನು ನೀಡಲಾಗಿದೆ. ಇದರಿಂದ ಸುಮಾರು 839 ಕುಟುಂಬಗಳು ಹೈನುಗಾರಿಕೆಯನ್ನು ಕೈಗೊಂಡಿದ್ದು, ಆರ್ಥಿಕ ಸಬಲತೆ ಕಂಡುಕೊಂಡಿದ್ದಾರೆ ಎಂದರು.

ಈ ಯೋಜನೆ ಅನುಷ್ಠಾನವಾದ ನಂತರದಲ್ಲಿ ರೇಣುಕಾಪುರ ಹಾಲು ಉತ್ಪಾದಕರ ಸಂಘಕ್ಕೆ ಪ್ರತಿ ದಿನವೂ ಸುಮಾರು 1,200 ಲೀಟರ್ ನಿಂದ 1300 ಲೀಟರ್ ಹಾಲು ದೊರೆಯುತ್ತಿದೆ.

ಹೈನುಗಾರಿಕೆ ಮೂಲಕ ಈ ಗ್ರಾಮಕ್ಕೆ ಶಕ್ತಿ ತುಂಬಿದವರು ಕೃಷಿ ಸಚಿವರು. ರೇಣುಕಾಪುರ ಗ್ರಾಮದ ರೈತರು ವಾರ್ಷಿಕವಾಗಿ ಸುಮಾರು ರೂ.2 ಕೋಟಿ ರೂಪಾಯಿಗೂ ಹೆಚ್ಚಿನ ಆರ್ಥಿಕಾಭಿವೃದ್ಧಿ ಚಟುವಟಿಕೆ ಕೈಗೊಂಡಿದ್ದಾರೆ.

ಯೋಜನೆ ಅನುಷ್ಠಾನಗೊಂಡ ಜಿಲ್ಲೆಯ 60 ಗ್ರಾಮಗಳಲ್ಲಿ ಸುಮಾರು ರೂ.24 ಕೋಟಿ ವರೆಗೂ ಆದಾಯ ಉತ್ಪನ್ನವಾಗುವ ಕೆಲಸ ಆಗಿದೆ. ಹೈನುಗಾರಿಕೆ ಅಭಿವೃದ್ಧಿಯಿಂದಾಗಿ ಹೊಲ, ತೋಟಗಳಿಗೆ ಗೊಬ್ಬರ ಹಾಕುವುದರಿಂದ ಮಣ್ಣಿನ ಉತ್ಪಾದನಾ ಶಕ್ತಿಯು ಈ ಕಾರ್ಯಕ್ರಮದ ಮೂಲಕ ಆಗಿದೆ.

ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿ ಕೆಲಸಗಳು ಸುಸ್ಥಿರವಾಗಿ ನಡೆಯಲು ಕಾರಣ ಆಗಿದೆ ಎಂದರು. ಇದೇ ಸಂದರ್ಭದಲ್ಲಿ ಮಳೆಯಾಶ್ರಿತ ಪ್ರದೇಶದಲ್ಲಿ ಆದಾಯೋತ್ಪನ್ನ ಮಾರ್ಗಗಳ ಮೂಲಕ ಕೃಷಿ ಮತ್ತು ಕೃಷಿ ಸಂಬಂಧಿತ ವಲಯಗಳ ಅಭಿವೃದ್ಧಿ ಮತ್ತು ಪುನಶ್ಚೇತನಗೊಳಿಸುವ ಯೋಜನೆಯಡಿ ಫಲಾನುಭವಿಗಳಿಗೆ ರೂ.20 ಸಾವಿರಗಳ ಸಹಾಯಧನದ ಚೆಕ್ ಅನ್ನು ಕೃಷಿ ಸಚಿವರು ಸಾಂಕೇತಿಕವಾಗಿ ವಿತರಿಸಿದರು.

ಈ ಯೋಜನೆ ಮೂಲಕ ಜಲಾನಯನ ಇಲಾಖೆ ವತಿಯಿಂದ ರೇಣುಕಾಪುರ ಗ್ರಾಮದಲ್ಲಿ ಈಗ ಹೈನುಗಾರಿಕೆ ಪ್ರಮುಖ ಆದಾಯ ಮೂಲವಾಗಿದೆ. ಹಾಲು, ಗೊಬ್ಬರಗಳ ಮಾರಾಟದಿಂದ ಗ್ರಾಮಸ್ಥರ ಆರ್ಥಿಕತೆ ವೃದ್ಧಿಸಿದೆ. ರೈತರ ಆತ್ಮವಿಶ್ವಾಸ ಹೆಚ್ಚಿಸಿದೆ. ಭೂಮಿಯ ಫಲವತ್ತತೆ ಕೂಡ ಹೆಚ್ಚಿದೆ. ರೇಣುಕಾಪುರಕ್ಕೆ ಯೋಜನೆ ಮೂಲಕ ವರ ತಂದ ಕೃಷಿ ಸಚಿವರು ಎಂದು ಗ್ರಾಮದ ಫಲಾನುಭವಿಗಳಾದ ಅಂಬರೀಶ್ ಹಾಗೂ ನರಸಿಂಹ ಮೂರ್ತಿ ಅಭಿಮಾನದಿಂದ ನುಡಿದರು.

ಈ ಯೋಜನೆಗೆ ಮುನ್ನ ರೇಣುಕಾಪುರ ಗ್ರಾಮ ಕೇವಲ ಬರಡು ನೆಲವಾಗಿತ್ತು. ಆದರೆ ಜಲಾನಯನ ಇಲಾಖೆ ಪಶು ಸಂಗೋಪನೆಗೆ ಪ್ರೋತ್ಸಾಹ ದೊರೆತ ನಂತರ ರೈತರ ಮನೆಯ ಪರಿಸರ, ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಬದಲಾಗಿದೆ. ಮಕ್ಕಳ ಶಿಕ್ಷಣ ಹಾಗೂ ಆಸ್ಪತ್ರೆ ಚಿಕಿತ್ಸೆಗೆ ಯಾರ ಮುಂದೆಯೂ ಕೈ ಚಾಚುವಂತಿಲ್ಲ. ನೆಮ್ಮದಿ ಹೆಚ್ಚಿದೆ ಎಂದು ರೇಣುಕಾಪುರ ಗ್ರಾಮದ ಬಸವರಾಜ್ ಹೇಳಿದರು.

ಕಾರ್ಯಕ್ರಮದಲ್ಲಿ ಸಾವಯವ ಮಿಷನ್ ಮಾಜಿ ಅಧ್ಯಕ್ಷ ಸೋಮಶೇಖರ್, ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿಕಾರದ ಉಪಾಧ್ಯಕ್ಷ ನಾಗೇಶ್ ರೆಡ್ಡಿ, ಕೆಡಿಪಿ ಸದಸ್ಯರಾದ ಪಾಲಯ್ಯ, ವಿಶ್ವನಾಥರೆಡ್ಡಿ, ಜಲಾನಯನ ಇಲಾಖೆ ಆಯುಕ್ತ ಮಹೇಶ್ ಬಿ.ಶಿರೂರ, ನಿರ್ದೇಶಕ ಮೊಹಮ್ಮದ ಫರ್ವೇಜ್ ಬಂಥನಾಳ, ಪಶು ಸಂಗೋಪನೆ ಇಲಾಖೆ ಉಪನಿರ್ದೇಶಕ ಡಾ.ಕುಮಾರ್, ಸಹಾಯಕ ನಿರ್ದೇಶಕ ರೇವಣ್ಣ, ಉಪಕೃಷಿ ನಿರ್ದೇಶಕ ಪ್ರಭಾಕರ್, ರೈತ ಮುಖಂಡರಾದ ರೆಡ್ಡಿಹಳ್ಳಿ ವೀರಣ್ಣ ಸೇರಿದಂತೆ ರೇಣುಕಾಪುರ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸದಸ್ಯರು ಹಾಗೂ ರೈತರು ಇದ್ದರು.

**ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಬದಲಾಗಿದೆ**


ಉದಯವಾಹಿನಿ ಚಿತ್ರ

**ಜಿಲ್ಲೆಗೆ 4.18 ಕೋಟಿ ಅನುದಾನ**

**ಪ್ರತಿ ಮನೆಗೂ ಗ್ಯಾರಂಟಿ ಯೋಜನೆ ತಲುಪಿದೆ**

**ಹೈನುಗಾರಿಕೆ ಪ್ರಮುಖ ಆದಾಯ ಮೂಲ**

**ರೈತರಿಗೆ ಪೂರಕ ಹೈನುಗಾರಿಕೆ**

ರೈತರಿಗೆ ಹೈನುಗಾರಿಕೆ ಪೂರಕವಾಗಿದ್ದು, ಕುಟುಂಬದ ಖರ್ಚು ನಿರ್ವಹಣೆ, ಆರ್ಥಿಕವಾಗಿ ಸದೃಢವಾಗಲು ಜಲಾನಯನ ಇಲಾಖೆಯ ಮಳೆ ಆಶ್ರಿತ ಪ್ರದೇಶದಲ್ಲಿ ಆದಾಯೋತ್ಪನ್ನ ಮಾರ್ಗಗಳ ಮೂಲಕ ಕೃಷಿ ಸಂಬಂಧಿತ ವಲಯಗಳ ಅಭಿವೃದ್ಧಿ ಮತ್ತು ಪುನಶ್ಚೇತನಗೊಳಿಸುವ ಯೋಜನೆ ಸಹಾಯಕವಾಗಿದ್ದು, ಈ ಯೋಜನೆಯಿಂದ ರೇಣುಕಾಪುರದ ಗ್ರಾಮದ ಚಿತ್ರಣ ಬದಲಾಗಿದೆ.

> ಸರ್ಕಾರವು ಹೈನುಗಾರಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಹಲವಾರು ಸೌಲಭ್ಯಗಳನ್ನು ನೀಡಲಾಗುತ್ತಿದೆ. ಹಾಲು ಉತ್ಪಾದಕರಿಗೆ ರೂ.5 ಸಹಾಯಧನ, ಹಸು ಖರೀದಿಗೆ ರೂ.20 ಸಾವಿರ ಸಹಾಯಧನ, ಮೇವು ಕಟಾವು ಯಂತ್ರ, ಗೊಬ್ಬರ, ಬಿತ್ತನೆ ಬೀಜ ಸಬ್ಸಿಡಿ ಸೇರಿದಂತೆ ಹಲವಾರು ಸೌಲಭ್ಯಗಳನ್ನು ರೈತರಿಗೆ ನೀಡಲಾಗುತ್ತಿದೆ
> -ಎನ್.ಚೆಲುವರಾಯಸ್ವಾಮಿ

## ನಗರದಲ್ಲಿ ಎಮ್‌ಸಿಸಿಟಿಎನ್‌ಎಸ್ ಜಾರಿ ಅಪರಾಧಗಳ ಹಿನ್ನೆಲೆ ಪತ್ತೆಗೆ ಆ್ಯಪ್ ಬಳಕೆ

• ಉದಯವಾಹಿನಿ ಇಂಡಿ

ಇಂಡಿ ನಗರ ಪೋಲಿಸ್ ಇಲಾಖೆ ನಗರದಲ್ಲಿ ಅಪರಾಧ ನಿಯಂತ್ರಿಸಲು ಹೊಸದಾರಿ ಕಂಡುಕೊಂಡಿದೆ. ಎಮ್‌ಸಿಸಿಟಿಎನ್‌ಎಸ್ ಮೊಬೈಲ ಕ್ರೈಂ ಆಂಡ್ ಕ್ರಿಮಿನಲ್ ಆಂಡ್ ಟ್ರ್ಯಾಕಿಂಗ್ ಸಿಸ್ಟಮ್ ಆಪ್ ಮುಖಾಂತರ ಅನುಮಾನಾಸ್ಪದ ವ್ಯಕ್ತಿಗಳ ಪತ್ತೆ ಶುರು ಮಾಡುವ ಕೆಲಸ ಆರಂಭಿಸಿದ್ದಾರೆ.

ಪಟ್ಟಣದಲ್ಲಿ ಮತ್ತು ಗ್ರಾಮೀಣ ಪ್ರದೇಶದಲ್ಲಿ ರಾತ್ರಿ 11ರ ನಂತರ ಕಳ್ಳತನ ಮತ್ತು ಅಪರಾಧ ಪ್ರಕರಣ ಸಂಖ್ಯೆ ತಡೆಯುವ ಸಲುವಾಗಿ ನಗರ ಪೋಲಿಸ್ ಇಲಾಖೆ ಬೀಟ್ ಪೋಲಿಸರಿಗೆ ಮೊಬೈಲ ಕ್ರೈಂ ಆಂಡ್ ಕ್ರಿಮಿನಲ್ ಆಂಡ್ ಟ್ರ್ಯಾಕಿಂಗ್ ಸಿಸ್ಟಮ್ ಆಪ್ ಮೂಲಕ ಅನುಮಾನಾಸ್ಪದ ಆರೋಪಿಗಳ ಪತ್ತೆಗೆ ಮುಂದಾಗಿದೆ. ಈ ಆಪ್‌ನಲ್ಲಿ ಕೇವಲ ಫಿಂಗರ್ ಪ್ರಿಂಟನಿಂದ ವ್ಯಕ್ತಿಯ ಅಪರಾಧದ ಪೂರ್ವಾಪರ ತಿಳಿಯುತ್ತದೆ.

ಇದರಿಂದ ಮುಂದಾಗುವ ಅಪರಾಧ ಗಳನ್ನು ಮೊದಲೇ ಮುಟ್ಟಿ ಹಾಕಬಹುದು. ನಗರದ ಹಲವು ಕಡೆ ತಡ ರಾತ್ರಿಯ ವರೆಗೆ ಹಲವು ಜನರು ಓಡಾಟ ಮಾಡುತ್ತಿರುತ್ತಾರೆ. ಸಾಮಾನ್ಯವಾಗಿ ರಾತ್ರಿ 11ರ ನಂತರ ಮಾರುಕಟ್ಟೆ ಸೇರಿ ಎಲ್ಲೆಡೆ ಅಂಗಡಿ ಮುಗ್ಗಟ್ಟು ಮುಚ್ಚಲಾಗುತಿದೆ. ಇದಾದ ನಂತರ ಅಲ್ಲಲ್ಲಿ ಜನರ ಓಡಾಟ ಕಂಡು ಬರುತ್ತಿದೆ. ಕೆಲವು ಬಾರಿ ಸಾಮಾನ್ಯ ಜನರಂತೆ ಅಪರಾಧಿಗಳು ರಾತ್ರಿ ಓಡಾಡುವ ಮೂಲಕ ಮುಂದಿನ ಅಪರಾಧ ಕೃತ್ಯಗಳ ಕುರಿತು ಉಪಾಯ ಹಾಕುತ್ತಾರೆ. ಈ ವೇಳೆ ಯಾರು ಜನಸಾಮಾನ್ಯರು ಅಥವಾ ಯಾರು ಅಪರಾಧ ಹಿನ್ನೆಲೆ ಇರುವವರು ಎಂಬುದು ತಿಳಿಯುವದಿಲ್ಲ.

ಇಂತಹ ವೇಳೆ ಈ ಆ್ಯಪ್ ಪೂರ್ಣ ರೂಪದಲ್ಲಿ ಸಹಕಾರಕ್ಕೆ ಬರುತ್ತದೆ. ಇದರಿಂದ ಆರೋಪಿಗಳ ಪೂರ್ವಪರ ತಿಳಿದುಕೊಂಡು ಅವರಿಂದ ಆಗುವ ಅಪರಾಧಗಳನ್ನು ತಪ್ಪಿಸಲು ಅನುಕೂಲವಾಗಲಿದೆ.

ರಾತ್ರಿ ಬೀಟ್ ಸೇರಿ ಸುರಕ್ಷತೆ ಕೆಲಸ ಮಾಡುವ ಪೋಲಿಸ ಸಿಬ್ಬಂದಿ ಬಳಿ ಫಿಂಗರ ಪ್ರಿಂಟ್ ಸ್ಕ್ಯಾನಿಂಗ್ ಇರುವ ಡಿವೈಸ ಇರುತ್ತದೆ. ಇದನ್ನು ಇಂಟರ್ ನೆಟ ಮೂಲಕ ಜೋಡಿಸಿ ಕೇಂದ್ರ ಸರಕಾರ ಅಪರಾಧಿ ಡಿಜಿಟಲ್ ದಾಖಲೆಗಳ ಜೊತೆ ಜೋಡಣೆ ಮಾಡಲಾಗುತ್ತಿದೆ. ಯಾವದೇ ವ್ಯಕ್ತಿಯ ಫಿಂಗರ್ ಪ್ರಿಂಟ್ ಸ್ಕ್ಯಾನಿಂಗ್ ಮಾಡುತ್ತಲೇ ತಮ್ಮಲ್ಲಿನ ಡಿಜಿಟಲ್ ದಾಖಲೆಗಳಲ್ಲಿನ ಫಿಂಗರ ಪ್ರಿಂಟ ಜೊತೆ ಮ್ಯಾಚ ಮಾಡುತ್ತ ಹೋಗುತ್ತದೆ. ಇಲ್ಲಿ ಸಾಮಾನ್ಯ ವ್ಯಕ್ತಿಯೊ ಅಥವಾ ಈತನ ವಿರುದ್ಧ ಈ ಹಿಂದೆ ಯಾವುದಾದರೂ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದಾನೆ ಎಂಬ ಕುರಿತು ಮಾಹಿತಿ ದೊರೆಯುತ್ತದೆ.

**ವ್ಯಕ್ತಿಗಳ ಅಪರಾಧ ಹಿನ್ನೆಲೆ ಪತ್ತೆ ಸುಲಭ**


ಉದಯವಾಹಿನಿ ಚಿತ್ರ

> ರಾತ್ರಿ ನಗರದಲ್ಲಿ ಅಪರಾಧಗಳ ಸಂಖ್ಯೆ ಇಳಿಕೆ ಮಾಡಲು ಸಿಬ್ಬಂದಿ ಹಾಗೂ ಅಧಿಕಾರಿಗಳು ಎಮ್‌ಸಿಸಿಟಿಎನ್ ಎಸ್ ಆ್ಯಪ್ ಬಳಕೆ ಮಾಡುತ್ತಿದ್ದಾರೆ. ರಾತ್ರಿ ವೇಳೆ ಅನಾವಶ್ಯಕವಾಗಿ ಅಪರಾಧ ಹಿನ್ನೆಲೆ ಹೊಂದಿರುವವರು ಓಡಾಡುವುದನ್ನು ಇದರಿಂದ ತಡೆಯಬಹುದು. ಅಲ್ಲದೆ ಅಪರಾಧಗಳ ಸಂಖ್ಯೆ ಇಳಿಕೆ ಮಾಡಲು ಸಹಕಾರಿಯಾಗುತ್ತದೆ.
> -ರತನಕುಮಾರ ಜಿರಗಿಹಾಳ
> ಸಿ.ಪಿ.ಐ ಇಂಡಿ ಪಟ್ಟಣ

## ಸರಕಾರಿ ನೌಕರರ ಸಂಘದ ವತಿಯಿಂದ ಪ್ರತಿಭಟನೆ


ಉದಯವಾಹಿನಿ ಚಿತ್ರ

• ಉದಯವಾಹಿನಿ ಇಂಡಿ

ಸಾರ್ವಜನಿಕ ಸರಕಾರಿ ರಸ್ತೆ ಅಳತೆ ಮಾಪನ ಮಾಡಲು ಹೊದ ಭೂಮಾಪಕ ಮಹಾಂತೇಶ ಸಜ್ಜನ ಇವರ ಮೇಲೆ ಹಲ್ಲೆ ಮಾಡಿದ ಘಟನೆ ಖಂಡಿಸಿ ಬುಧವಾರ ರಾಜ್ಯ ಸರಕಾರಿ ನೌಕರರ ಸಂಘದ ಘಟಕ ಇಂಡಿ ವತಿಯಿಂದ ಪಟ್ಟಣದ ಮಿನಿ ವಿಧಾನಸೌಧ ಎದುರು ಪ್ರತಿಭಟನೆ ನಡೆಸಿದರು. ಅಲ್ಲಿ ಮಾತನಾಢಿದ ತಾಲ್ಲೂಕು ಸರಕಾರಿ ನೌಕರರ ಸಂಘದ ಇಂಡಿ ಘಟಕದ ಅಧ್ಯಕ್ಷ ಬಸವರಾಜ ರಾಹೂರ ಮಾತನಾಡಿ ಭೂಮಾಪಕ ಮಹಾಂತಪ್ಪ ಸಜ್ಜನ ಇವರ ಮೇಲೆ ಹಲ್ಲೆ ಮಾಡಿರುವದು ಭೂಮಾಪಕರು ಮಾನಸಿಕವಾಗಿ ನೊಂದುಕೊಂಡಿದ್ದಾರೆ. ತಾಲ್ಲೂಕಿನಲ್ಲಿ ಸರಕಾರಿ ನೌಕರರ ಮೇಲೆ ಮೇಲಿಂದ ಮೇಲೆ ಹಲ್ಲೆಗಳು ನಡೆಯುತ್ತಿದ್ದು ನೌಕರಿ ಮಾಡುವದು ತೊಂದರೆ ಯಾಗುತ್ತಿದೆ. ಹಲ್ಲೆ ಮಾಡಿದವರ ಮೇಲೆ ಕ್ರಮ ಕೈಕೊಳ್ಳಬೇಕು. ಇಲ್ಲದಿದ್ದರೆ ತಾಲ್ಲೂಕಿನ ಎಲ್ಲಾ ಸರಕಾರಿ ನೌಕರರು ಉಗ್ರ ಪ್ರತಿಭಟನೆ ಮಾಡಲಾಗುವದು ಎಂದರು.

ತಾಲ್ಲೂಕಾ ಭೂಮಾಪಕರ ಸಂಘದ ಅಧ್ಯಕ್ಷ ಯಮನೇಶ ಬಿರಾದಾರ, ರವಿ ಗಿಣ್ಣೆ, ಜಿಲ್ಲಾ ಭೂಮಾಪಕರ ಸಂಘದ ಅಧ್ಯಕ್ಷ ಎ.ಎಚ್. ಮುಲ್ಲಾ, ಗಂಗಾಧರ ಗುಜ್ಜರ, ವಿನಾಯಕ ಕುಲಕರ್ಣಿ ಹಲ್ಲೆ ಖಂಡಿಸಿ ಮಾತನಾಡಿದರು.

ಪ್ರತಿಭಟನೆಯಲ್ಲಿ ಎಸ್.ಆರ್.ಹಿರೇಮಠ, ಸಂಜವಾಡ, ಬಿ.ಎಸ್. ಮಜ್ಜಗೆ, ಆರ್.ಸಿ.ಲಚ್ಯಾಣ, ವಿರೇಶ ಜೋಕುಮಾರ, ಎಸ್.ವಿ.ಹರಳಯ್ಯ, ಸಿದ್ದಾರ್ಥ ನಾಯಿಕೊಡಿ, ಗುರುಶಾಂತ ಕುರಲೆ, ವಿಜಯಲಕ್ಷ್ಮಿ ಕಲ್ಯಾಣಕರ, ದ್ರಾಕ್ಷಾಯಿಣಿ ಕಾಚಾಪುರ, ಜ್ಯೋತಿ ಕುಂದರಗಿ, ಲಕ್ಷ್ಮಿ ಶಿವೂರ ಮತ್ತಿತರಿದ್ದರು. ಗ್ರೇಡ್ 2 ತಹಶೀಲ್ದಾರ ಧನಪಾಲಶೆಟ್ಟಿ ದೇವೂರ ಇವರಿಗೆ ಮನವಿ ಸಲ್ಲಿಸಿದರು.

## ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು

• ಉದಯವಾಹಿನಿ ಸೇಡಂ

ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆ ಹಾಗೂ ಸಾಮ್ರಾಟ್ ಅಶೋಕ ಚಾರಿಟೇಬಲ್ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ 2024-25ನೇ ಸಾಲಿನ ಅಸ್ಪೃಶ್ಯತಾ ನಿರ್ಮೂಲನಾ ವಿಚಾರಗೋಷ್ಠಿ, ಕಾರ್ಯಾಗಾರ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮವು ಅರೆಬೊಮ್ಮನಹಳ್ಳಿ ಗ್ರಾಮದ ಹಾರಕೂಡ ಚನ್ನಬಸವೇಶ್ವರ ದೇವಸ್ಥಾನ ಆವರಣದಲ್ಲಿ ನಡೆಯಿತು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ನಾಗರಾಜ ಹೂಗಾರ ಅವರು, 'ಅಸ್ಪೃಶ್ಯತೆ ಎಂಬುದು ಒಂದು ಸಾಮಾಜಿಕ ಪಿಡುಗು, ಮಾನಸಿಕ ರೋಗ. ಅದನ್ನು ಬೇರು ಸಮೇತ ಕಿತ್ತೆಸೆಯಲು ತಾವೆಲ್ಲರೂ ಮನಸ್ಸು ಮಾಡಬೇಕೆಂದರು. ನಂತರ ಟ್ರಸ್ಟ್ ಅಧ್ಯಕ್ಷ ಯಲ್ಲಪ್ಪ ದೊಡ್ಡಮನಿ ತಮ್ಮ ಉಪನ್ಯಾಸ ಭಾಷಣದಲ್ಲಿ ಇಡೀ ಪ್ರಪಂಚದಲ್ಲಿಯೇ, ಭಾರತ ವಿಶ್ವಗುರು ಎನಿಸಿಕೊಳ್ಳಬೇಕಾದರೆ ದೇಶದಲ್ಲಿ ಸಾಮ್ರಾಟ್ ಅಶೋಕನ ಕಾಲದ ಭಾರತ ಪುನಃ ಸ್ಥಾಪನೆಯಾಗಬೇಕು ಎಂದರು. ಶಿವಶರಣಪ್ಪ ತಳವಾರ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದರು. ಮುಖ್ಯ ಅತಿಥಿಗಳಾದ ದಾಕ್ಷಾಯಣಿ, ಶ್ರೀಶೈಲ ನಾಯ್ಕೋಡಿ, ಶಿವಕುಮಾರ ಬಿರಾದಾರ, ಶಿವಾನಂದ ಮಡಿವಾಳ, ಭೀಮರಾವ್ ಮರಪಳ್ಳಿ ಇದ್ದರು.

## ಕುಖ್ಯಾತ ರೌಡಿ ಬಾಗಪ್ಪ ಹರಿಜನ್ ಭೀಕರ ಹತ್ಯೆ

• ಉದಯವಾಹಿನಿ ವಿಜಯಪುರ


ಭೀಮಾತೀರದಲ್ಲಿ ಮತ್ತೆ ರಕ್ತದೋಕುಳಿ ಹರಿದಿದೆ. ನಟೋರಿಯಸ್ ಹಂತಕ ಚಂದಪ್ಪ ಹರಿಜನ್ ಖಾಸಾ ಖಾಸಾ ಶಿಷ್ಯ, ಕುಖ್ಯಾತ ರೌಡಿ ಬಾಗಪ್ಪ ಹರಿಜನ್‌ನನ್ನ ದುಷ್ಕರ್ಮಿಗಳು ಭೀಕರವಾಗಿ ಹತ್ಯೆಗೈದಿದ್ದಾರೆ.

ರಾತ್ರಿ 8.50ರ ಸುಮಾರಿಗೆ ವಿಜಯಪುರದ ಮದಿನಾ ನಗರದಲ್ಲಿ ಮಾರಕಾಸ್ತ್ರಗಳಿಂದ ಮುಖ, ತಲೆ ಸೇರಿದಂತೆ ಸಿಕ್ಕ ಸಿಕ್ಕಲಿ ಹೊಡೆದು ಬಾಗಪ್ಪನನ್ನ ಕೊಲೆ ಮಾಡಲಾಗಿದೆ. ಮದಿನಾ ನಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದ ಬಾಗಪ್ಪ ರಾತ್ರಿ ಮನೆಯಿಂದ ಹೊರಬರುತ್ತಿದ್ದಂತೆ ದುಷ್ಕರ್ಮಿಗಳು ಏಕಾಏಕಿ ದಾಳಿ ನಡೆಸಿ ಹತ್ಯೆ ಮಾಡಿದ್ದು, ಬಳಿಕ ಸ್ಥಳದಿಂದ ಪರಾರಿಯಾಗಿದ್ದಾರೆ.

ಘಟನಾ ಸ್ಥಳಕ್ಕೆ ಎಸ್‌ಪಿ ಲಕ್ಷ್ಮಣ ನಿಂಬರಗಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಹಂತಕರ ಪತ್ತೆಗಾಗಿ ಎಎಸ್‌ಪಿ ರಾಮನಗೌಡ ನೇತೃತ್ವದಲ್ಲಿ ವಿಶೇಷ ತಂಡ ರಚನೆ ಮಾಡಲಾಗಿದೆ.ಇನ್ನು ಈ ಹಿಂದೆ ಕೋರ್ಟ್ ಆವರಣದಲ್ಲಿಯೇ ಬಾಗಪ್ಪ ಹರಿಜನ್ ಮೇಲೆ ಫೈರಿಂಗ್ ನಡೆದಿತ್ತು. ಹಂತಕನೋರ್ವ ಐದು ಸುತ್ತು ಗುಂಡು ಹಾರಿಸಿದ್ದರಿಂದ ಬಾಗಪ್ಪ ಹರಿಜನನ ಎದೆ ಭಾಗಕ್ಕೆ ಹೊಕ್ಕಿತ್ತು. ಕೂಡಲೇ ಆತನನ್ನು ಆಸ್ಪತ್ರೆಗೆ ದಾಖಲು ಮಾಡುವ ಮೂಲಕ ಬದುಕುಳಿದಿದ್ದ.

ಆದರೆ ಇದೀಗ 10-15 ಜನರಿದ್ದ ಹಂತಕರ ತಂಡ ಯೋಜಿತ ರೀತಿಯಲ್ಲಿ ದಾಳಿ ನಡೆಸಿದ್ದು, ಬಾಗಪ್ಪ ಹರಿಜನ್ ಹತ್ಯೆ ಮಾಡುವಲ್ಲಿ ಯಶಸ್ವಿಯಾಗಿದೆ.

ಯಾರು ಈ ಬಾಗಪ್ಪ ಹರಿಜನ್ ಹತ್ಯೆಯಾದ ಬಾಗಪ್ಪ ಹರಿಜನ್ ಭೀಮಾತೀರದ ಕುಖ್ಯಾತ ಹಂತಕ ಚಂದಪ್ಪ ಹರಿಜನ್‌ನ ಶಿಷ್ಯನಾಗಿದ್ದು, ಭೀಮಾತೀರದ ಅತ್ಯಂತ ಶಾರ್ಪ್ ಶೂಟರ್ ಹಂತಕನಾಗಿದ್ದ. 2000 ವರ್ಷದ ಮೇ ತಿಂಗಳಲ್ಲಿ ಚಂದಪ್ಪ ಹರಿಜನ್ ಹತ್ಯೆ ನಂತರ ಭೀಮಾತೀರದಲ್ಲಿ ಬಾಗಪ್ಪ ಹರಿಜನ್ ತನ್ನದೇ ಆದ ಹವಾ ಕ್ರಿಯೇಟ್ ಮಾಡಿದ್ದ. ಚಂದಪ್ಪನ ಸಾವಿನ ಬಳಿಕ ಕುಟುಂಬದಲ್ಲಿ ಉಂಟಾಗಿದ್ದ ಆಸ್ತಿ ಗಲಾಟೆ ಪ್ರಕರಣದಲ್ಲಿ ಬಾಗಪ್ಪ ಚಂದಪ್ಪನ ಸಹೋದರ ಬಸಪ್ಪ ಹರಿಜನ ಕೊಲೆ ಮಾಡಿದ ಆರೋಪ ಎದುರಿಸುತ್ತಿದ್ದ. ಆಲಮೇಲ ಪೊಲೀಸ್‌ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿತ್ತು.


ಉದಯವಾಹಿನಿ ಚಿತ್ರ

ಇದಲ್ಲದೆ ಗಾಂಧಿಚೌಕ್ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2013ರಲ್ಲಿ ಬ್ಯಾಡಗಿಹಾಳ ಗ್ರಾಮದ ಬಸ್ ಕಂಡಕ್ಟರ್ ಓರ್ವನ ಕೊಲೆ ಪ್ರಕರಣದಲ್ಲಿ ಬಾಗಪ್ಪ ಪ್ರಮುಖ ಪಾತ್ರಧಾರಿಯಾಗಿದ್ದು, ಈತನ ವಿರುದ್ಧ ಪ್ರಕರಣ ದಾಖಲಾಗಿತ್ತು.

# ಶರಣರ ಜಯಂತಿಯಲ್ಲಿ ಭಾಗವಹಿಸುವುದೇ ಪುಣ್ಯ

### ಮಹಾನ್ ಪುಣ್ಯವಂತರ ಶರಣರ ಸಂದೇಶಗಳನ್ನು ನಾವು ಮುಂದಿನ ಕಾಲಕ್ಕೂ ಸಾರಬೇಕು: ಎನ್.ಹೆಚ್.ಕೋನರೆಡ್ಡಿ

• ಉದಯವಾಹಿನಿ ಧಾರವಾಡ

ಶರಣರನ್ನು ನಾವು ನೋಡಿಲ್ಲ, ಆದರೆ ಅವರ ಜಯಂತಿಯಲ್ಲಿ ಭಾಗವಹಿಸುವುದೇ ನಮ್ಮ ಒಂದು ಪುಣ್ಯ. ಇಂತಹ ಮಹಾನ ಪುಣ್ಯವಂತರ ಶರಣರ ಸಂದೇಶಗಳನ್ನು ನಾವು ಮುಂದಿನ ಕಾಲಕ್ಕೂ ಸಾರಬೇಕು ಎಂದು ಶಾಸಕ ಎನ್. ಹೆಚ್.ಕೋನರಡ್ಡಿ ಅವರು ಹೇಳಿದರು.

ಅವರು ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಆಯೋಜಿಸಿದ್ದ ಕಾಯಕ ಶರಣರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಮಾತನಾಡಿದರು.

ಆಗಿನ ದಿನಗಳಲ್ಲಿ ಒಂದೇ ಮನೆಯ ಅಣ್ಣ-ತಮ್ಮಂದಿರ ಹಾಗೆ ಸಹಬಾಳ್ವೆಯಿಂದ ಜೀವನ ನಡೆಸುತ್ತಿದ್ದೆವು ಆದರೆ ಇತ್ತೀಚಿನ ದಿನಗಳಲ್ಲಿ ಸಹ ಹಾಗೆ ಜೀವನ ನಡೆಸಬೇಕು ಎಂದರೆ ಶರಣರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದರೆ ಮಾತ್ರ ಅದು ಸಾಧ್ಯ.

ಇತಿಹಾಸ ನಮ್ಮ ಮುಂದೆ ಇದೆ. ಆದರೆ ಅದನ್ನು ನಾವು ಓದಿಕೊಂಡು ತಿಳಿದುಕೊಳ್ಳಬೇಕು. ಯೋಗಿಗಳು, ಶರಣರು, ಸಂತರು ಬಾಳಿದ ಹಾಗೆ ನಾವು ನೀವು ಬಾಳಿಕೊಂಡು ಹೋಗಬೇಕು ಎಂದು ಅವರು ಹೇಳಿದರು.

ಶ್ರೀ ಮಾದಾರ ಚನ್ನಯ್ಯ ಹಾಗೂ ಶ್ರೀ ಮಾದಾರ ಧೂಳಯ್ಯ ಅವರ ಕುರಿತು ಕರ್ನಾಟಕ ಕಲಾ ಮಹಾವಿದ್ಯಾಲಯದ ರಾಜ್ಯಾಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಮಹದೇವಪ್ಪ ದಳಪತಿ, ಶ್ರೀ ಡೋಹರ ಕಕ್ಕಯ್ಯ ಅವರ ಕುರಿತು ಶರಣ ಹರಳಯ್ಯ ಪತ್ರಿಕೆ ಸಂಪಾದಕ ಡಾ. ಮಾರ್ಕಂಡೇಯ ದೊಡಮನಿ, ಶ್ರೀ ಸಮಗಾರ ಹರಳಯ್ಯ ಅವರ ಕುರಿತು ಹಾನಗಲ್ ಗಣಕ ವಿಜ್ಞಾನ ವಿಭಾಗದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಉಪನ್ಯಾಸಕ ಪ್ರೊ. ರಾಜೇಶ ಹೊಂಗಲ್ ಹಾಗೂ ಶ್ರೀ ಉರಿಲಿಂಗ ಪೆದ್ದಿ ಅವರ ಕುರಿತು ನಿವೃತ್ತ ಪೊಲೀಸ್ ಅಧಿಕಾರಿ ಗಿರೀಶ ಆರ್. ಕಾಂಬಳೆ ಅವರು ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸವನ್ನು ನೀಡಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಅವರು ಸ್ವಾಗತಿಸಿದರು. ಆರತಿ ದೇವಶಿಕಾಮಣಿ ಅವರು ಕಾರ್ಯಕ್ರಮ ನಿರೂಪಿಸಿ, ವಂದಿಸಿದರು. ಕಾರ್ಯಕ್ರಮದಲ್ಲಿ ಸಮಾಜದ ಮುಖಂಡರಾದ ಡಾ. ನೀಲಕಂಠ ಮಿಶ್ರಿಕೋಟಿ, ಲಕ್ಷ್ಮಣ ಬಕ್ಕಾಯಿ, ಮಹೇಶ ಹುಲಣ್ಣವರ, ಅಣ್ಣಪ್ಪ ಕರಾತೆ, ಯಲ್ಲಪ್ಪ ಸವಣೂರ ಹಾಗೂ ಕಾಯಕ ಸಮಾಜದ ಅಧ್ಯಕ್ಷರು ಸಾರ್ವಜನಿಕರು ಹಾಗೂ ಇತರರು ಭಾಗವಹಿಸಿದ್ದರು.


ಉದಯವಾಹಿನಿ ಚಿತ್ರ

**ಯೋಗಿಗಳು, ಶರಣರು, ಸಂತರು ಬಾಳಿದ ಹಾಗೆ ನಾವು ನೀವು ಬಾಳಿಕೊಂಡು ಹೋಗಬೇಕು**

> ನಮ್ಮ ಜಾತಿ ವ್ಯವಸ್ಥೆಯು ಉದ್ಭವವಾಗಿರುವುದು ನಾವು ಮಾಡುವ ಕಾಯಕದಿಂದ ಶರಣರ ಜಯಂತಿಯನ್ನು ಆಚರಿಸುವ ಮೂಲಕ ಎಲ್ಲಾ ಜಾತಿಯ ಜನರನ್ನು ಸಹ ಈಗಿನ ಜಗತ್ತು ಮೇಲಿನ ಪಂತಿಗೆ ತರುತ್ತಿದೆ ಎಂದರು. ಮಾದರ ಚನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಉರಿಲಿಂಗಪೆದ್ದಿ ಅವರು ಎಲ್ಲರೂ ತಮ್ಮ ಕಾಯಕಗಳ ಮುಖಾಂತರ ಶರಣರ ಸಂಸ್ಕೃತಿಗೆ ವಚನಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಸಾಮಾನ್ಯ ಮನುಷ್ಯರಿಗೂ ಕೂಡ ಅರ್ಥ ಆಗುವ ರೀತಿಯಲ್ಲಿ ಸರಳ ಭಾಷೆಯಲ್ಲಿ ಪದ ಬಳಕೆ ಮಾಡಿ ವಚನಗಳನ್ನು ರಚಿಸಿದ್ದಾರೆ. ಆ ವಚನಗಳ ಮುಖಾಂತರ ನಮಗೆಲ್ಲ ಸಂಸ್ಕೃತಿಯ ಕೊಡುಗೆಯನ್ನು ನೀಡಿದ್ದಾರೆ
> -ಗೀತಾ ಸಿ.ಡಿ., ಅಪರ ಜಿಲ್ಲಾಧಿಕಾರಿ

> ಪರಿಪೂರ್ಣವಾಗಿ ಶರಣರ ಅಧ್ಯಯನವನ್ನು ಮಾಡಬೇಕು ಹಾಗೂ ಅರ್ಥ ಮಾಡಿಕೊಂಡು ಅವರ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಪುಸ್ತಕದ ಜೊತೆ ಗೆಳೆತನ ಮಾಡಬೇಕು. ನಾವೆಲ್ಲ ಒಂದೇ ಎಂದು ತಿಳಿದು ಬದುಕಬೇಕು. ಶಿವಶರಣರು ಬರೆದ ಪ್ರತಿಯೊಂದು ವಚನಗಳು ಅರ್ಥಗರ್ಭಿತವಾಗಿವೆ -ಶಾಕೀರ ಸನದಿ, ಹುಬ್ಬಳ್ಳಿ-ಧಾರವಾಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ

ಉದಯ ವಾಹಿನಿ

ದೇಶ/ವಿದೇಶ

ಗುರುವಾರ
13 ಫೆಬ್ರವರಿ 2025



# ಭಾರತೀಯ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ



**ಮಾರ್ಸೆಲ್ಲೆ ಯುದ್ಧ ಸ್ಮಾರಕಕ್ಕೆ ಪ್ರಧಾನಿ ಮೋದಿ ಭೇಟಿ**

**ಪ್ಯಾರಿಸ್:** ಮೂರು ದಿನಗಳ ಫ್ರಾನ್ಸ್ ಪ್ರವಾಸದಲ್ಲಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಮಾರ್ಸೆಲ್ಲೆ ನಗರದ ಮಜಾರ್ಗಸ್‌ನಲ್ಲಿ ಮೊದಲನೇ ಮತ್ತು ಎರಡನೇ ಮಹಾಯುದ್ಧದ ಸ್ಮರಣಾರ್ಥ ನಿರ್ಮಿಸಲಾಗಿರುವ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿದ್ದಾರೆ. ಈ ವೇಳೆ ಮೊದಲನೇ ಮತ್ತು ಎರರಡನೇ ಮಹಾಯುದ್ಧದಲ್ಲಿ ಭಾಗವಹಿಸಿ ಹುತಾತ್ಮರಾದ ಭಾರತೀಯ ಸೈನಿಕರಿಗೆ ಈ ವೇಳೆ ಪ್ರಧಾನಿ ಮೋದಿ ಗೌರವ ವಂದನೆ ಸಲ್ಲಿಸಿದರು.

ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮಾರ್ಕನ್ ಅವರೊಂದಿಗೆ ಮಾರ್ಸೆಲ್ಲೆಯಲ್ಲಿರಿವ ಮಜಾರ್ಗಸ್ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿದ ಪ್ರಧಾನಿ ಮೋದಿ, ಮೊದಲ ಮಹಾಯುದ್ಧದಲ್ಲಿ ಮಡಿದ ವೀರ ಸೈನಿಕರ ಗೌರವಾರ್ಥ ನಿರ್ಮಿಸಿರುವ ಸ್ಮಾರಕಕ್ಕೆ ಪುಷ್ಪಗುಚ್ಛವಿರಿಸಿ ನಮನ ಸಲ್ಲಿಸಿದರು.

- ಮಜಾರ್ಗಸ್ ಯುದ್ಧ ಸ್ಮಾರಕಕ್ಕೆ ಪ್ರಧಾನಿ ಮೋದಿ ಭೇಟಿ
- ಫ್ರಾನ್ಸ್‌ನ ಮಾರ್ಸೆಲ್ಲೆ ನಗರದ ಮಜಾರ್ಗಸ್‌ನಲ್ಲಿರುವ ಯುದ್ಧ ಸ್ಮಾರಕ
- ಹುತಾತ್ಮ ಭಾರತೀಯ ಸೈನಿಕರಿಗೆ ಗೌರವ ವಂದನೆ ಸಲ್ಲಿಸಿದ ಪ್ರಧಾನಿ ಮೋದಿ
- ಮಾರ್ಸೆಲ್ಲೆನಲ್ಲಿ ಭಾರತೀಯ ಕಾನ್ಸುಲೇಟ್ ಕಚೇರಿ ಉದ್ಘಾಟಿಸಿದ ಪ್ರಧಾನಿ ಮೋದಿ

ಈ ವೇಳೆ ಮಾತನಾಡಿದ ಪ್ರಧಾನಿ ಮೋದಿ, ಭಾರತದ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಫ್ರಾನ್ಸ್‌ನ ಮಾರ್ಸೆಲ್ಲೆ ನಗರದ ಜನರ ಅಭೂತಪೂರ್ವ ಬೆಂಬಲವನ್ನು ಸ್ಮರಿಸಿದರು. ಸ್ವಾತಂತ್ರ್ಯ ಹೋರಾಟಗಾರ ವೀರ ಸಾವರ್ಕರ್ ಅವರು ಫ್ರಾನ್ಸ್‌ನಲ್ಲಿ ಭೂಗತರಾಗಿದ್ದಾಗ, ಅವರನ್ನು ಬ್ರಿಟಿಷರಿಗೆ ಹಸ್ತಾಂತರಿಸದಿರುವ ನಿರ್ಣಯವನ್ನು ಮಾರ್ಸೆಲ್ಲೆ ನಗರದ ಜನ ಕೈಗೊಂಡಿದ್ದರು. ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸಲ್ಲಿಸಿದ ಈ ಅವಿಸ್ಮರಣೀಯ ಪಾತ್ರಕ್ಕಾಗಿ ಭಾರತವು ಮಾರ್ಸೆಲ್ಲೆ ನಗರದ ನಿವಾಸಿಗಳು ಮತ್ತು ಫ್ರೆಂಚ್ ಹೋರಾಟಗಾರರಿಗೆ ಸದಾ ಚಿರಋಣಿಯಾಗಿರುತ್ತದೆ.. ಎಂದು ಪ್ರಧಾನನಿ ಮೋದಿ ಈ ವೇಳೆ ಅಭಿಮಾನದಿಂದ ನುಡಿದರು.

> **ಮೂರು ದಿನಗಳ ಫ್ರಾನ್ಸ್ ಪ್ರವಾಸದಲ್ಲಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಮಾರ್ಸೆಲ್ಲೆ ನಗರದ ಮಜಾರ್ಗಸ್‌ನಲ್ಲಿ ಮೊದಲನೇ ಮತ್ತು ಎರಡನೇ ಮಹಾಯುದ್ಧದ ಸ್ಮರಣಾರ್ಥ ನಿರ್ಮಿಸಲಾಗಿರುವ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿದರು. ಈ ವೇಳೆ ಮೊದಲನೇ ಮತ್ತು ಎರರಡನೇ ಮಹಾಯುದ್ಧದಲ್ಲಿ ಭಾಗವಹಿಸಿ ಹುತಾತ್ಮರಾದ ಭಾರತೀಯ ಸೈನಿಕರಿಗೆ ಈ ವೇಳೆ ಪ್ರಧಾನಿ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮಾರ್ಕನ್ ಗೌರವ ವಂದನೆ ಸಲ್ಲಿಸಿದರು.**

ಭಾರತ ಮತ್ತು ಫ್ರಾನ್ಸ್ ಅನ್ಯೋನ್ಯ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ಹಂಚಿಕೊಳ್ಳುತ್ತವೆ. ಇತಿಹಾಸದುದ್ದಕ್ಕೂ ಉಭಯ ರಾಷ್ಟ್ರಗಳು ಪರಸ್ಪರ ಸಹಕಾರದ ನೀತಿಯನ್ನು ಅನುಸರಿಸುತ್ತಾ ಬಂದಿವೆ. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಫ್ರೆಂಚ್ ರಾಜಕೀಯ ಹೋರಾಟಗಾರರ ಸಹಕಾರವನ್ನು ನಾವು ಸದಾ ಸ್ಮರಿಸುತ್ತೇವೆ.. ಎಂದು ಪ್ರಧಾನಿ ಮೋದಿ ಹೇಳಿದರು.

ಅದೇ ರೀತಿ ಮೊದಲನೇ ಮತ್ತು ಎರಡನೇ ಮಹಾಯುದ್ಧದ ಸಮಯದಲ್ಲಿ ಬ್ರಿಟಿಷ್ ಭಾರತೀಯ ಸೇನೆಯ ವೀರ ಸೈನಿಕರು, ಫ್ರಾನ್ಸ್‌ನ ರಣಾಂಗಣದಲ್ಲಿ ಹೋರಾಡಿದ್ದರು. ಫ್ರಾನ್ಸ್ ಮಣ್ಣಿನಲ್ಲಿ ಭಾರತೀಯ ಸೈನಿಕರ ರಕ್ತ ಬೆರತಿದೆ. ಫ್ರಾನ್ಸ್ ಕೂಡ ಹುತಾತ್ಮ ಭಾರತೀಯ ಸೈನಿಕರ ಗೌರವಾರ್ಥ ಯುದ್ಧ ಸ್ಮಾರಕವನ್ನು ನಿರ್ಮಿಸಿದೆ. ಇದು ಉಭಯ ದೇಶಗಳು ವೀರ ಸೈನಿಕರಿಗೆ ಸಲ್ಲಿಸುವ ಗೌರವದ ಪ್ರತೀಕವಾಗಿದೆ. ಎಂದು ಪ್ರಧಾನಿ ಮೋದಿ ಹೇಳಿದರು. ಜುಲೈ, 1910ರಲ್ಲಿ ವೀರ ಸಾವರ್ಕರ್ ಅವರನ್ನು ಬಂಧಿಸಿ ಬ್ರಿಟಿಷರು ವಿಚಾರಣೆಗಾಗಿ ಭಾರತಕ್ಕೆ ಕರೆದೊಯ್ಯುತ್ತಿದ್ದರು. ಬ್ರಿಟಿಷ್ ಹಡಗು 'ಮೋರಿಯಾ'ದಿಂದ ಸಮುದ್ರಕ್ಕೆ ಜಿಗಿದು, ಈಜುತ್ತಾ ಮಾರ್ಸೆಲ್ಲೆ ದಡ ಸೇರಿದ ಸಾವರ್ಕರ್ ಅವರನ್ನು ಫ್ರೆಂಚ್ ಅಧಿಕಾರಿಗಳು ಬಂಧಿಸಿ ಮತ್ತೆ ಬ್ರಿಟಿಷ್ ಅಧಿಕಾರಿಗಳಿಗೆ ಹಸ್ತಾಂತರಿಸಿದರು. ಆದರೆ ಮಾರ್ಸೆಲ್ಲೆ ನಿವಾಸಿಗಳು ಸಾವರ್ಕರ್ ಅವರನ್ನು ಹಸ್ತಾಂತರಿಸಿದ ಫ್ರೆಂಚ್ ಅಧಿಕಾರಿಗಳ ನಿರ್ಣಯವನ್ನು ಖಂಡಿಸಿದ್ದ ಇತಿಹಾಸ ನಮ್ಮ ಕಣ್ಣ ಮುಂದಿದೆ.



ಇನ್ನು ಮಜಾರ್ಗಸ್ ಯುದ್ಧ ಸ್ಮಾರಕ ಭೇಟಿಯ ಬಳಿಕ, ಮಾರ್ಸೆಲ್ಲೆ ನಗರದಲ್ಲಿ ನಿರ್ಮಾಣ ಮಾಡಿರುವ ನೂತನ ಭಾರತೀಯ ಕಾನ್ಸುಲೇಟ್ ಜನರಲ್ ಕಚೇರಿಯನ್ನು ಪ್ರಧಾನಿ ಮೋದಿ ಉದ್ಘಾಟಿಸಿದರು.

ಈ ವೇಳೆ ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯೆಲ್ ಮಾರ್ಕನ್ ಅವರು ಪ್ರಧಾನಿ ಮೋದಿ ಅವರಿಗೆ ಸಾಥ್ ನೀಡಿದರು. ನಿನ್ನೆ(ಫೆ.11-ಮಂಗಳವಾರ) ಫ್ರಾನ್ಸ್ ರಾಜಧಾನಿ ಪ್ಯಾರಿಸ್‌ನಲ್ಲಿ ನಡೆದ AI ಆ್ಯಕ್ಷನ್ ಶೃಂಗಸಭೆಯ ಸಹ-ಅಧ್ಯಕ್ಷತೆವಹಿಸಿ ಮಾತನಾಡಿದ್ದ ಪ್ರಧಾನಿ ಮೋದಿ, ಜಗತ್ತು ಈಗ AI ಯುಗದ ಪ್ರವೇಶವನ್ನು ಗುರುತಿಸುತ್ತಿದೆ ಎಂದು ಹೇಳಿದ್ದರು.

## ಬಿಜೆಪಿ ಅಕ್ರಮಗಳ ವಿರುದ್ಧ ಅಣ್ಣಾ ಹಜಾರೆ ಧ್ವನಿ ಎತ್ತುತ್ತಿಲ್ಲ

**ಪುಣೆ, :** ಹಿರಿಯ ಸಾಮಾಜಿಕ ಕಾರ್ಯಕರ್ತ ಅಣ್ಣಾ ಹಜಾರೆ ಅವರು 2014ರ ನಂತರ ಬಿಜೆಪಿ ನೇತೃತ್ವದ ಸರ್ಕಾರಗಳ ಅಕ್ರಮಗಳ ವಿರುದ್ಧ ಧ್ವನಿ ಎತ್ತಲಿಲ್ಲ ಎಂದು ಶಿವಸೇನೆ (ಯುಬಿಟಿ) ಸಂಸದ ಸಂಜಯ್ ರಾವುತ್ ಆರೋಪಿಸಿದ್ದಾರೆ.

ಅರವಿಂದ್ ಕೇಜ್ರಿವಾಲ್ ಅವರು ಹಣದ ಮೇಲೆ ಗಮನಹರಿಸಿದ್ದರಿಂದ ಇತ್ತೀಚಿನ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದಿ ಪಕ್ಷ (ಎಎಪಿ) ಸೋತಿದೆ ಎಂದು ಹಜಾರೆ ಹೇಳಿದ ಕೆಲವು ದಿನಗಳ ನಂತರ ಮಂಗಳವಾರ ರಾವುತ್ ಅವರ ಈ ಕಾಮೆಂಟ್‌ಗಳು ಬಂದಿವೆ.

ಸೇನೆಯ (ಯುಬಿಟಿ) ನಾಯಕರ ಟೀಕೆಗೆ ಹಜಾರೆ ತಿರುಗೇಟು ನೀಡಿದರು, ಕೆಲವರು ತಮ ಮಾನಸಿಕ ಸೆಟಪ್‌ಗೆ ಅನುಗುಣವಾಗಿ ವಿಷಯಗಳನ್ನು ಗ್ರಹಿಸುತ್ತಾರೆ ಎಂದು ಹೇಳಿದರು.

ಅರವಿಂದ್ ಕೇಜ್ರಿವಾಲ್ ಮತ್ತು ಮನೀಶ್ ಸಿಸೋಡಿಯಾ ಮತ್ತಿತರರು ಅಣ್ಣಾ (ಹಜಾರೆ) ಅವರನ್ನು ಮಹಾತರನ್ನಾಗಿ ಮಾಡಿದರು. ಅವರಿಲ್ಲದಿದ್ದರೆ, ಅಣ್ಣಾ ದೆಹಲಿಯನ್ನು ನೋಡಲಾಗಲಿಲ್ಲ ಅಥವಾ ರಾಮ್ ಲೀಲಾ ಮತ್ತು ಜಂತರ್ ಮಂತರ್ (ಭ್ರಷ್ಟಾಚಾರದ ವಿರುದ್ಧ ಪ್ರತಿಭಟಿಸಲು) ಭೇಟಿ ನೀಡಲು ಸಾಧ್ಯವಿರಲಿಲ್ಲ ಎಂದು ಮುಂಬೈನಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ರಾವತ್ ಹೇಳಿದ್ದಾರೆ.



**ಸೇನೆಯ (ಯುಬಿಟಿ) ನಾಯಕರ ಟೀಕೆಗೆ ಹಜಾರೆ ತಿರುಗೇಟು**

> **2014ರ ನಂತರ ಬಿಜೆಪಿ ಆಡಳಿತದಲ್ಲಿರುವ ಕೇಂದ್ರ ಮತ್ತು ಮಹಾರಾಷ್ಟ್ರದಲ್ಲಿ ಅಕ್ರಮಗಳ ಸ್ಫೋಟ ಸಂಭವಿಸಿದೆ, ಆದರೆ ಅಣ್ಣಾ ಒಂದೇ ಒಂದು ಮಾತನ್ನೂ ಆಡಲಿಲ್ಲ ಎಂದು ರಾಜ್ಯಸಭಾ ಸದಸ್ಯ ಹೇಳಿದರು. ಟೀಕೆಗೆ ಪ್ರತಿಕ್ರಿಯಿಸಿದ ಹಜಾರೆ, ನಿರ್ದಿಷ್ಟ ಕನ್ನಡಕವನ್ನು ಧರಿಸಿದ ವ್ಯಕ್ತಿಯು ಜಗತ್ತನ್ನು ಅದಕ್ಕೆ ತಕ್ಕಂತೆ ನೋಡುತ್ತಾನೆ ಎಂದು ಹೇಳಿದರು. ಇತ್ತೀಚಿನ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಎಎಪಿ ಹೀನಾಯವಾಗಿ ಸೋತ ನಂತರ, ಕೇಜ್ರಿವಾಲ್ ಅವರು ಕೇವಲ ಮದ್ಯದ ಮೇಲೆ ಕೇಂದ್ರೀಕರಿಸಿದ್ದಾರೆ ಮತ್ತು ಜನರ ಸೇವೆಯನ್ನು ಮರೆತಿದ್ದಾರೆ ಎಂದು ಹಜಾರೆ ಹೇಳಿದ್ದಾರೆ.**

## ಮಹಾರಾಷ್ಟ್ರ : ನಕ್ಸಲ್ ದಾಳಿಗೆ ಯೋಧ ಹುತಾತ್ಮ



**ಮುಂಬೈ,** ಗಡ್ಚಿರೋಲಿ ಜಿಲ್ಲೆಯಲ್ಲಿ ನಕ್ಸಲೀಯರೊಂದಿಗಿನ ಎನ್‌ಕೌಂಟರ್‌ನಲ್ಲಿ ಹುತಾತರಾದ ಕಾನ್‌ಸ್ಟೆಬಲ್ ಮಹೇಶ್ ನಾಗುಲ್ವಾರ್ ಅವರ ಕುಟುಂಬಕ್ಕೆ ರಾಜ್ಯ ಸರ್ಕಾರ 2 ಕೋಟಿ ರೂ.ಆರ್ಥಿಕ ನೆರವು ನೀಡಲಿದೆ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಘೋಷಿಸಿದ್ದಾರೆ. ನಿನ್ನೆ ಗಡ್‌ಚಿರೋಲಿಯಲ್ಲಿ ನಕ್ಸಲೀಯರೊಂದಿಗಿನ ಗುಂಡಿನ ಚಕಮಕಿಯಲ್ಲಿ ಗಾಯಗೊಂಡಿದ್ದ ವಿಶೇಷ ಕಮಾಂಡೋ ಘಟಕ ಸಿ-60 ನ 39 ವರ್ಷದ ಕಾನ್‌ಸ್ಟೆಬಲ್ ಸಾವನ್ನಪ್ಪಿದ್ದರು.

ನಕ್ಸಲೀಯರ ವಿರುದ್ಧದ ಕಾರ್ಯಾಚರಣೆಯ ವೇಳೆ ಸಿ-60 ಕಮಾಂಡೋ ಘಟಕದ ಸಿಬ್ಬಂದಿ ಗಡ್ಚಿರೋಲಿಯ ಭಮ್ರಗಡ ತಾಲ್ಲೂಕಿನ ಫುಲ್ನಾರ್ ಅರಣ್ಯ ಪ್ರದೇಶದಲ್ಲಿ ಮಾವೋವಾದಿ ಶಿಬಿರವನ್ನು ಯಶಸ್ವಿಯಾಗಿ ಧ್ವಂಸಗೊಳಿಸಿದ್ದಾರೆ ಎಂದು ಗಹ ಖಾತೆಯನ್ನು ಹೊಂದಿರುವ ಫಡ್ನವಿಸ್ ಹೇಳಿದ್ದಾರೆ. ಆದರೆ, ಎನ್‌ಕೌಂಟರ್ ವೇಳೆ ಕಾನ್‌ಸ್ಟೆಬಲ್ ನಾಗುಲ್ವಾರ್‌ಗೆ ಬುಲೆಟ್ ಗಾಯಗಳಾಗಿವೆ. ತಕ್ಷಣ ಅವರನ್ನು ಹೆಲಿಕಾಪ್ಟರ್ ಮೂಲಕ ಹೆಲಿಕಾಪ್ಟರ್ ಮೂಲಕ ಹೊರತರಲಾಯಿತು ಮತ್ತು ಗಡ್ಚಿರೋಲಿಯ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತು ಎಂದು ಫಡ್ನವಿಸ್ ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದರು.

ಎಲ್ಲಾ ಪ್ರಯತ್ನಗಳ ಹೊರತಾಗಿಯೂ, ಅವರು ಹುತಾತರಾದರು ಎಂದು ಸಿಎಂ ಹೇಳಿದರು. ನಕ್ಸಲ್ ಮುಕ್ತ ಭಾರತ ಅಭಿಯಾನದಲ್ಲಿ ಕಾನ್‌ಸ್ಟೆಬಲ್ ನಾಗುಲ್ವಾರ್ ಅವರ ತ್ಯಾಗವನ್ನು ಎಂದಿಗೂ ಮರೆಯಲಾಗದು, ರಾಷ್ಟ್ರಕ್ಕಾಗಿ ಅವರ ಸಮರ್ಪಣೆ ವ್ಯರ್ಥವಾಗುವುದಿಲ್ಲ ಎಂದು ಅವರು ಪ್ರತಿಪಾದಿಸಿದರು. ನಕ್ಸಲ್ ವಿರೋಧಿ ಕಾರ್ಯಾಚರಣೆಯ ನಂತರ ಗಡ್ಚಿರೋಲಿ ಪೊಲೀಸ್ ವರಿಷ್ಠಾಧಿಕಾರಿಯೊಂದಿಗೆ ಮಾತನಾಡಿದ ಫಡ್ನವಿಸ್, ನಾಗುಲ್ವಾರ್ ಅವರ ಕುಟುಂಬಕ್ಕೆ ತಮ ಒಗ್ಗಟ್ಟನ್ನು ವ್ಯಕ್ತಪಡಿಸಿದರು.

ಅವರ ಕುಟುಂಬಕ್ಕೆ ರಾಜ್ಯ ಸರ್ಕಾರವು 2 ಕೋಟಿ ರೂಪಾಯಿ ಆರ್ಥಿಕ ನೆರವು ಮತ್ತು ಇತರ ಸೌಲಭ್ಯಗಳು ಮತ್ತು ಬೆಂಬಲವನ್ನು ನೀಡಲಿದೆ ಎಂದು ಫಡ್ನವಿಸ್ ಹೇಳಿದರು.

## ಕಾಂಗ್ರೆಸ್ ಸಂಸದ ಸಜ್ಜನ್ ಕುಮಾರ್ ಅಪರಾಧಿ ಎಂದು ತೀರ್ಪು

**ನವದೆಹಲಿ:** 1984ರ ನ.1ರಂದು ಸರಸ್ವತಿ ವಿಹಾರ್ ಪ್ರದೇಶದಲ್ಲಿ ತಂದೆ- ಮಗನ ಹತ್ಯೆಗೆ ಸಂಬಂಧಿಸಿದ 1984ರ ಸಿಖ್ ವಿರೋಧಿ ದಂಗೆ ಪ್ರಕರಣದಲ್ಲಿ ಕಾಂಗ್ರೆಸ್‌ನ ಮಾಜಿ ಸಂಸದ ಸಜ್ಜನ್ ಕುಮಾರ್ ಅವರನ್ನು ಇಂದು ರೌಸ್ ಅವೆನ್ಯೂ ನ್ಯಾಯಾಲಯವು ದೋಷಿ ಎಂದು ತೀರ್ಪು ನೀಡಿದೆ. ಈ ಪ್ರಕರಣವನ್ನು ಫೆಬ್ರವರಿ 18ರಂದು ಶಿಕ್ಷೆಯ ಕುರಿತು ವಾದಗಳಿಗೆ ಪಟ್ಟಿ ಮಾಡಲಾಗಿದೆ. ಸಜ್ಜನ್ ಕುಮಾರ್ ಪ್ರಸ್ತುತ ದೆಹಲಿ ಕಂಟೋನ್ಮೆಂಟ್‌ನಲ್ಲಿ ಮತ್ತೊಂದು ಸಿಖ್ ವಿರೋಧಿ ದಂಗೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ.

ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಹತ್ಯೆಗೆ ಸೇಡು ತೀರಿಸಿಕೊಳ್ಳಲು ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ಬೃಹತ್ ಗುಂಪನ್ನು ಸಜ್ಜನ್ ಕುಮಾರ್ ಮುನ್ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ. ದೂರಿನ ಪ್ರಕಾರ, ಕೋಪಗೊಂಡ ಗುಂಪೊಂದು ದೂರುದಾರ ಜಸ್ವಂತ್ ಅವರ ಪತ್ನಿಯ ಮನೆಯ ಮೇಲೆ ದಾಳಿ ಮಾಡಿ, ಅವರ ಪತಿ ಮತ್ತು ಮಗನನ್ನು ಕೊಲೆ ಮಾಡಿತ್ತು. ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ ಶಿಕ್ಷೆಯ ಆದೇಶವನ್ನು ಹೊರಡಿಸಿದರು. ತೀರ್ಪು ಪ್ರಕಟಿಸಲು ಸಜ್ಜನ್ ಕುಮಾರ್ ಅವರನ್ನು ತಿಹಾರ್ ಜೈಲಿನಿಂದ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ನವೆಂಬರ್ 1, 1984ರಂದು ಜಸ್ವಂತ್ ಸಿಂಗ್ ಮತ್ತು ಅವರ ಮಗ ತರುಣದೀಪ್ ಸಿಂಗ್ ಅವರ ಕೊಲೆ ಪ್ರಕರಣದಲ್ಲಿ ಸಜ್ಜನ್ ಅವರಿಗೆ ಶಿಕ್ಷೆ ನೀಡಲಾಯಿತು.

ಸಿಖ್ಖರಿಂದ ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರ ಹತ್ಯೆಗೆ ಸೇಡು ತೀರಿಸಿಕೊಳ್ಳಲು ಸಶಸ್ತ್ರ ಗುಂಪೊಂದು ಸಿಖ್ಖರ ವಿರುದ್ಧ ದೊಡ್ಡ ಪ್ರಮಾಣದ ಬೆಂಕಿ ಹಚ್ಚುವಿಕೆ ಮತ್ತು ಆಸ್ತಿಪಾಸ್ತಿಗಳ ನಾಶಕ್ಕೆ ಮುಂದಾಯಿತು. ಗುಂಪೊಂದು ಜಸ್ವಂತ್ ಸಿಂಗ್ ಮತ್ತು ಅವರ ಮಗನನ್ನು ಕೊಂದು ಅವರ ಮನೆಯನ್ನು ಲೂಟಿ ಮಾಡಿತು. ನಂತರ ಅವರು ಮನೆಯನ್ನು ಸುಟ್ಟುಹಾಕಿದ್ದರು. ಸಜ್ಜನ್ ಕುಮಾರ್ ಅವರೇ ಈ ಗುಂಪಿನ ನೇತೃತ್ವ ವಹಿಸಿ, ಕೊಲೆಯ ಮುಂದಾಳತ್ವ ವಹಿಸಿದ್ದರು ಎಂದು ನ್ಯಾಯಾಲಯದ ಆದೇಶದಲ್ಲಿ ಹೇಳಲಾಗಿದೆ.

ಇದಕ್ಕೆ ಸಾಕಷ್ಟು ಪುರಾವೆಗಳು ಕೂಡ ಸಿಕ್ಕಿವೆ.1984ರ ನವೆಂಬರ್ 1ರಂದು ಪ್ರತ್ಯಕ್ಷದರ್ಶಿಗಳ ಪ್ರಕಾರ, ಆಗಿನ ಪ್ರಧಾನಿ ಕಾಂಗ್ರೇಸ್‌ನ ಇಂದಿರಾ ಗಾಂಧಿಯವರ ಹತ್ಯೆಗೆ ಪ್ರತೀಕಾರ ತೀರಿಸಿಕೊಳ್ಳಲು ಸಿಖ್ ಸಮುದಾಯದ ಮೇಲೆ ದಾಳಿ ಮಾಡಲು ಸಜ್ಜನ್ ಕುಮಾರ್ ಜನರ ಗುಂಪನ್ನು ಪ್ರಚೋದಿಸಿದ್ದರು. ಅದಕ್ಕೂ ಒಂದು ದಿನ ಮೊದಲು ಇಂದಿರಾ ಗಾಂಧಿಯವರ ಮೇಲೆ ಸಿಖ್ ಅಂಗರಕ್ಷಕರು ಗುಂಡು ಹಾರಿಸಿ ಕೊಂದಿದ್ದರು.



**1984ರ ಸಿಖ್ ವಿರೋಧಿ ದಂಗೆ ಪ್ರಕರಣ**


### ಸಜ್ಜನ್ ಕುಮಾರ್ ಯಾರು?

**ಸಜ್ಜನ್ ಕುಮಾರ್ ಕಾಂಗ್ರೆಸ್ ಪಕ್ಷದ ಮಾಜಿ ಸಂಸದರಾಗಿದ್ದು, 1984ರ ಸಿಖ್ ದಂಗೆ ಪ್ರಕರಣದಲ್ಲಿ 2018ರಲ್ಲಿ ಜೀವಾವಧಿ ಶಿಕ್ಷೆ ವಿಧಿಸಲಾಯಿತು. 1977ರಲ್ಲಿ ದೆಹಲಿ ಮಹಾನಗರ ಪಾಲಿಕೆಗೆ ಮೊದಲು ಆಯ್ಕೆಯಾದ ಸಜ್ಜನ್ ಕುಮಾರ್ ಅದೇ ವರ್ಷ ದೆಹಲಿ ಕೌನ್ಸಿಲರ್ ಆಗಿ ಪ್ರಮಾಣವಚನ ಸ್ವೀಕರಿಸಿದರು. ದೆಹಲಿಯ ಸಕ್ರಿಯ ರಾಜಕಾರಣಿಯಾಗಿದ್ದ ಅವರು 2004ರ ಲೋಕಸಭಾ ಚುನಾವಣೆಯಲ್ಲಿ ದೆಹಲಿಯಿಂದ ಗೆದ್ದರು.**

## ದೇವಾಲಯದ ಗರ್ಭಗುಡಿಗೊಳಗೆ ಮಾಂಸ ಪತ್ತೆ

**ಹೈದರಾಬಾದ್:** ದೇವಾಲಯವೊಂದರ ಗರ್ಭಗುಡಿಯಲ್ಲಿ ಮಾಂಸದ ತುಂಡುಗಳು ಪತ್ತೆಯಾಗಿರುವ ಘಟನೆ ಹೈದರಾಬಾದ್‌ನಲ್ಲಿ ನಡೆದಿದೆ. ದೇವಾಲಯದ ಆವರಣದಲ್ಲಿ ಉದ್ವಿಗ್ನತೆ ಉಮಟಾಗಿದೆ. ದೇವಾಲಯದ ಆವರಣದಲ್ಲಿದ್ದ ಭಕ್ತರು ಘಟನೆಯ ಬಗ್ಗೆ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಿದ್ದು, ಪೊಲೀಸರು ಸ್ಥಳಕ್ಕೆ ಆಗಮಿಸಿ ಪರಿಸ್ಥಿತಿಯನ್ನು ಅವಲೋಕಿಸಿದ್ದಾರೆ.

ಟಪ್ಪಾಚಬುತ್ರ ಪ್ರದೇಶದ ಜೀರಾ ಹನುಮಾನ್ ದೇವಾಲಯದ ಅಧಿಕಾರಿಗಳ ಪ್ರಕಾರ, ಅರ್ಚಕರು ಮಾಂಸದ ತುಂಡುಗಳನ್ನು ನೋಡಿ ಸಮಿತಿ ಸದಸ್ಯರಿಗೆ ಮಾಹಿತಿ ನೀಡಿದರು. ಸುದ್ದಿ ಹರಡಿದ ತಕ್ಷಣ, ದೇವಾಲಯದ ಹೊರಗೆ ಜನಸಮೂಹ ಜಮಾಯಿಸಿತು.



**ಸುದ್ದಿ ಹರಡುತ್ತಿದ್ದಂತೆ, ಹಿಂದೂ ಸಂಘಟನೆಗಳು ಮತ್ತು ಬಿಜೆಪಿ ಕಾರ್ಯಕರ್ತರು ಸೇರಿದಂತೆ ಹೆಚ್ಚಿನ ಸಂಖ್ಯೆಯ ಜನರು ದೇವಾಲಯದಲ್ಲಿ ಜಮಾಯಿಸಿದರು. ದೇವಾಲಯದಲ್ಲಿ ಮಾಂಸ ಪತ್ತೆಯಾಗಿರುವ ಬಗ್ಗೆ ಮಾಹಿತಿ ಬಂದಿದೆ ಎಂದು ಡಿಸಿಪಿ ಚಂದ್ರ ಮೋಹನ್ ತಿಳಿಸಿದ್ದಾರೆ. ಪೊಲೀಸರು ತನಿಖೆ ಆರಂಭಿಸಿದ್ದಾರೆ. ನಾವು ಸ್ಥಳಕ್ಕೆ ತಲುಪಿದಾಗ, ದೇವಾಲಯದ ಬಾಗಿಲುಗಳು ಮುಚ್ಚಿರುವುದನ್ನು ಕಂಡೆವು. ಯಾವುದೋ ಪ್ರಾಣಿ ಮಾಂಸವನ್ನು ಒಳಗೆ ತಂದಿರಬಹುದು ಎಂದು ನಾವು ಅನುಮಾನಿಸುತ್ತೇವೆ. ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.**

ಬುಧವಾರ ಬೆಳಿಗ್ಗೆ ದೇವಾಲಯದ ಅರ್ಚಕರು ದೇವಸ್ಥಾನಕ್ಕೆ ಬಂದಾಗ, ಶಿವಲಿಂಗದ ಹಿಂದೆ ಮಾಂಸವನ್ನು ಇಟ್ಟಿರುವುದು ಕಂಡುಬಂದಿದೆ.

ಅದು ಹನುಮಾನ್ ಮಂದಿರವಾಗಿದ್ದು ಹಲವು ದೇವರುಗಳನ್ನು ಪ್ರತಿಷ್ಠಾಪಿಸಿ ಪೂಜಿಸಲಾಗುತ್ತಿದೆ.

## ಅಯೋಧ್ಯೆ ರಾಮ ಮಂದಿರದ ಪ್ರಧಾನ ಅರ್ಚಕ ಮಹಂತ್ ಸತ್ಯೇಂದ್ರ ದಾಸ್ ನಿಧನ

**ಲಕ್ನೋ,** ಅಯೋಧ್ಯೆಯ ರಾಮಜನಭೂಮಿ ದೇವಸ್ಥಾನದ ಮುಖ್ಯ ಅರ್ಚಕ ಮಹಂತ್ ಸತ್ಯೇಂದ್ರ ದಾಸ್ (85) ಅವರು ನಿಧನರಾಗಿದ್ದಾರೆ. ಬ್ರೈನ್ ಸ್ಟ್ರೋಕ್‌ಗೆ ಒಳಗಾದ ಅವರು ಸಂಜಯ್ ಗಾಂಧಿ ಪೋಸ್ಟ್ ಗ್ರಾಜುಯೇಟ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ವಿಫಲವಾಗಿ ಕೊನೆಯುಸಿರೆಳೆದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ತಮ 20ನೇ ವಯಸ್ಸಿನಿಂದಲೂ ದೇವಾಲಯದ ಅರ್ಚಕರಾಗಿ ಸೇವೆ ಸಲ್ಲಿಸಿದರು. ನಿರ್ವಾಣಿ ಅಖಾಡದಿಂದ ಬಂದ ದಾಸ್, ಅಯೋಧ್ಯೆಯ ಅತ್ಯಂತ ಸುಲಭವಾಗಿ ಪ್ರವೇಶಿಸಬಹುದಾದ ಸಂತರಲ್ಲಿ ಒಬ್ಬರಾಗಿದ್ದರು ಮತ್ತು ಅಯೋಧ್ಯೆ ಮತ್ತು ರಾಮ ಮಂದಿರದ ಬೆಳವಣಿಗೆಗಳ ಬಗ್ಗೆ ಮಾಹಿತಿ ಬಯಸುತ್ತಿರುವ ದೇಶಾದ್ಯಂತದ ಅನೇಕ ಮಾಧ್ಯಮ ಪ್ರತಿನಿಧಿಗಳಿಗೆ ಹತ್ತಿರವಾಗಿದ್ದರು. ಡಿಸೆಂಬರ್ 6, 1992 ರಂದು ಬಾಬರಿ ಮಸೀದಿಯನ್ನು ಕೆಡವಿದಾಗಲೂ ಮುಖ್ಯ ಅರ್ಚಕರಾಗಿ ಕೆಲಸ ಮಾಡುತ್ತಿದ್ದರು. ತಾತ್ಕಾಲಿಕ ಟೆಂಟ್ ಅಡಿಯಲ್ಲಿ ರಾಮ್ ಲಲ್ಲಾ ವಿಗ್ರಹಕ್ಕೆ ಪೂಜೆ ಸಲ್ಲಿಸುತ್ತಿದ್ದರು. ಸಿಎಂ ಯೋಗಿ ಆಧಿತ್ಯ ನಾಥ್ ,ವಿಶ್ವ ಹಿಂದೂ ಪರಿಷತ್ತಿನ ಅಯೋಧ್ಯೆ ಮೂಲದ ವಕ್ತಾರ ಶರದ್ ಶರ್ಮಾ ದಾಸ್ ಸೇರಿ ಹಲವಾರು ಗಣ್ಯರು ಸಂತಾಪ ಸೂಚಿಸಿದ್ದಾರೆ.

# ದೇವದೂಷಣೆ ಆರೋಪದಡಿ ಪಾಕಿಸ್ತಾನ ನನ್ನನ್ನು ಗಲ್ಲಿಗೇರಿಸಲಿತ್ತು

## ಇತ್ತೀಚೆಗೆ ಪಾಕಿಸ್ತಾನದಲ್ಲಿ ತಮ್ಮ ಮೇಲೆ ದೇವದೂಷಣೆ ಆರೋಪದಡಿ ಬಹುತೇಕ ಮರಣದಂಡನೆ ವಿಧಿಸಲಾಗಿತ್ತು

**ವಾಷಿಂಗ್ಟನ್:** ದೇವದೂಷಣೆ ಆರೋಪದಡಿ ಪಾಕಿಸ್ತಾನ ಸರ್ಕಾರವು ತಮಗೆ ಮರಣದಂಡನೆ ಶಿಕ್ಷೆ ವಿಧಿಸುವ ಸಾಧ್ಯತೆ ಇತ್ತು ಎಂದು ಫೇಸ್‌ಬುಕ್‌ನ ಪೇರೆಂಟ್ ಕಂಪನಿ ಮೆಟಾ ಸಿಇಒ ಮಾರ್ಕ್ ಜುಕರ್‌ಬರ್ಗ್ ಶಾಕಿಂಗ್ ಹೇಳಿಕೆ ನೀಡಿದ್ದಾರೆ.

ಅಮೆರಿಕದ ಪ್ರಸಿದ್ಧ ಪಾಡ್‌ಕಾಸ್ಟರ್ ಜೋ ರೋಗನ್ ಅವರ ಪಾಡ್‌ಕ್ಯಾಸ್ಟ್‌ನಲ್ಲಿ ಮಾತನಾಡುತ್ತಾ, ಇತ್ತೀಚೆಗೆ ಪಾಕಿಸ್ತಾನದಲ್ಲಿ ತಮ್ಮ ಮೇಲೆ ದೇವದೂಷಣೆ ಆರೋಪದಡಿ ಬಹುತೇಕ ಮರಣದಂಡನೆ ವಿಧಿಸಲಾಗಿತ್ತು. ಎಂದು ಮಾರ್ಕ್ ಜುಕರ್‌ಬರ್ಗ್ ಹೇಳಿದ್ದಾರೆ.

ಫೇಸ್‌ಬುಕ್‌ನಲ್ಲಿ ದೇವದೂಷಣೆ ಕಂಟೆಂಟ್‌ಗಳಿಗೆ ಪ್ರಾಧಾನ್ಯತೆ ನೀಡಲಾಗುತ್ತಿದೆ ಎಂಬ ಆರೋಪ ಪಾಕಿಸ್ತಾನದಲ್ಲಿ ಕೇಳಿಬಂದಿತ್ತು. ಇದಕ್ಕಾಗಿ ತಮ್ಮನ್ನು ಮರಣದಂಡನೆ ಶಿಕ್ಷೆಗೆ ಗುರಿ ಮಾಡಲು ಪಾಕಿಸ್ತಾನ ಸರ್ಕಾರ ಬಹುತೇಕ ನಿರ್ಧಾರ ಮಾಡಿತ್ತು. ಎಂದು ಮಾರ್ಕ್ ಜುಕರ್‌ಬರ್ಗ್ ಹೇಳಿದ್ದಾರೆ. ಸ್ಥಳೀಯ ನಿಯಮಗಳು ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಗೌರವಿಸುವುದರ ಜೊತೆಗೆ, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಸಮತೋಲನಗೊಳಿಸಲು ಮೆಟಾ ಯಾವಾಗಲೂ ತನ್ನ ಬದ್ಧತೆಯನ್ನು ಪ್ರದರ್ಶಿಸುತ್ತದೆ. ಆದರೆ ಕೋಮು ಸೂಕ್ಷ್ಮ ವಿಷಯಗಳಲ್ಲಿ ಕೆಲವೊಮ್ಮೆ ನಾವು ಭಾರೀ ಆಕ್ರೋಶವನ್ನು ಎದುರಿಸಬೇಕಾಗುತ್ತದೆ. ಎಂದು ಮಾರ್ಕ್ ಜುಕರ್ ಬರ್ಗ್ ಹೇಳಿದ್ದಾರೆ. ವಿವಿಧ ದೇಶಗಳಲ್ಲಿ ನಾವು ಒಪ್ಪದ ಕಾನೂನುಗಳಿವೆ. ಉದಾಹರಣೆಗೆ, ಫೇಸ್‌ಬುಕ್‌ನಲ್ಲಿ ಯಾರೋ ಪ್ರವಾದಿ ಮೊಹಮ್ಮದ್ ಅವರ ಚಿತ್ರವನ್ನು ಹಾಕಿದ್ದರಿಂದ ಪಾಕಿಸ್ತಾನದಲ್ಲಿ ನನಗೆ ಮರಣದಂಡನೆ ವಿಧಿಸಲು ಪ್ರಯತ್ನಿಸಲಾಗಿತ್ತು. ಇದು ನಮ್ಮ ಸಂಸ್ಕೃತಿ ಮತ್ತು ನಾವು ನಂಬುವ ದೇವರ ಮೇಲಿನ ದೇವದೂಷಣೆ ಎಂದು ಕೆಲವರು ನನ್ನ ವಿರುದ್ಧ ಮೊಕದ್ದಮೆ ಹೂಡಿದರು. ಪಾಕಿಸ್ತಾನದ ನ್ಯಾಯಾಲಯವು ಕ್ರಿಮಿನಲ್ ವಿಚಾರಣೆಯ ಪ್ರಕ್ರಿಯೆಯನ್ನು ಆರಂಭಿಸಿತು. ಆದರೆ ಅಂತಿಮವಾಗಿ ವಿಚಾರಣೆ ಏನಾಯಿತು ಎಂಬುದು ತಮಗೆ ತಿಳಿದಿಲ್ಲ. ಎಂದು ಮೆಟಾ ಸಿಇಒ ಸ್ಪಷ್ಟಪಡಿಸಿದ್ದಾರೆ.

> **ಪಾಕಿಸ್ತಾನದಲ್ಲಿ ಮೆಟಾ ಕಂಪನಿ ಎದುರಿಸುತ್ತಿರುವ ಕಾನೂನು ಸವಾಲುಗಳು ಕಳವಳಕರಿಯಾಗಿದೆ. ಪಾಕಿಸ್ತಾನದ ಕಠಿಣ ದೇವದೂಷಣೆ ಕಾನೂನುಗಳನ್ನು ಉಲ್ಲಂಘಿಸುವ ವಿಷಯವನ್ನು ಫೇಸ್‌ಬುಕ್ ಹೊಂದಿದೆ ಎಂದು ಆರೋಪಿಸಲಾಗಿದೆ. ಈ ಕಾನೂನುಗಳು ಧಾರ್ಮಿಕ ನಂಬಿಕೆಗಳಿಗೆ ಆಕ್ಷೇಪಾರ್ಹವೆಂದು ಪರಿಗಣಿಸಲಾದ ಕೃತ್ಯಗಳಿಗೆ ಪಾಕಿಸ್ತಾನವು ಕಠಿಣ ಶಿಕ್ಷೆ ವಿಧಿಸುತ್ತದೆ. ಇಂತದ್ದೇ ಗಂಡಾಂತರ ನನಗೂ ಒದಗಿ ಬಂದಿತ್ತು. ಎಂದು ಪಾಡ್‌ಕಾಸ್ಟ್‌ನಲ್ಲಿ ಜುಕರ್‌ಬರ್ಗ್ ಮಾಹಿತಿ ನೀಡಿದ್ದಾರೆ.**

**ಜುಕರ್ ಬರ್ಗ್ ಶಾಕಿಂಗ್!**

ನನ್ನ ವಿರುದ್ಧದ ವಿಚಾರಣೆ ಬಗ್ಗೆ ನಾನು ಆರಂಭದಲ್ಲಿ ಆತಂಕಿತನಾಗಿದ್ದೆ. ಆದರೆ ಜೀವನದಲ್ಲಿ ನಾನೆಂದೂ ಪಾಕಿಸ್ತಾನಕ್ಕೆ ಹೋಗುವುದಿಲ್ಲ ಎಂಬುದು ನನಗೆ ಖಚಿತವಾಗಿ ಗೊತ್ತಿದೆ. ಹೀಗಾಗಿ ನಾನು ಈ ವಿಚಾರಣೆ ಬಗ್ಗೆ ಹೆಚ್ಚು ತಲೆಕೆಡಿಸಕೊಂಡಿಲ್ಲ. ಎಂದು ಮಾರ್ಕ್ ಜುಕರ್‌ಬರ್ಗ್ ಪಾಡ್‌ಕಾಸ್ಟ್‌ನಲ್ಲಿ ಹೇಳಿದ್ದಾರೆ. ಕಠಿಣ ವಿಷಯ ನಿಯಂತ್ರಣ ನಿಯಮಗಳಿಂದ ತಂತ್ರಜ್ಞಾನ ಕಂಪನಿಗಳ ಮೇಲೆ ಒತ್ತಡ ಹೆಚ್ಚುತ್ತಿದೆ.

ಪ್ರಪಂಚದಾದ್ಯಂತ ನಮ್ಮ ಅಭಿವ್ಯಕ್ತಿ ಸ್ವಾತಂತ್ರ್ಯದ ಮೌಲ್ಯಗಳ ವಿರುದ್ಧ ಹೋಗುವ, ವಿಭಿನ್ನ ಮೌಲ್ಯಗಳನ್ನು ಹೊಂದಿರುವ ಹಲವು ದೇಶಗಳಿವೆ. ಈ ದೇಶಗಳು ಹೆಚ್ಚಿನ ವಿಷಯಗಳನ್ನು ನಿಗ್ರಹಿಸಲು ಮತ್ತು ನಿಷೇಧಿಸಲು ಬಯಸುತ್ತವೆ.

ಆ ದೇಶದ ಸರ್ಕಾರಗಳು ವಿಚಾರಗಳ ಅಭಿವ್ಯಕ್ತಪಡಿಸುವ ವ್ಯಕ್ತಿಯನ್ನು ಜೈಲಿಗೆ ಹಾಕುವ ಬೆದರಿಕೆಯೊಡ್ಡುತ್ತವೆ. ಇಂತಹ ಸವಾಲುಗಳನ್ನು ನಾವು ಎದುರಿಸಬೇಕಾಗುತ್ತದೆ.. ಎಂದು ಫೇಸ್‌ಬುಕ್ ಸಂಸ್ಥಾಪಕ ಅಭಿಪ್ರಾಯಪಟ್ಟಿದ್ದಾರೆ. ಅಮೆರಿಕ ಸರ್ಕಾರವು ವಿದೇಶಗಳಲ್ಲಿ ಅಮೆರಿಕನ್ ತಂತ್ರಜ್ಞಾನ ಕಂಪನಿಗಳನ್ನು ರಕ್ಷಿಸಲು ಸೂಕ್ತ ನಿಯಮಗಳನ್ನು ಜಾರಿಗ ತರಬೇಕು. ಕುರಿತು ಅಮೆರಿಕ ಸರ್ಕಾರ ಗಂಭೀರವಾಗಿ ಚಿಂತನೆ ನಡೆಸಬೇಕು.. ಎಂದು ಇದೇ ವೇಳೆ ಮಾರ್ಕ್ ಜುಕರ್‌ಬರ್ಗ್ ಆಗ್ರಹಿಸಿದ್ದಾರೆ.

- ಮಾರ್ಕ್ ಜುಕರ್‌ಬರ್ಗ್‌ಗೆ ಗಲ್ಲುಶಿಕ್ಷೆ ವಿಧಿಸಲು ಮುಂದಾಗಿದ್ದ ಪಾಕಿಸ್ತಾನ
- ದೇವದೂಷಣೆ ಆರೋಪದ ಮೇಲೆ ಜುಕರ್‌ಬರ್ಗ್‌ಗೆ ಗಲ್ಲುಶಿಕ್ಷೆ ವಿಧಿಸಲಿದ್ದ ಪಾಕ್
- ಜೋ ರೋಗನ್ ಪಾಡ್‌ಕಾಸ್ಟ್‌ನಲ್ಲಿ ಮಾರ್ಕ್ ಜುಕರ್‌ಬರ್ಗ್ ಶಾಕಿಂಗ್ ಹೇಳಿಕೆ
- ಪಾಕ್ ಆರೋಪಗಳ ಬಗ್ಗೆ ತಲೆಕೆಡಿಸಿಕೊಂಡಿಲ್ಲ ಎಂದಿದ್ದೇಕೆ ಜುಕರ್‌ಬರ್ಗ್



## ಮಿನಿ ನ್ಯೂಸ್

### ಮಿಜೋರಾಂ : 173 ಕೋಟಿ ಮೌಲ್ಯದ ಡ್ರಗ್ಸ್ ಸೀಜ್

**ಐಜ್ವಾಲ್,** (ಪಿಟಿಐ) ಮಿಜೋರಾಂನ ಚಂಫೈ ಜಿಲ್ಲೆಯ ಭಾರತ-ಮ್ಯಾನ್ಮಾರ್ ಗಡಿಯಲ್ಲಿ 173.73 ಕೋಟಿ ರೂಪಾಯಿ ಮೌಲ್ಯದ ಮೆಥಾಂಫೆಟಮೈನ್ ಮಾತ್ರೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಸ್ಸಾಂ ರೈಫಲ್ಸ್ ಹೇಳಿಕೆಯಲ್ಲಿ ತಿಳಿಸಿದೆ. ಬಂದ ಖಚಿತ ಸುಳಿವಿನ ಮೇರೆಗೆ ಅಸ್ಸಾಂ ರೈಫಲ್ಸ್ ಮತ್ತು ಮಿಜೋರಾಂ ಪೊಲೀಸರು ಜಂಟಿಯಾಗಿ ಫೆಬ್ರವರಿ 9 ರಂದು ಝೋಖಾವ್ತಾರ್‌ನ ಗಡಿ ದಾಟುವ ಸ್ಥಳದಲ್ಲಿ ಕೋಟ್ಯಂತರ ಮೌಲ್ಯದ ಡ್ರಗ್ಸ ವಶಪಡಿಸಿಕೊಂಡರು ಎಂದು ಅದು ಹೇಳಿದೆ. ಜಂಟಿ ತಂಡವು ಅಕ್ರಮ ಸಾಗಣೆಯನ್ನು ಸಾಗಿಸುತ್ತಿರುವ ಶಂಕಿತ ವ್ಯಕ್ತಿಗಳನ್ನು ಗುರುತಿಸಿ ಅವರನ್ನು ತಡೆದಿದೆ ಎಂದು ಹೇಳಿಕೆಯಲ್ಲಿ ಮಾಹಿತಿ ನೀಡಲಾಗಿದೆ.ದಾಳಿ ವೇಳೆ ಡ್ರಗ್ಸ್ ಸಾಗಿಸುತ್ತಿದ್ದವರು ಸರಕುಗಳನ್ನು ಸ್ಥಳದಲ್ಲೇ ಬಿಟ್ಟು ಓಡಿಹೋದರು ಎನ್ನಲಾಗಿದೆ. 173.73 ಮೌಲ್ಯದ ಸರಕುಗಳನ್ನು ಹೆಚ್ಚಿನ ತನಿಖೆ ಮತ್ತು ಕಾನೂನು ಪ್ರಕ್ರಿಯೆಗಳಿಗಾಗಿ ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

### ಮಹಿಳಾ ಶೌಚಾಲಯಕ್ಕೆ ನುಗ್ಗಿದ ವ್ಯಕ್ತಿ, ಹಿಡಿಯಲು ಹೋದವರ ಮೇಲೆ ಗುಂಡಿನ ದಾಳಿ

**ಬಿಹಾರ:** ಆಸ್ಪತ್ರೆಯಲ್ಲಿ ಮಹಿಳಾ ಶೌಚಾಲಯಕ್ಕೆ ವ್ಯಕ್ತಿಯೊಬ್ಬ ನುಗ್ಗಿರುವ ಘಟನೆ ಬಿಹಾರದಲ್ಲಿ ನಡೆದಿದೆ. ಆತ ಮಹಿಳಾ ಶೌಚಾಲಯದೊಳಗೆ ಪ್ರವೇಶಿಸಿದ್ದ ಆತನನ್ನು ಹಿಡಿಯಲು ಹೋದ ವ್ಯಕ್ತಿಯ ಮೇಲೆ ಗುಂಡಿನ ದಾಳಿ ನಡೆಸಿದ್ದಾನೆ. ರೋಗಿಯೊಬ್ಬನ ಮೇಲೆ ಹಲ್ಲೆ ನಡೆಸಿದ್ದಾನೆ. ಅಪರಾಧಿ ಸದ್ದಾಂ ಹುಸೇನ್ ನ್ಯಾಯಾಲಯದಲ್ಲಿ ಶರಣಾಜ ಸ್ವಲ್ಪ ಹೊತ್ತಲ್ಲೇ ಘಟನೆ ನಡೆದಿದೆ. ಪೊಲೀಸರು ವೈದ್ಯಕೀಯ ತಪಾಸಣೆಗೆಂದು ಆಸ್ಪತ್ರೆಗೆ ಸದ್ದಾಂನನ್ನು ಕರೆತಂದಿದ್ದರು. ಗುಂಡು ಹಾರಿಸಿದ ವ್ಯಕ್ತಿ ಹುಸೇನ್‌ನನ್ನು ಕೊಲ್ಲಲು ಆಸ್ಪತ್ರೆಗೆ ಬಂದಿರಬಹುದು ಎಂದು ಶಂಕಿಸಲಾಗಿದೆ. ಆಸ್ಪತ್ರೆಯ ಶೌಚಾಲಯದಲ್ಲಿ ಗುಂಡು ಹಾರಿಸಿದ ವ್ಯಕ್ತಿಯನ್ನು ಅರ್ಬಾಜ್ ಆಲಂ ಎಂದು ಗುರುತಿಸಲಾಗಿದೆ. ಆಲಂ ಶೌಚಾಲಯದ ಒಳಗೆ ಹೋಗುವ ಮೊದಲು ಹ್ಯಾಂಡ್‌ಗನ್ ಹಿಡಿದುಕೊಂಡು ಕಾರಿಡಾರ್‌ನಲ್ಲಿ ಬಹಿರಂಗವಾಗಿ ನಡೆದಿದ್ದ. ಆಲಂ ತಪ್ಪಿಸಿಕೊಳ್ಳದಂತೆ ತನ್ನ ಕೋಲಿನಿಂದ ಆಲಂಗೆ ಹೊಡೆದಿದ್ದಾರೆ. ಅವರು ಆಲಂನನ್ನು ಬೆನ್ನಟ್ಟುತ್ತಿದ್ದಂತೆ ಹೇಗೋ ತಪ್ಪಿಸಿಕೊಂಡು ಆಸ್ಪತ್ರೆ ಹೊರಭಾಗಕ್ಕೆ ಬಂದಿದ್ದಾನೆ. ಆಗ ಹಲವು ಬಾರಿ ಗುಂಡಿನ ದಾಳಿ ನಡೆಸಿದ್ದಾನೆ. ಅದು ತಪ್ಪಿ ಸ್ಥಳೀಯ ನಿವಾಸಿ ಅಲೋಕ್ ತಿವಾರಿ ಎಂಬ ರೋಗಿಗೆ ತಗುಲಿತು. ತಿವಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಆಸ್ಪತ್ರೆಯ ದ್ವಾರದಲ್ಲಿ ಇದ್ದ ಇತರ ಸಿಬ್ಬಂದಿ ಕೂಡ ಬೆನ್ನಟ್ಟಲು ಪ್ರಾರಂಭಿಸಿದರು ಮತ್ತು ಅವರು ಒಟ್ಟಾಗಿ ಆರೋಪಿಯನ್ನು ಹಿಡಿಯುವಲ್ಲಿ ಯಶಸ್ವಿಯಾದರು. ಶೀಘ್ರದಲ್ಲೇ ಆಲಂನನ್ನು ಅವರಿಗೆ ಹಸ್ತಾಂತರಿಸಲಾಯಿತು ಎಂದು ಪೊಲೀಸರು ಹೇಳಿದರು; ಆತನಿಂದ ಎರಡು ಗುಂಡುಗಳು, ಒಂದು ಮೋಟಾರ್ ಸೈಕಲ್ ವಶಪಡಿಸಿಕೊಳ್ಳಲಾಗಿದೆ. ಅವರು ಕುಡಿದ ಮತ್ತಿನಲ್ಲಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

### ವಿಮಾನದ ಮೇಲೆ ದಾಳಿ ಮಾಡುವುದಾಗಿ ಉಗ್ರರ ಎಚ್ಚರಿಕೆ



**ಮುಂಬೈ:** ಪ್ರಧಾನಿ ಮೋದಿ ಇರುವ ವಿಮಾನದ ಮೇಲೆ ದಾಳಿ ನಡೆಸುವುದಾಗಿ ಉಗ್ರರು ಬೆದರಿಕೆ ಹಾಕಿದ್ದಾರೆ ಎಂದು ಮುಂಬೈ ಪೊಲೀಸರು ಮಾಹಿತಿ ನೀಡಿದ್ದಾರೆ. ಮೋದಿ ಫ್ರಾನ್ಸ್, ಅಮೆರಿಕ ಪ್ರವಾಸಕ್ಕೆ ತೆರಳುವ ಮುನ್ನ ಈ ಬೆದರಿಕೆ ಬಂದಿತ್ತು. ಪ್ರಧಾನಿ ಮೋದಿ ವಿದೇಶಕ್ಕೆ ಅಧಿಕೃತ ಭೇಟಿಗೆ ತೆರಳುತ್ತಿರುವಾಗ ಅವರ ವಿಮಾನದ ಮೇಲೆ ಭಯೋತ್ಪಾದಕರು ದಾಳಿ ಮಾಡಬಹುದು ಎಂಬ ಎಚ್ಚರಿಕೆಯ ಕರೆ ಮುಂಬೈ ಪೊಲೀಸರಿಗೆ ಬಂದಿತ್ತು. ಫೆಬ್ರವರಿ 11 ರಂದು ಮುಂಬೈ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಬಂದಿದ್ದು, ಪ್ರಧಾನಿ ಮೋದಿ ವಿದೇಶಕ್ಕೆ ಅಧಿಕೃತ ಭೇಟಿಗೆ ತೆರಳುತ್ತಿರುವಾಗ ಅವರ ವಿಮಾನದ ಮೇಲೆ ಭಯೋತ್ಪಾದಕರು ದಾಳಿ ಮಾಡಬಹುದು ಎಂದು ಎಚ್ಚರಿಸಲಾಗಿದೆ. ಮಾಹಿತಿಯ ಗಂಭೀರ ಸ್ವರೂಪವನ್ನು ಪರಿಗಣಿಸಿ, ಪೊಲೀಸರು ಇತರ ಸಂಸ್ಥೆಗಳಿಗೆ ಮಾಹಿತಿ ನೀಡಿ ತನಿಖೆ ಆರಂಭಿಸಿದ್ದರು ಎಂದು ಎಎನ್?ಐ ವರದಿ ಮಾಡಿದೆ.

ಪ್ರಧಾನಿ ಮೋದಿ ಅವರ ವಿಮಾನದ ಮೇಲೆ ಭಯೋತ್ಪಾದಕ ದಾಳಿಯ ಬೆದರಿಕೆ ಬಂದ ನಂತರ, ಭದ್ರತಾ ಪಡೆಗಳ ತಂಡಗಳು ಈ ವಿಷಯದ ಬಗ್ಗೆ ತನಿಖೆ ನಡೆಸಲು ಪ್ರಾರಂಭಿಸಿದವು. ಕರೆ ಮಾಡುತ್ತಿರುವ ವ್ಯಕ್ತಿ ಯಾರೆಂದು ಕಂಡುಹಿಡಿಯಲು ಪ್ರಯತ್ನಗಳು ನಡೆಯುತ್ತಿವೆ.

ಪ್ರಧಾನಿ ಮೋದಿ ಫ್ರಾನ್ಸ್ ಮತ್ತು ಅಮೆರಿಕ ಪ್ರವಾಸದಲ್ಲಿದ್ದಾರೆ. ಫೆಬ್ರವರಿ 12 ರಿಂದ 14 ರವರೆಗೆ ಪ್ರಧಾನಿ ಮೋದಿ ಫ್ರಾನ್ಸ್‌ನಲ್ಲಿ ನೆಲೆಸಿರುವ ಮೋದಿ ಅಮೆರಿಕಕ್ಕೆ ತೆರಳಲಿದ್ದಾರೆ. ಈ ಸಮಯದಲ್ಲಿ ಅವರು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾಗಲಿದ್ದಾರೆ.

### ಪ್ರಿಯಾಂಕಾ ಗಾಂಧಿ ಹೇಳಿದ್ದು ಯಾರಿಗೆ?

**ಅಮೆರಿಕನ್:** ಅವರು ಯಾವ ಗ್ರಹದಲ್ಲಿ ವಾಸಿಸುತ್ತಿದ್ದಾರೋ ಗೊತ್ತಿಲ್ಲ ಎಂದು ಸಂಸದೆ ಪ್ರಿಯಾಂಕಾ ಗಾಂಧಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಮಂಗಳವಾರ ಸಂಸತ್ತಿನಲ್ಲಿ ಬಜೆಟ್ ಮೇಲಿನ ಸಾಮಾನ್ಯ ಚರ್ಚೆ ನಡೆಯಿತು. ಈ ಸಂದರ್ಭದಲ್ಲಿ ನಿರ್ಮಲಾ ಸೀತಾರಾಮನ್ ಅವರ ಉತ್ತರಕ್ಕೆ ಪ್ರತಿಕ್ರಿಯಿಸುತ್ತಾ ತೀವ್ರ ವಾಗ್ದಾಳಿ ನಡೆಸಿದರು. ಅವರು ಯಾವ ಗ್ರಹದಲ್ಲಿ ವಾಸಿಸುತ್ತಿದ್ದಾರೋ ನನಗೆ ಗೊತ್ತಿಲ್ಲ, ಹಣದುಬ್ಬರವಿಲ್ಲ, ನಿರುದ್ಯೋಗ ಹೆಚ್ಚಿಲ್ಲ, ಬೆಲೆ ಏರಿಕೆ ಇಲ್ಲವೇ ಇಲ್ಲ ಎನ್ನುತ್ತಿದ್ದಾರೆ ಅವರಿಗೆ ಪ್ರಸ್ತುತ ಪರಿಸ್ಥಿತಿ ಬಗ್ಗೆ ತಿಳಿವಳಿಕೆ ಇಲ್ಲದಿರಬಹುದು ಎಂದು ಹೇಳಿದ್ದಾರೆ. ಲೋಕಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಗೆ ಉತ್ತರಿಸುತ್ತಾ ಸೀತಾರಾಮನ್, ಅಮೆರಿಕನ್ ಡಾಲರ್ ವಿರುದ್ಧ ಭಾರತೀಯ ರೂಪಾಯಿ ಕುಸಿತದ ಹಿಂದೆ ಹಲವು ದೇಶೀಯ ಮತ್ತು ಜಾಗತಿಕ ಕಾರಣಗಳಿವೆ ಎಂದು ಹೇಳಿದಾಗ ಪ್ರಿಯಾಂಕಾ ಈ ಹೇಳಿಕೆ ನೀಡಿದ್ದಾರೆ. ಯುನೈಟೆಡ್ ಪ್ರೋಗ್ರೆಸ್ಸಿವ್ ಅಲೈಯನ್ಸ್ (ಯುಪಿಎ) ಸರ್ಕಾರದ ಅವಧಿಯಲ್ಲಿ, ಹಣದುಬ್ಬರವು ಎರಡಂಕಿಗಳಲ್ಲಿತ್ತು, ಶೇಕಡಾ 10 ಕ್ಕಿಂತ ಹೆಚ್ಚಿತ್ತು, ಆದರೆ ಪ್ರಸ್ತುತ ಅಂತಹ ಪರಿಸ್ಥಿತಿ ಇಲ್ಲ ಎಂದು ಅವರು ಹೇಳಿದರು.

# ಬಾಲಿವುಡ್‌ನಲ್ಲಿ ಶ್ರೀಲೀಲಾಗೆ ಚಾನ್ಸ್?



ಟಾಲಿವುಡ್, ಬಾಲಿವುಡ್‌ನಲ್ಲಿ ಕನ್ನಡದ ನಟಿಯರದ್ದೇ ಹವಾ ಜೋರಾಗಿದೆ. ದೀಪಿಕಾ ಪಡುಕೋಣೆ, ರಶ್ಮಿಕಾ ಮಂದಣ್ಣ ಬಳಿಕ ಶ್ರೀಲೀಲಾ ಕೂಡ ಬಾಲಿವುಡ್‌ನಲ್ಲಿ ಶ್ರೀಲೀಲಾ ಕೂಡ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ.

ಈಗಾಗಲೇ ಶ್ರೀಲೀಲಾ ಬಾಲಿವುಡ್‌ನಲ್ಲಿ ಸೈಫ್ ಪುತ್ರ ಇಬ್ರಾಹಿಂ ಅಲಿ ಖಾನ್ ಪುತ್ರನಿಗೆ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಅದಕ್ಕಾಗಿ ಭರ್ಜರಿ ತಯಾರಿ ಕೂಡ ನಡೆಯುತ್ತಿದೆ. ಈ ಬೆನ್ನಲ್ಲೇ ಲವರ್ ಬಾಯ್ ಕಾರ್ತಿಕ್ ಆರ್ಯನ್ ಜೊತೆ ನಟಿಸಲು ಚಾನ್ಸ್ ಸಿಕ್ಕಿದೆ ಎನ್ನಲಾದ ಸುದ್ದಿಯೊಂದು ಚರ್ಚೆಗೆ ಗ್ರಾಸವಾಗಿದೆ.

ಕಳೆದ ವರ್ಷ ಕಾರ್ತಿಕ್ ಆರ್ಯನ್ ನಿವಾಸದಲ್ಲಿ ನಡೆದ ಗಣೇಶ ಹಬ್ಬ ಆಚರಣೆಯಲ್ಲಿ ಶ್ರೀಲೀಲಾ ಭಾಗಿಯಾಗಿ ಪೂಜೆ ಸಲ್ಲಿಸಿದ್ದರು. ಈ ವಿಚಾರ ಕೂಡ ನಟನ ಜೊತೆಗಿನ ಸಿನಿಮಾ ಸುದ್ದಿಗೆ ಪುಷ್ಟಿ ನೀಡುವಂತೆ ಮಾಡಿದೆ.

ಒಂದು ವೇಳೆ, ಈ ವಿಚಾರ ನಿಜವೇ ಆದಲ್ಲಿ ಕಾರ್ತಿಕ್ ಮತ್ತು ಶ್ರೀಲೀಲಾ ಜೋಡಿ ಕಮಾಲ್ ಮಾಡೋದು ಗ್ಯಾರಂಟಿ. ಈಗಾಗಲೇ ಕಾರ್ತಿಕ್ ನಟಿಸಿರುವ ರೊಮ್ಯಾಂಟಿಕ್ ಸಿನಿಮಾಗಳು ಗಲ್ಲಾಪೆಟ್ಟಿಗೆಯಲ್ಲಿ ಉತ್ತಮ ಗಳಿಕೆ ಮಾಡಿದೆ. ಹಾಗಾಗಿ ಕಾರ್ತಿಕ್ ಮತ್ತು ಶ್ರೀಲೀಲಾ ಜೋಡಿ ನೋಡಲು ಫ್ಯಾನ್ಸ್ ಕ್ಯೂರಿಯಸ್ ಆಗಿದ್ದಾರೆ.

# ಹೆಣ್ಣು ಮಕ್ಕಳ ಬಗ್ಗೆ ಚಿರಂಜೀವಿ ಹೇಳಿಕೆಗೆ ತೀವ್ರ ಆಕ್ರೋಶ



**ಎರಡನೇ ಅತ್ಯುನ್ನತ ನಾಗರೀಕ ಪ್ರಶಸ್ತಿ**

ಮೆಗಾಸ್ಟಾರ್ ಚಿರಂಜೀವಿಗೆ ಕಳೆದ ವರ್ಷ ಭಾರತದ ಎರಡನೇ ಅತ್ಯುನ್ನತ ನಾಗರೀಕ ಗೌರವವಾದ ಪದ್ಮವಿಭೂಷಣ ನೀಡಿ ಗೌರವಿಸಲಾಗಿದೆ. ಆದರೆ ಇದೀಗ ಚಿರಂಜೀವಿ ನೀಡಿರುವ ಹೇಳಿಕೆಯೊಂದಕ್ಕೆ ತೀವ್ರ ಆಕ್ರೋಶ ವ್ಯಕ್ತವಾಗಿದೆ. ಚಿರಂಜೀವಿ, ಹೆಣ್ಣು ಮಕ್ಕಳ ಬಗ್ಗೆ ನೀಡಿರುವ ಹೇಳಿಕೆ ಇದೀಗ ವಿವಾದಕ್ಕೆ ಕಾರಣವಾಗಿದೆ. ಮೆಗಾಸ್ಟಾರ್ ಚಿರಂಜೀವಿ ಅವರಿಗೆ ಕಳೆದ ವರ್ಷವಷ್ಟೆ ದೇಶದ ಎರಡನೇ ಅತ್ಯುನ್ನತ ನಾಗರೀಕ ಪ್ರಶಸ್ತಿಯಾದ ಪದ್ಮವಿಭೂಷಣ ನೀಡಿ ಗೌರವಿಸಲಾಗಿದೆ. ಚಿರಂಜೀವಿ ಅವರಿಗೆ ಪದ್ಮವಿಭೂಷಣ ಘೋಷಣೆಯಾದಾಗ ಪ್ರಶಸ್ತಿಗೆ ಅವರು ಅರ್ಹರು ಎಂದೇ ವ್ಯಾಖ್ಯಾನಿಸಲಾಗಿತ್ತು. ಚಿರಂಜೀವಿ ಅವರ ಐದು ದಶಕಗಳ ಸಿನಿಮಾ ವೃತ್ತಿ ಪಯಣ ನೋಡಿದರೂ ಇದು ನಿಜವೇ ಅನಿಸುತ್ತದೆ. ಆದರೆ ಇತ್ತೀಚೆಗೆ ಚಿರಂಜೀವಿ ನೀಡಿರುವ ಹೇಳಿಕೆಯೊಂದು ಅವರನ್ನು ವಿವಾದಕ್ಕೆ ದೂಡಿದೆ. ಸಿನಿಮಾ ಕಾರ್ಯಕ್ರಮವೊಂದರಲ್ಲಿ ವೇದಿಕೆ ಮೇಲೆ ಮಾತನಾಡುತ್ತಾ ತಮಾಷೆಯ ಧಾಟಿಯಲ್ಲಿ ಆಡಿರುವ ಮಾತಿನಿಂದ ಜನರ ಆಕ್ರೋಶಕ್ಕೆ ಗುರಿ ಆಗಿದ್ದಾರೆ ಮೆಗಾಸ್ಟಾರ್. ನಟ ಚಿರಂಜೀವಿ, ತಮ್ಮ ಆತ್ಮಿಯ ಮಿತ್ರ, ತೆಲುಗು ಚಿತ್ರರಂಗದ ಲೆಜೆಂಡರಿ ಹಾಸ್ಯನಟ ಬ್ರಹ್ಮಾನಂದಂ ಅವರು ನಟಿಸಿರುವ 'ಬ್ರಹ್ಮ ಆನಂದಂ' ಸಿನಿಮಾದ ಕಾರ್ಯಕ್ರಮದಲ್ಲಿ ಭಾಗಿ ಆಗಿದ್ದರು. ಕಾರ್ಯಕ್ರಮದಲ್ಲಿ ಮಾತನಾಡುತ್ತಾ, 'ನಮ್ಮ ಮನೆಯಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನಾನು ಮನೆಯಲ್ಲಿದ್ದಾಗ ಮಕ್ಕಳೊಟ್ಟಿಗೆ ಇದ್ದೇನೆ ಎನಿಸುವುದಿಲ್ಲ ಬದಲಿಗೆ ಲೇಡೀಸ್ ಹಾಸ್ಟೆಲ್‌ನ ವಾರ್ಡನ್ ಆಗಿದ್ದೇನೆ ಅನಿಸುತ್ತದೆ' ಎಂದು ತಮಾಷೆ ಮಾಡಿದರು. ಮುಂದುವರೆದು, 'ರಾಮ್ ಚರಣ್ ಗಂಡು ಮಗುವಿಗೆ ಜನ್ಮ ನೀಡಲಿ ಎಂಬುದು ನನ್ನ ಬಯಕೆ ಆಗಿತ್ತು. ನಮ್ಮ ತಲೆಮಾರನ್ನು ರಾಮ್ ಚರಣ್ ಮಗ ಮುಂದೆ ತೆಗೆದುಕೊಂಡು ಹೋಗಲಿ ಎಂಬುದು ಉದ್ದೇಶವಾಗಿತ್ತು. ಆದರೆ ರಾಮ್ ಚರಣ್‌ಗೆ ಮಗಳೆಂದರೆ ಪಂಚ ಪ್ರಾಣ ಹಾಗಾಗಿ ರಾಮ್ ಚರಣ್ ಮತ್ತೊಂದು ಹೆಣ್ಣು ಮಗುವಿಗೆ ತಂದೆ ಆಗುತ್ತಾನೇನೋ ಎಂಬ ಭಯ ಇದೆ' ಎಂದಿದ್ದಾರೆ ನಟ ಚಿರಂಜೀವಿ. ಚಿರಂಜೀವಿ ಹೇಳಿಕೆಗೆ ಸಾಮಾಜಿಕ ಜಾಲತಾಣದಲ್ಲಿ ತೀವ್ರ ವಿರೋಧ ವ್ಯಕ್ತವಾಗಿದೆ.

# ರಮ್ಯಾಗೆ ನಿಶ್ಚಿತಾರ್ಥ ಆಗಿದ್ಯಾ?



**ಮದುವೆ ಬಗ್ಗೆ ಸ್ಪಷ್ಟನೆ ಕೊಟ್ಟ ನಟಿ**

ಮೋಹಕತಾರೆ ರಮ್ಯಾ ಅವರು ಮದುವೆ ಬಗ್ಗೆ ಆಗಾಗ ಚರ್ಚೆಗೆ ಗ್ರಾಸವಾಗುತ್ತಲೇ ಇರುತ್ತದೆ. ಇತ್ತೀಚೆಗೆ ಈ ವಿಚಾರ ಮತ್ತೆ ಮುನ್ನೆಲೆಗೆ ಬಂದಿದೆ. ಹಾಗಾಗಿ ಸ್ವತಃ ಮದುವೆ ವದಂತಿ ಬಗ್ಗೆ ರಮ್ಯಾ ತೆರೆ ಎಳೆದಿದ್ದಾರೆ. ಸದ್ಯಕ್ಕೆ ಮದುವೆ ಬಗ್ಗೆ ನಿರ್ಧಾರ ಕೈಗೊಂಡಿಲ್ಲ ಎಂದಿದ್ದಾರೆ. ಕೈಯಲ್ಲಿರುವ ರಿಂಗ್ ಟ್ರೋಲ್ ಆಗಿರುವ ಬಗ್ಗೆ ನಟಿ ಮಾತನಾಡಿ, ನನ್ನ ರಿಂಗ್ ಯಾಕೆ ಟ್ರೋಲ್ ಆಗ್ತಿದೆ ಎಂದಿದ್ದಾರೆ. ನಾನು ಮದುವೆ ಬಗ್ಗೆ ಇನ್ನೂ ನಿರ್ಧಾರ ಮಾಡಿಲ್ಲ. ಸಿಹಿ ಊಟ ಹಾಕಿಸಬೇಕು ಅಂದರೆ ಮದುವೆನೇ ಆಗಬೇಕಿಲ್ಲ ಎಂದಿದ್ದಾರೆ.

ಇತ್ತೀಚೆಗೆ ರಕ್ಷಿತಾ ಸಹೋದರ ರಾಣಾ ಮದುವೆಗೆ ರಮ್ಯಾ ಬಂದಿದ್ದರು. ಆಗ ರಕ್ಷಿತಾಗೆ ತಮ್ಮ ಕೈಬೆರಳಿಗೆ ಧರಿಸಿದ ರಿಂಗ್ ಅನ್ನು ತೋರಿಸಿದ್ದರು. ಈ ವೇಳೆ, ರಿಂಗ್ ನೋಡಿ ರಕ್ಷಿತಾ ಸ್ಮೈಲ್ ಮಾಡಿದ್ದರು. ಈ ವಿಡಿಯೋ ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿ ಮದುವೆ ವಿಚಾರಕ್ಕೆ ಪುಷ್ಟಿ ನೀಡಿತ್ತು.

# ಅಮ್ಮನ ಬಳಿ ಬದುಕೋಕೇ ಇಷ್ಟವಿಲ್ಲ ಎಂದಿದ್ದೆ



ಒತ್ತಡ ನಿರ್ವಹಣೆ ಮತ್ತು ಪರೀಕ್ಷಾ ಆತಂಕವನ್ನು ನಿವಾರಿಸುವ ಬಗ್ಗೆ ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ವಿದ್ಯಾರ್ಥಿಗಳೊಂದಿಗೆ ಅಮೂಲ್ಯವಾದ ಸಲಹೆಗಳನ್ನು ಹಂಚಿಕೊಂಡಿದ್ದಾರೆ. ಈ ಹಿಂದೆ ಮಾನಸಿಕ ಖಿನ್ನತೆಗೆ ಒಳಗಾಗಿದ್ದ ದೀಪಿಕಾ ಪಡುಕೋಣೆ ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯದ ಬಗ್ಗೆ ಕೆಲವು ಸಲಹೆಗಳನ್ನು ನೀಡಿದ್ದಾರೆ. ಹಾಗೇ, ತಾನು ಖಿನ್ನತೆಯಿಂದ ಯಾವ ರೀತಿ ಹೊರಬಂದೆ ಎಂಬುದರ ಬಗ್ಗೆಯೂ ಮಾತನಾಡಿದ್ದಾರೆ. ಪರೀಕ್ಷೆಗಳು ಸಮೀಪಿಸುತ್ತಿರುವುದರಿಂದ ಕೇಂದ್ರ ಸರ್ಕಾರದ ಪರೀಕ್ಷಾ ಪೇ ಚರ್ಚಾ ಕಾರ್ಯಕ್ರಮದ ಭಾಗವಾಗಿ ಬಾಲಿವುಡ್ ನಟಿ ದೀಪಿಕಾ ಪಡುಕೋಣೆ ಇಂದಿನ ಎಪಿಸೋಡ್‌ನಲ್ಲಿ ಮಾನಸಿಕ ಆರೋಗ್ಯ, ಖಿನ್ನತೆ ಮುಂತಾದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ್ದಾರೆ. ಮುಂಬೈಗೆ ಬಂದು ನಟನಾ ವೃತ್ತಿಯನ್ನು ಆರಂಭಿಸಿದ ಆರಂಭಿಕ ದಿನಗಳಲ್ಲಿ ತಾನು ಯಾವ ರೀತಿಯ ಮಾನಸಿಕ ಖಿನ್ನತೆಯನ್ನು ಅನುಭವಿಸಿದ್ದೆ, ಅದರಿಂದ ಹೊರಗೆ ಬರಲಾರದೆ ಹೇಗೆ ಒದ್ದಾಡಿದ್ದೆ, ಜೀವವನ್ನೇ ಕಳೆದುಕೊಳ್ಳಲು ಯೋಚಿಸಿದ್ದೆ ಎಂಬುದೆಲ್ಲದರ ಬಗ್ಗೆಯೂ ದೀಪಿಕಾ ಮುಕ್ತವಾಗಿ ಮಾತನಾಡಿದ್ದಾರೆ. ಒಂದು ಸಮಯದಲ್ಲಿ ನಾನು ನನ್ನ ತಾಯಿಯ ಬಳಿ ನನಗೆ ಇನ್ನು ಬದುಕೋಕೇ ಇಷ್ಟವಿಲ್ಲ ಎಂದು ಹೇಳಿದ್ದನ್ನು ನೆನಪಿಸಿಕೊಂಡಿದ್ದಾರೆ. ಮಾನಸಿಕ ಆರೋಗ್ಯವೆನ್ನುವುದು ಎಲ್ಲಾರಿಗೂ ಬಹಳ ಮುಖ್ಯ. ಆದರೆ, ಬಹುತೇಕ ಜನರು ಖಿನ್ನತೆಗೆ ಒಳಗಾಗಿದ್ದರೂ ಅದನ್ನು ಮುಕ್ತವಾಗಿ ಹೇಳಿಕೊಳ್ಳುವುದಿಲ್ಲ ಮತ್ತು ಅದಕ್ಕೆ ಪರಿಹಾರ ಪಡೆಯುವುದಿಲ್ಲ ಎಂದಿದ್ದಾರೆ.

# ಕೆಜಿಎಫ್ 2 ಕೆಟ್ಟ ಸಿನಿಮಾ ಹೇಗೆ ಗೆದ್ದಿತೊ



**ಯಶ್ ಅಭಿಮಾನಿಗಳ ಕೆಣಕಿದ ವರ್ಮಾ**

ರಾಮ್ ಗೋಪಾಲ್ ವರ್ಮಾ, 'ಕೆಜಿಎಫ್ 2' ಸಿನಿಮಾ ಅತ್ಯಂತ ಕೆಟ್ಟ ಸಿನಿಮಾ, ಆದರೂ ಅದು ಭಾರಿ ಹಿಟ್ ಆಯ್ತು' ಎಂಬರ್ಥದ ಹೇಳಿಕೆ ನೀಡಿದ್ದಾರೆ. ಪಿಂಕ್‌ವಿಲ್ಲಾಗೆ ನೀಡಿರುವ ಸಂದರ್ಶನದಲ್ಲಿ ಮಾತನಾಡಿರುವ ರಾಮಗೋಪಾಲ್ ವರ್ಮಾ, 'ಒಬ್ಬ ಖ್ಯಾತ ನಿರ್ದೇಶಕ ನನಗೆ ಕರೆ ಮಾಡಿ, ಕೆಜಿಎಫ್ 2 ಸಿನಿಮಾ ನೋಡಲು ಪ್ರಯತ್ನಿಸಿದೆ ಆದರೆ ನನ್ನ ಕೈಯಲ್ಲಿ 15 ನಿಮಿಷ ಸಹ ನೋಡಲು ಆಗಲಿಲ್ಲ. 15 ನಿಮಿಷ ನೋಡಿ ನಾನು ಬ್ರೇಕ್ ತೆಗೆದುಕೊಂಡೆ ಆ ನಂತರ ಹೋಗಿ ಉಸಿರಾಟದ ವ್ಯಾಯಾಮ, ಪ್ರಾಣಾಯಮ ಮಾಡಿ ಬಂದು ಮತ್ತೆ ನೋಡಲು ಪ್ರಯತ್ನಿಸಿದೆ ಆಗಲೂ ಸಹ 15 ನಿಮಿಷ ಸಹ ನನ್ನಿಂದ ನೋಡಲು ಆಗಲಿಲ್ಲ, ಆ ನಂತರ ಮತ್ತೆ ಹೋಗಿ ಸ್ನಾನ ಮಾಡಿ ಬಂದೆ ಬಲವಂತದಿಂದ ನೋಡಿದರೂ ಇಂಟರ್ವೆಲ್ ವರೆಗೂ ಮಾತ್ರವೇ ನೋಡಲು ಸಾಧ್ಯ ಆಗಿದ್ದು. ಆದರೆ ಇಂಥಹಾ ಸಿನಿಮಾ ಅಷ್ಟು ದೊಡ್ಡ ಹಿಟ್ ಹೇಗಾಯ್ತು ಎಂದು ಅವರು ನನ್ನನ್ನು ಪ್ರಶ್ನೆ ಮಾಡಿದರು' ಎಂದಿದ್ದಾರೆ ವರ್ಮಾ. 'ಅದಾದ ಎರಡು ದಿನದ ಬಳಿಕ ನಾನು ನನ್ನ ತಂಡದವರ ಜೊತೆ ಮಾತನಾಡುತ್ತಿದ್ದಾಗ ಇದೇ ವಿಷಯ ಚರ್ಚಿಸಿದೆ. ಅಷ್ಟು ಇಲ್ಲಾಜಿಕಲ್ ಆಗಿರುವ ಸಿನಿಮಾ ಇಷ್ಟು ದೊಡ್ಡ ಹಿಟ್ ಆಗಿದ್ದು ಹೇಗೆ ಎಂದು ನಾನು ಪ್ರಶ್ನಿಸಿದೆ. ಆದರೆ ಆ ಇಲ್ಲಾಜಿಕಲ್ ಎನ್ನುವುದೇ ಕೆಜಿಎಫ್ ಪಾಲಿಗೆ ವರವಾಗಿದೆ. ಹಳೆ ಹಾಲಿವುಡ್ ಸಿನಿಮಾಗಳ ಕತೆಯೂ ಇದೆ. ಅವು ಸಹ ಇಲ್ಲಾಜಿಕಲ್ ಆದರೆ ಅವುಗಳ ಯಶಸ್ಸು ನಿಜವೇ ಆಗಿದೆ' ಎಂದಿದ್ದಾರೆ ರಾಮ್ ಗೋಪಾಲ್ ವರ್ಮಾ. ಇದೇ ಸಂದರ್ಶನದಲ್ಲಿ, ರಾಮ್ ಗೋಪಾಲ್ ವರ್ಮಾ, ರಜನೀಕಾಂತ್, ಅಮಿತಾಬ್ ಬಚ್ಚನ್ ಇನ್ನಿತರೆ ಕೆಲವು ನಟರ ನಟನಾ ಸಾಮರ್ಥ್ಯದ ಬಗ್ಗೆಯೂ ಮಾತನಾಡಿದ್ದಾರೆ.

# ಆಂಗ್ಲರನ್ನ ಬಗ್ಗುಬಡಿದ ಟೀಮ್ ಇಂಡಿಯಾ!

## ಚಾಂಪಿಯನ್ಸ್ ಟ್ರೋಫಿಗೂ ಮುನ್ನ ಭಾರತಕ್ಕೆ ಬಿಗ್ ಬೂಸ್ಟ್



ಅಹ್ಮದಾಬಾದ್‌ನಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 356 ರನ್‌ಗಳಿಸಿತ್ತು. 357 ರನ್‌ಗಳ ಬೃಹತ್ ಗುರಿಯನ್ನ ಬೆನ್ನಟ್ಟಿದ ಇಂಗ್ಲೆಂಡ್ 34.2 ಓವರ್‌ಗಳಲ್ಲಿ 214 ರನ್‌ಗಳಿಗೆ ಆಲೌಟ್ ಆಗುವ ಮೂಲಕ 142 ರನ್‌ಗಳ ಸೋಲು ಕಂಡಿತು.


ಭಾರತಕ್ಕೆ ಸರಣಿ ಜಯ

ಟಿ20 ಸರಣಿಯನ್ನ 4-1ರಲ್ಲಿ ಗೆದ್ದು ಬೀಗಿದ್ದ ಟೀಮ್ ಇಂಡಿಯಾ, ಇದೀಗ ಏಕದಿನ ಸರಣಿಯನ್ನೂ 3-0ಯಲ್ಲಿ ಗೆದ್ದು ಸಂಭ್ರಮಿಸಿದೆ. ಚಾಂಪಿಯನ್ಸ್ ಟ್ರೋಫಿಗೂ ಮುನ್ನ ಅಭ್ಯಾಸವಾಗಿ ನಡೆದ ಸರಣಿಯಲ್ಲಿ ಟೀಮ್ ಇಂಡಿಯಾ ಸಂಪೂರ್ಣ ಪ್ರಾಬಲ್ಯ ಸಾಧಿಸಿದೆ. ಬ್ಯಾಟಿಂಗ್‌ನಲ್ಲಿ ಯಾವಾಗಲೂ ಬಲಿಷ್ಠ ಎನಿಸಿಕೊಂಡಿದ್ದ ಭಾರತ ಈ ಮೂರು ಪಂದ್ಯಗಳಲ್ಲೂ ಇಂಗ್ಲೆಂಡ್ ತಂಡವನ್ನು ಆಲೌಟ್ ಮಾಡುವ ಮೂಲಕ ಬೌಲಿಂಗ್ ಸಾಮರ್ಥ್ಯವನ್ನು ಸಾಬೀತು ಪಡಿಸಿದೆ.

ಅಹ್ಮದಾಬಾದ್‌ನಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ 356 ರನ್‌ಗಳಿಸಿತ್ತು. 357 ರನ್‌ಗಳ ಬೃಹತ್ ಗುರಿಯನ್ನ ಬೆನ್ನಟ್ಟಿದ ಇಂಗ್ಲೆಂಡ್ 34.2 ಓವರ್‌ಗಳಲ್ಲಿ 214 ರನ್‌ಗಳಿಗೆ ಆಲೌಟ್ ಆಗುವ ಮೂಲಕ 142 ರನ್‌ಗಳ ಸೋಲು ಕಂಡಿತು.

ಬೃಹತ್ ಚೇಸ್ ಮಾಡಲೊರಟ ಇಂಗ್ಲೆಂಡ್ ಮೊದಲೆರಡು ಪಂದ್ಯಗಳಂತೆ ಇಂದೂ ಕೂಡ ಉತ್ತಮ ಆರಂಭ ಪಡೆಯಿತು. ಕೇವಲ 6.2 ಓವರ್‌ಗಳಲ್ಲಿ 60 ರನ್‌ಗಳ ಜೊತೆಯಾಟ ನೀಡಿತು. ಮೊದಲ ವಿಕೆಟ್ ನಂತರ ಮತ್ತೆ ಟೀಮ್ ಇಂಡಿಯಾ ಬೌಲರ್‌ಗಳು ಎದುರಾಳಿ ತಂಡಕ್ಕೆ ದೊಡ್ಡ ಜೊತೆಯಾಟ ನಡೆಸಲು ಅವಕಾಶ ನೀಡಲಿಲ್ಲ.

# ಚಾಂಪಿಯನ್ಸ್ ಟ್ರೋಫಿಗೆ 6 ಪ್ರಮುಖ ವೇಗಿಗಳು ಅಲಭ್ಯ



ಐಸಿಸಿ ಚಾಂಪಿಯನ್ಸ್ ಟ್ರೋಫಿ ಫೆಬ್ರವರಿ 19 ರಿಂದ ಶುರುವಾಗಲಿದೆ. ಈ ಟೂರ್ನಿಗೆ ಮೂರು ತಂಡಗಳ ಆರು ಪ್ರಮುಖ ವೇಗಿಗಳು ಅಲಭ್ಯರಾಗಿದ್ದಾರೆ.

ಇನ್ನು ಪಾಕಿಸ್ತಾನ್ ತಂಡದ ವೇಗದ ಬೌಲರ್ ಹ್ಯಾರಿಸ್ ರೌಫ್ ಕೂಡ ಗಾಯಗೊಂಡಿದ್ದು, ಟೂರ್ನಿ ಆರಂಭಕ್ಕೂ ಮುನ್ನ ಗುಣಮುಖರಾಗದಿದ್ದರೆ ಅವರು ಸಹ ಹೊರಗುಳಿಯಬಹುದು. ಬಹುನಿರೀಕ್ಷಿತ ಚಾಂಪಿಯನ್ಸ್ ಟ್ರೋಫಿ ಟೂರ್ನಿಯಿಂದ ಹಲವು ಆಟಗಾರರು ಹೊರಗುಳಿದಿದ್ದಾರೆ. ಹೀಗೆ ಹಿಂದೆ ಸರಿದ ಆಟಗಾರರಲ್ಲಿ ವೇಗಿಗಳೇ ಪ್ರಮುಖರು. ಅದರಲ್ಲೂ ಬಹುತೇಕ ತಂಡಗಳ ಪ್ರಮುಖ ಬೌಲರ್‌ಗಳು ಗಾಯಗೊಂಡಿದ್ದು, ಹೀಗಾಗಿ ಈ ಬಾರಿಯ ಟೂರ್ನಿಯಲ್ಲಿ ವೇಗಾಸ್ತ್ರಗಳನ್ನು ಎದುರು ನೋಡುವಂತಿಲ್ಲ. ಅದರಂತೆ ಈ ಬಾರಿಯ ಚಾಂಪಿಯನ್ಸ್ ಟ್ರೋಫಿಯಿಂದ ಹೊರಗುಳಿದಿರುವ ಪ್ರಮುಖ ವೇಗಿಗಳು ಯಾರೆಂದು ನೋಡುವುದಾದರೆ...

**ಪ್ಯಾಟ್ ಕಮಿನ್ಸ್:** ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಮುಂಬರುವ ಚಾಂಪಿಯನ್ಸ್ ಟ್ರೋಫಿಯಲ್ಲಿ ಕಣಕ್ಕಿಳಿಯುತ್ತಿಲ್ಲ. ಪಾದದ ನೋವಿನ ಕಾರಣ ಅವರು ಪಾಕಿಸ್ತಾನದಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿಯಿಂದ ಹೊರಗುಳಿದಿದ್ದಾರೆ.

**ಜೆರಾಲ್ಡ್ ಕೋಟ್ಜಿ:** ಸೌತ್ ಆಫ್ರಿಕಾ ತಂಡದ ಬಲಗೈ ವೇಗದ ಬೌಲರ್ ಜೆರಾಲ್ಡ್ ಕೋಟ್ಜಿ ಸಹ ಮುಂಬರುವ ಚಾಂಪಿಯನ್ಸ್ ಟ್ರೋಫಿಯಲ್ಲಿ ಕಾಣಿಸಿಕೊಳ್ಳುವುದಿಲ್ಲ. ತೊಡೆಸಂದು ಬಿಗಿತದ ಸಮಸ್ಯೆಯಿಂದ ಬಳಲುತ್ತಿರುವ ಅವರು ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

**ಮಿಚೆಲ್ ಸ್ಟಾರ್ಕ್:** ಆಸ್ಟ್ರೇಲಿಯಾ ತಂಡದ ಎಡಗೈ ವೇಗಿಸ್ಟಾರ್ಕ್ ಸಹ ಮುಂಬರುವ ಚಾಂಪಿಯನ್ಸ್ ಟ್ರೋಫಿಯಲ್ಲಿ ಕಣಕ್ಕಿಳಿಯುವುದಿಲ್ಲ. ವೈಯುಕ್ತಿಕ ಕಾರಣಗಳಿಂದಾಗಿ ಅವರು ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

**ಅನ್ರಿಕ್ ನೋಕಿಯ:** ಸೌತ್ ಆಫ್ರಿಕಾ ತಂಡದ ವೇಗದ ಬೌಲರ್ ಅನ್ರಿಕ್ ನೋಕಿಯ ಕೂಡ ಚಾಂಪಿಯನ್ಸ್ ಟ್ರೋಫಿಗೆ ಅಲಭ್ಯರಾಗಿದ್ದಾರೆ. ಬೆನ್ನು ನೋವಿನ ಕಾರಣ ಅವರು ಟೂರ್ನಿಯಿಂದ ಹಿಂದೆ ಸರಿದಿದ್ದಾರೆ.

**ಜೋಶ್ ಹ್ಯಾಝಲ್‌ವುಡ್:** ಆಸ್ಟ್ರೇಲಿಯಾ ತಂಡದ ಪ್ರಮುಖ ವೇಗಿ ಜೋಶ್ ಹ್ಯಾಝಲ್‌ವುಡ್ ಕೂಡ ಚಾಂಪಿಯನ್ಸ್ ಟ್ರೋಫಿಯಿಂದ ಹಿಂದೆ ಸರಿದಿದ್ದಾರೆ. ಕಣಕಾಲಿನ ನೋವಿನ ಸಮಸ್ಯೆಯಿಂದ ಬಳಲುತ್ತಿರುವ ಅವರು ಮುಂಬರುವ ಐಸಿಸಿ ಟೂರ್ನಿಯಿಂದ ಹೊರಗುಳಿಯಲು ನಿರ್ಧರಿಸಿದ್ದಾರೆ.

**ಜಸ್‌ಪ್ರೀತ್ ಬುಮ್ರಾ:** ಬೆನ್ನು ನೋವಿನ ಸಮಸ್ಯೆಯ ಕಾರಣ ಜಸ್‌ಪ್ರೀತ್ ಬುಮ್ರಾ ಸಹ ಚಾಂಪಿಯನ್ಸ್ ಟ್ರೋಫಿಯಿಂದ ಹೊರಗುಳಿದಿದ್ದಾರೆ. ಬುಮ್ರಾ ಅವರ ಅಲಭ್ಯತೆಯು ಟೀಮ್ ಇಂಡಿಯಾ ಪಾಲಿಗೆ ಹಿನ್ನಡೆಯನ್ನು ಉಂಟು ಮಾಡಲಿದೆ.

# ಶ್ರೇಯಸ್ ಅಯ್ಯರ್ ಅದ್ಭುತ ಪ್ರದರ್ಶನ



**87.50 ಸರಾಸರಿಯಲ್ಲಿ 175 ರನ್**


ವಿರಾಟ್ ಕೊಹ್ಲಿ ಗಾಯಗೊಂಡ ಕಾರಣದಿಂದಾಗಿ ಏಕದಿನ ತಂಡಕ್ಕೆ ಆಯ್ಕೆಯಾಗಿದ್ದ ಶ್ರೇಯಸ್ ಅಯ್ಯರ್, ಇಡೀ ಸರಣಿಯಲ್ಲಿ ಅದ್ಭುತ ಪ್ರದರ್ಶನ ನೀಡಿದ್ದಾರೆ. ಸರಣಿಯಲ್ಲಿ 175 ರನ್ ಗಳಿಸಿ 87.50ರ ಸರಾಸರಿ ಹಾಗೂ 122 ಕ್ಕಿಂತ ಹೆಚ್ಚು ಸ್ಟ್ರೈಕ್ ರೇಟ್ ಕಾಯ್ದುಕೊಂಡಿದ್ದಾರೆ. ವಿಶೇಷವಾಗಿ 4ನೇ ಕ್ರಮಾಂಕದಲ್ಲಿ ಅವರ ಬ್ಯಾಟಿಂಗ್ ಅದ್ಭುತವಾಗಿದೆ.

ಆಕಸ್ಮಿಕವಾಗಿ ಭಾರತ ಏಕದಿನ ತಂಡದಲ್ಲಿ ಅವಕಾಶ ಪಡೆದಿದ್ದ ಶ್ರೇಯಸ್ ಅಯ್ಯರ್, ಇದೀಗ ಸಿಕ್ಕ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ವಿರಾಟ್ ಕೊಹ್ಲಿ ಇಂಜುರಿಗೊಂಡ ಕಾರಣದಿಂದಾಗಿ ಮೊದಲ ಏಕದಿನ ಪಂದ್ಯದಲ್ಲಿ ಆಡುವ ಅವಕಾಶ ಪಡೆದ ಶ್ರೇಯಸ್ ಮೊದಲ ಪಂದ್ಯದಲ್ಲೇ ಅರ್ಧಶತಕದ ಇನ್ನಿಂಗ್ಸ್ ಆಡಿ ಮಧ್ಯಮ ಕ್ರಮಾಂಕದಲ್ಲಿ ತಾನು ಎಂತಹ ಬ್ಯಾಟ್ಸ್‌ಮನ್ ಎಂಬುದನ್ನು ಮತ್ತೊಮ್ಮೆ ಸಾಭಿತುಪಡಿಸಿದ್ದರು. ಹೀಗಾಗಿ ಅಯ್ಯರ್‌ಗೆ ಉಳಿದೆರಡು ಪಂದ್ಯಗಳಲ್ಲೂ ಆಡುವ ಅವಕಾಶ ಲಭಿಸಿತು. ಈ ಎರಡೂ ಪಂದ್ಯಗಳಲ್ಲಿ ಗಮನಾರ್ಹ ಪ್ರದರ್ಶನ ನೀಡಿದ್ದ ಅಯ್ಯರ್ ಇದೀಗ ಮೂರನೇ ಏಕದಿನ ಪಂದ್ಯದಲ್ಲಿ 64 ಎಸೆತಗಳನ್ನು ಎದುರಿಸಿದ ಅಯ್ಯರ್ 2 ಸಿಕ್ಸರ್ ಮತ್ತು 8 ಬೌಂಡರಿಗಳ ಸಹಾಯದಿಂದ 78 ರನ್ ಕಲೆಹಾಕಿದ್ದಾರೆ.

**ಸರಣಿಯಲ್ಲಿ 175 ರನ್**

ಅಹಮದಾಬಾದ್‌ನಲ್ಲಿ ನಡೆದ ಮೂರನೇ ಏಕದಿನ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ಅರ್ಧಶತಕ ಗಳಿಸಿ, ಏಕದಿನ ಸರಣಿಯಲ್ಲಿ ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದುಕೊಂಡಿದ್ದಾರೆ. ಈ ಸರಣಿಯಲ್ಲಿ 87.50 ಸರಾಸರಿಯಲ್ಲಿ 175 ರನ್ ಕಲೆಹಾಕಿರುವ ಅಯ್ಯರ್ ಅವರ ಸ್ಟ್ರೈಕ್ ರೇಟ್ 122 ಕ್ಕಿಂತ ಹೆಚ್ಚಾಗಿದೆ. ದೊಡ್ಡ ವಿಷಯವೆಂದರೆ ಅಯ್ಯರ್ ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುವಾಗ ಈ ಸ್ಟ್ರೈಕ್ ರೇಟ್ ಅನ್ನು ಕಾಯ್ದುಕೊಂಡಿರುವುದು ನಿಜಕ್ಕೂ ಅದ್ಭುತವಾಗಿದೆ.


# ಮುಂಬೈ ಇಂಡಿಯನ್ಸ್ ತಂಡಕ್ಕೆ ಆಘಾತ



ಅಲ್ಲಾಗಝನ್‌ಫರ್ ಈವರೆಗೆ 19 ಟಿ20 ಪಂದ್ಯಗಳನ್ನಾಡಿದ್ದಾರೆ. ಈ ವೇಳೆ 397 ಎಸೆತಗಳನ್ನು ಎಸೆದಿರುವ ಅವರು 30 ವಿಕೆಟ್ ಕಬಳಿಸಿದ್ದಾರೆ. ಅದು ಸಹ 6.12 ರ ಸರಾಸರಿಯಲ್ಲಿ. ಹೀಗಾಗಿಯೇ ಈ ಬಾರಿಯ ಐಪಿಎಲ್ ಮೆಗಾ ಹರಾಜಿನ ಮೂಲಕ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಬರೋಬ್ಬರಿ 4.80 ಕೋಟಿ ರೂ. ನೀಡಿ ಅಲ್ಲಾ ಗಝನ್‌ಫರ್ ಅವರನ್ನು ಖರೀದಿಸಿತ್ತು. ಇಂಡಿಯನ್ ಪ್ರೀಮಿಯರ್ ಲೀಗ್ ಆರಂಭಕ್ಕೆ ಇನ್ನು ತಿಂಗಳು ಮಾತ್ರ ಉಳಿದಿವೆ. ಆದರೆ ಅದಕ್ಕೂ ಮುನ್ನವೇ ಮುಂಬೈ ಇಂಡಿಯನ್ಸ್ ತಂಡಕ್ಕೆ ಆಘಾತ ಎದುರಾಗಿದೆ. ಮುಂಬೈ ತಂಡದಲ್ಲಿದ್ದ ಪ್ರಮುಖ ಸ್ಪಿನ್ನರ್ ಅಲ್ಲಾ ಗಝನ್‌ಫರ್ ಐಪಿಎಲ್ ಸೀಸನ್-18 ರಿಂದ ಹೊರಬಿದ್ದಿದ್ದಾರೆ. ಅಫ್ಘಾನಿಸ್ತಾನ್ ತಂಡದ ಆಟಗಾರನಾಗಿರುವ ಅಲ್ಲಾ ಗಝನ್‌ಫರ್ ಅವರನ್ನು ಈ ಬಾರಿಯ ಐಪಿಎಲ್ ಮೆಗಾ ಹರಾಜಿನ ಮೂಲಕ ಮುಂಬೈ ಇಂಡಿಯನ್ಸ್ ಫ್ರಾಂಚೈಸಿ ಬರೋಬ್ಬರಿ 4.80 ಕೋಟಿ ರೂ. ನೀಡಿ ಖರೀದಿಸಿತ್ತು. ಸ್ಪಿನ್ ಸ್ನೇಹಿ ಪಿಚ್‌ಗಳಲ್ಲಿ ರಣತಂತ್ರ ರೂಪಿಸಲೆಂದೇ ಖರೀದಿಸಲಾಗಿದ್ದ ಆಟಗಾರ ಈಗ ಟೂರ್ನಿಯಿಂದಲೇ ಹೊರಬಿದ್ದಿದ್ದಾರೆ. ಝಿಂಬಾಬ್ವೆ ವಿರುದ್ಧದ ಪಂದ್ಯದ ವೇಳೆ ಅಲ್ಲಾ ಗಝನ್‌ಫರ್ ಅವರ ಮೂಳೆ ಮುರಿತಕ್ಕೊಳಗಾಗಿದ್ದು, ಈ ಗಾಯದ ಕಾರಣ ಅವರು ಮುಂದಿನ 4 ತಿಂಗಳುಗಳ ಕಾಲ ಮೈದಾನದಿಂದ ಹೊರಗುಳಿಯಲಿದ್ದಾರೆ.

# ಯುಎಸ್ ಓಪನ್ ಟೆನಿಸ್‌ನಲ್ಲಿ ಮಹತ್ವದ ಬದಲಾವಣೆ!

ಈ ಬಾರಿ ಯುಎಸ್ ಓಪನ್ ಗ್ರ್ಯಾನ್‌ಸ್ಲಾಂ ಟೆನಿಸ್ ಟೂರ್ನಿಯಲ್ಲಿ ಹಲವು ಮಹತ್ವದ ಬದಲಾವಣೆಗಳು ಕಂಡುಬರಲಿವೆ. ಟೂರ್ನಿ ಆ.24ರಿಂದ ಆರಂಭಗೊಳ್ಳಲಿದ್ದರೂ, ಮಿಶ್ರ ಡಬಲ್ಸ್ ಸ್ಪರ್ಧೆಗಳು ಒಂದು ವಾರ ಮೊದಲೇ ಅಂದರೆ ಆ.19ಕ್ಕೆ ಶುರುವಾಗಲಿದೆ. ಆಸಕ್ತಿದಾಯಕ ವಿಚಾರ ಏನೆಂದರೆ ಕೇವಲ 2 ದಿನ(ಆ.19, 20)ಗಳಲ್ಲೇ ಮಿಶ್ರ ಡಬಲ್ಸ್ ಸ್ಪರ್ಧೆ ಮುಕ್ತಾಯಗೊಳ್ಳಲಿದೆ. ಇನ್ನು, ಗೇಮ್ಸ್‌ನ ಅಂಕದಲ್ಲೂ ಬದಲಾವಣೆ ಇರಲಿದೆ. ಸಾಮಾನ್ಯವಾಗಿ 6 ಗೇಮ್‌ಗಳ 3 ಸೆಟ್ ಆಡಿಸಲಾಗುತ್ತಿದ್ದರೂ, ಈ ಬಾರಿ 4 ಗೇಮ್‌ಗಳ ಪಂದ್ಯ ನಡೆಸಲು ನಿರ್ಧರಿಸಲಾಗಿದೆ. 2 ಸೆಟ್‌ಗಳ ಬಳಿಕ ಟೈ ಆದರೆ 10 ಅಂಕಗಳ ಟೈ ಬ್ರೇಕರ್ ಆಡಿಸಲಾಗುತ್ತದೆ. ಆದರೆ ಫೈನಲ್ ಪಂದ್ಯದಲ್ಲಿ 6 ಗೇಮ್‌ಗಳ 3 ಸೆಟ್ ಇರಲಿವೆ. ಕಳೆದ ಬಾರಿ 32 ತಂಡಗಳು ಆಡಿದ್ದರೆ, ಈ ಬಾರಿ ಕೇವಲ 16 ತಂಡಗಳು ಸ್ಪರ್ಧಿಸಲಿವೆ. ಟೂರ್ನಿಯ ನಗದು ಬಹುಮಾನದಲ್ಲೂ ಹೆಚ್ಚಳ ಮಾಡಲಾಗಿದೆ. ಈ ಬಾರಿ ಮಿಶ್ರ ಡಬಲ್ಸ್ ವಿಜೇತರಿಗೆ 1 ಮಿಲಿಯನ್ ಯುಎಸ್ ಡಾಲರ್(8.6 ಕೋಟಿ ರು.) ಸಿಗಲಿದೆ. ಕಳೆದ ಬಾರಿ 1.73 ಕೋಟಿ ನೀಡಲಾಗಿತ್ತು.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966